ಗುರುವಾರ, ಅಕ್ಟೋಬರ್ 31, 2024 | ಬೆಂಗಳೂರು | ₹ 7.00 | ಸಂಪುಟ 77| ಸಂಚಿಕೆ 302 | ಪುಟ 20


www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಆರಂಭ



ಆಳ-ಅಗಲ ಹಿಂದೂ ಸ್ಮಶಾನವೂ ಪಹಣಿಯಲ್ಲಿ 'ವಕ್ಫ್ ಆಸ್ತಿ' 9

ದಲಿತರ ಮೇಲೆ ದೌರ್ಜನ್ಯ ಮರಕುಂಬಿ ಪಾಠ

ಕಮಲಾ ಪರ ಭಾರತೀಯ-ಅಮೆರಿಕನ್ನರ ಒಲವು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,942	24,340	₹83,530 (ಬೆಂಗಳೂರು)	₹1.04ಲಕ್ಷ (ಬೆಂಗಳೂರು)	84.08

ಉಪ ಚುನಾವಣೆ: ಹಣಾಹಣಿಗೆ ಕಣ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಪತ್ರ ವಾಪಸ್ ಪಡೆಯುವ ಅವಧಿ ಬುಧವಾರ ಮುಕ್ತಾಯವಾಗಿದ್ದು, ಅಂತಿಮವಾಗಿ ಉಳಿದ ಅಭ್ಯರ್ಥಿಗಳ ಸ್ಪಷ್ಟ ಚಿತ್ರಣದೊಂದಿಗೆ ಮೂರೂ ಕ್ಷೇತ್ರಗಳ ಹಣಾಹಣಿಗೆ ಉಪ ಚುನಾವಣಾ ಕಣ ಸಜ್ಜುಗೊಂಡಿದೆ.

ಶಿಗ್ಗಾವಿ ಕ್ಷೇತ್ರದಲ್ಲಿ ಮಾಜಿ ಶಾಸಕ ಸೈಯದ್ ಅಜ್ಜಂಪೀರ್ ಖಾದ್ರಿ ನಾಮಪತ್ರ ಹಿಂಪಡೆಯುವ ಮೂಲಕ ಕಾಂಗ್ರೆಸ್ ವಿರುದ್ಧದ ಬಂಡಾಯ ಶಮನವಾಗಿದೆ. ಬೆಂಗಳೂರಿನಿಂದ ಮಂಗಳವಾರ ರಾತ್ರಿ ಹುಬ್ಬಳ್ಳಿಗೆ ಬಂದಿದ್ದ ಖಾದ್ರಿ, ಸಚಿವರಾದ ಜಮೀರ್ ಅಹ್ಮದ್ ಖಾನ್ ಹಾಗೂ ಶಿವಾನಂದ ಪಾಟೀಲ ಜೊತೆಯಲ್ಲಿ ಬುಧವಾರ ಬೆಳಿಗ್ಗೆ ಚುನಾವಣಾಧಿಕಾರಿ ಕಚೇರಿಗೆ ಬಂದು ನಾಮಪತ್ರ ವಾಪಸ್ ಪಡೆದರು.

ಕ್ಷೇತ್ರ	ಕಣದಲ್ಲಿರುವ ಅಭ್ಯರ್ಥಿಗಳು
ಚನ್ನಪಟ್ಟಣ	31
ಸಂಡೂರು	6
ಶಿಗ್ಗಾವಿ	8

ನವೆಂಬರ್ **13** ಮತದಾನ
ನವೆಂಬರ್ **23** ಮತ ಎಣಿಕೆ

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಪೂರ್ವ ಲಡಾಖ್‌ನಲ್ಲಿ ಗಸ್ತು ಶೀಘ್ರ ಆರಂಭ: ಒಪ್ಪಂದ ಜಾರಿ ಯಶಸ್ವಿ

ಸೇನೆ ವಾಪಸಾತಿ ಪೂರ್ಣ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಭಾರತ ಮತ್ತು ಚೀನಾ ನಡುವೆ ಸಂಘರ್ಷಕ್ಕೆ ಕಾರಣವಾಗಿದ್ದ ಡೆಮ್‌ಚೋಕ್ ಮತ್ತು ಡೆಪ್ಸಾಂಗ್ ಬಯಲಿನಲ್ಲಿ ಎರಡೂ ದೇಶಗಳು ನಿಯೋಜಿಸಿದ್ದ ಸೇನೆಯನ್ನು ಹಿಂದಕ್ಕೆ ಪಡೆಯುವ ಕಾರ್ಯಾಚರಣೆ ಪೂರ್ಣಗೊಂಡಿದೆ ಎಂದು ಭಾರತೀಯ ಸೇನೆಯ ಮೂಲಗಳು ಬುಧವಾರ ತಿಳಿಸಿವೆ.

ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ಗಸ್ತು ನಡೆಸುವ ಮತ್ತು ಸೇನೆಯ ವಾಪಸಾತಿ ಸಂಬಂಧ ಉಭಯ ದೇಶಗಳ ನಡುವೆ ಏರ್ಪಟ್ಟ ಒಪ್ಪಂದದ ಅನುಸಾರ ಈ ಪ್ರಕ್ರಿಯೆ ನಡೆದಿದೆ.

ಈ ರೀತಿಯಲ್ಲಿ ಒಮ್ಮತ ಸಾಧ್ಯವಾದ ಬಳಿಕ, ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ರಷ್ಯಾದ ಕಜಾನ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಸೇನೆ ಹಿಂದಕ್ಕೆ ಪಡೆದು ಗಸ್ತು ಆರಂಭಿಸಲು ಇಬ್ಬರೂ ನಾಯಕರು ಒಪ್ಪಿಕೊಂಡಿದ್ದರು.

ಗಸ್ತು ತಿರುಗುವಿಕೆಗೆ ಸಂಬಂಧಿಸಿ ಎರಡೂ ದೇಶಗಳ ನಡುವೆ ಸಮನ್ವಯ ಇರಬೇಕು. ಗಸ್ತು ಸಂದರ್ಭದಲ್ಲಿ ಪರಸ್ಪರರು ಮುಖಾಮುಖಿ ಆಗದಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಆ ಬಳಿಕವೇ ಗಸ್ತು ಆರಂಭವಾಗಬೇಕು ಎಂದು ಎರಡೂ ಕಡೆಯವರು ತೀರ್ಮಾನಿಸಿದ್ದರು. ಭಾರತದ ಕಡೆಯಲ್ಲಿ ಇದೇ 31ರಂದು ಗಸ್ತು ಆರಂಭವಾಗುವ ಸಾಧ್ಯತೆ ಇದೆ.

ಈ ಬೆಳವಣಿಗೆಯ ಬೆನ್ನಿಗೇ, ಭಾರತದ ಮೂರೂ ಸೇನೆಗಳು ಪೂರ್ವಿ ಪ್ರಹಾರ್ ಎಂಬ ಸಮರಾಭ್ಯಾಸವನ್ನು ನಡೆಸಲಿವೆ. ಇದು ನವೆಂಬರ್ 8ರಿಂದ ನಡೆಯಲಿದೆ. ಪಶ್ಚಿಮ ಬಂಗಾಳ ಮತ್ತು ಅರುಣಾಚಲ ಪ್ರದೇಶದಲ್ಲಿ ಈ ಕವಾಯತು ನಡೆಯಲಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಸೈನಿಕರ ಜೊತೆಗೆ ಗುರುವಾರ ದೀಪಾವಳಿ ಆಚರಿಸಲಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಎರಡೂ ದೇಶಗಳ ನಡುವೆ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು. ಗಾಲ್ವನ್ ಕಣಿವೆಯಲ್ಲಿ ಹಿಂಸಾತ್ಮಕ ಮುಖಾಮುಖಿಯು ನಡೆದಿತ್ತು. 1962ರ ಯುದ್ಧದ ನಂತರ ಇದುವೇ ಅತ್ಯಂತ ದೊಡ್ಡ ಮುಖಾಮುಖಿಯಾಗಿತ್ತು. ಈಗ, ಸಂಘರ್ಷಕ್ಕೆ ಕಾರಣವಾದ ಕೊನೆಯ ಎರಡು ಪ್ರದೇಶಗಳಾದ ಡೆಮ್‌ಚೋಕ್ ಮತ್ತು ಡೆಪ್ಸಾಂಗ್ ವಿಚಾರದಲ್ಲಿಯೂ ಒಮ್ಮತಕ್ಕೆ ಬರಲು ಸಾಧ್ಯವಾಗಿದೆ.

ವಾರದ ಕಾರ್ಯಾಚರಣೆ

ಸೇನೆ ವಾಪಸಾತಿ ಭಾಗವಾಗಿ ಸೇನೆ, ಶಸ್ತ್ರಾಸ್ತ್ರ, ಯುದ್ಧೋಪಕರಣಗಳು ಮತ್ತು ಡೇರೆಗಳನ್ನು 2020ರ ಏಪ್ರಿಲ್‌ಗಿಂತ ಹಿಂದೆ ಇದ್ದ ಸ್ಥಳಗಳಿಗೆ ಸಾಗಿಸಬೇಕು. ಈ ಕಾರ್ಯಾಚರಣೆಗೆ ವಾರಕ್ಕೂ ಹೆಚ್ಚು ಸಮಯ ಬೇಕಾಯಿತು.

ಸೇನೆ ವಾಪಸಾತಿಯು ಇದೇ 29ರೊಳಗೆ ಪೂರ್ಣಗೊಳ್ಳಬಹುದು ಎಂದು ಸೇನೆಯ ಮೂಲಗಳು 25ರಂದು ಹೇಳಿದ್ದವು. ಸೇನೆ ವಾಪಸಾತಿಯು ಪೂರ್ಣಗೊಂಡಿದೆ ಎಂಬುದನ್ನು ದೃಢಪಡಿಸಿಕೊಂಡ ನಂತರ ಗಸ್ತು ಆರಂಭ ಆಗಲಿದೆ. ಅದಕ್ಕೂ ಮುಂಚೆ ಕಮಾಂಡರ್‌ಗಳ ಮಟ್ಟದ ಸಭೆ ನಡೆಯಲಿದೆ.

ಸಿಹಿ ವಿನಿಮಯ ಮತ್ತೆ ಶುರು

ಹಬ್ಬದ ಸಂದರ್ಭಗಳಲ್ಲಿ ಸಿಹಿ ವಿನಿಮಯದ ಪರಂಪರೆ ಮತ್ತೆ ಆರಂಭವಾಗಲಿದೆ. ಭಾರತದ ಯೋಧರು ಚೀನಾ ಸೈನಿಕರಿಗೆ ದೀಪಾವಳಿಯ ಪ್ರಯುಕ್ತ ಸಿಹಿಯನ್ನು ಗುರುವಾರ ನೀಡಲಿದ್ದಾರೆ. ಎರಡೂ ಸೇನೆಗಳ ನಡುವೆ ವಾಸ್ತವ ನಿಯಂತ್ರಣ ರೇಖೆಯಲ್ಲಿ ಸಂಘರ್ಷ ಆರಂಭವಾದ ಬಳಿಕ ಸಿಹಿ ಹಂಚಿಕೆಯನ್ನು ನಿಲ್ಲಿಸಲಾಗಿತ್ತು.

'ಕ್ರಮಬದ್ಧವಾಗಿ ಸೇನೆ ಹಿಂದಕ್ಕೆ'

ಬೀಜಿಂಗ್ (ಪಿಟಿಐ): ಲಡಾಖ್‌ನಲ್ಲಿ ವಾಸ್ತವ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ನಿಯೋಜಿಸಿರುವ ಸೇನಾಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ವಿಚಾರವಾಗಿ ಭಾರತ ಮತ್ತು ಚೀನಾ ಕೈಗೊಂಡಿರುವ ನಿರ್ಣಯಗಳನ್ನು ಅನುಷ್ಠಾನಕ್ಕೆ ತರುವ ಕೆಲಸವು 'ಕ್ರಮಬದ್ಧ-ವಾಗಿ' ಆಗುತ್ತಿದೆ ಎಂದು ಚೀನಾ ಹೇಳಿದೆ.

ಗಡಿಯ ವಿಚಾರವಾಗಿ ಭಾರತ ಮತ್ತು ಚೀನಾ ನಿರ್ಣಯ ಕೈಗೊಂಡಿವೆ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಭಾರತ ಮತ್ತು ಚೀನಾದ ಯೋಧರು ಈಗ ನಿರ್ಣಯಗಳನ್ನು ಕ್ರಮಬದ್ಧವಾಗಿ ಅನುಷ್ಠಾನಕ್ಕೆ ತರುತ್ತಿದ್ದಾರೆ ಎಂದು ಜಿಯಾನ್ ತಿಳಿಸಿದರು. ಆದರೆ ಅವರು ಹೆಚ್ಚಿನ ವಿವರ ನೀಡಲಿಲ್ಲ.



ದೀಪೋತ್ಸವ ದೀಪಾವಳಿ ಹಬ್ಬದ ಮುನ್ನಾದಿನವಾದ ಬುಧವಾರ, ಅಯೋಧ್ಯೆಯಲ್ಲಿ ದೀಪೋತ್ಸವದ ಅಂಗವಾಗಿ ಸರಯೂ ನದಿ ತೀರದಲ್ಲಿ ಘಾಟ್ ಬಳಿ ನಡೆದ ಲೇಸರ್ ಪ್ರದರ್ಶನದ ಪಕ್ಷಿನೋಟ –ಪಿಟಿಐ ಚಿತ್ರ

ವಿವರ 14

'ಶಕ್ತಿ' ಮರುಪರಿಶೀಲನೆ ಶಿವಕುಮಾರ್ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳಲ್ಲಿ ಒಂದಾದ 'ಶಕ್ತಿ' ಯೋಜನೆಯನ್ನು ಮರುಪರಿಶೀಲನೆಗೆ ಒಳಪಡಿಸುವ ಸುಳಿವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬುಧವಾರ ನೀಡಿದರು.

ವಿಧಾನಸೌಧದ ಮುಂಭಾಗ ಐರಾವತ ಕ್ಲಬ್‌ಕ್ಲಾಸ್–2.0 ನೂತನ ಬಸ್‌ಗಳನ್ನು ಸಾರ್ವಜನಿಕ ಸೇವೆಗೆ ಬಿಡುಗಡೆ ಮಾಡಿದ ನಂತರ ಮಾತನಾಡಿದ ಅವರು, 'ಶಕ್ತಿ ಯೋಜನೆಯನ್ನು ಮರುಪರಿಶೀಲನೆಗೆ ಒಳಪಡಿಸಬೇಕು ಎಂದು ಹಲವು ಮಹಿಳೆಯರು ಸಾಮಾಜಿಕ ಜಾಲತಾಣ 'ಎಕ್ಸ್' ಹಾಗೂ ಇ-ಮೇಲ್ ಮೂಲಕ ಮನವಿ ಮಾಡಿದ್ದಾರೆ' ಎಂದು ಮಾಹಿತಿ ನೀಡಿದರು.

'ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವಾಗ ನಾವು ಹಣ ಕೊಡಲು ಮುಂದಾದರೂ ನಿರ್ವಾಹಕರು ನಿರಾಕರಿಸುತ್ತಾರೆ; ಆರ್ಥಿಕವಾಗಿ ಅನುಕೂಲ ಸ್ಥಿತಿಯಲ್ಲಿ ಇರುವ ಕಾರಣ ಟಿಕೆಟ್ ತೆಗೆದುಕೊಳ್ಳುವ ಶಕ್ತಿಯಿದ್ದು, ನಮಗೆ ಉಚಿತ ಪ್ರಯಾಣ ಬೇಡವೆಂದು ಶೇ 5ರಿಂದ 10ರಷ್ಟು ಮಹಿಳೆಯರು ಹೇಳುತ್ತಿದ್ದಾರೆ. ಈ ಕುರಿತು ಪ್ರತ್ಯೇಕ ಸಭೆ ಕರೆದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರ ಜತೆ ಚರ್ಚಿಸಲಾಗುವುದು' ಎಂದರು.

'ಕೆಎಸ್‌ಆರ್‌ಟಿಸಿ ಆರಂಭವಾದಾಗ ಕೇವಲ 120 ಬಸ್‌ಗಳು ಇದ್ದವು, ಇಂದು 24,282 ಬಸ್‌ಗಳು ಇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 6,200 ಬಸ್ ಖರೀದಿಗೆ ಸಮ್ಮತಿ ನೀಡಿದೆ. ಅವುಗಳಲ್ಲಿ 3,400 ಬಸ್‌ಗಳನ್ನು ಖರೀದಿಸಲಾಗಿದೆ. 1.80 ಕೋಟಿ ಜನರು ಪ್ರಯಾಣಿಸುತ್ತಿದ್ದಾರೆ. ಸುಮಾರು ಒಂಬತ್ತು ಸಾವಿರ ಚಾಲಕರು ಹಾಗೂ ನಿರ್ವಾಹಕರ ನೇಮಕಾತಿಗೂ ಚಾಲನೆ ನೀಡಲಾಗಿದೆ' ಎಂದು ಉಪ ಮುಖ್ಯಮಂತ್ರಿ ಹೇಳಿದರು.

'ಶಾಸಕನಾಗಿದ್ದ ಆರಂಭದಲ್ಲಿ ಎರಡು ಮೂರು ಬಾರಿ ಐರಾವತ ಬಸ್‌ನಲ್ಲಿ ಪ್ರಯಾಣ ಮಾಡಿದ್ದೆ. ಚುನಾವಣಾ ಸಮಯದಲ್ಲಿ ಪ್ರಚಾರಕ್ಕಾಗಿ ಐರಾವತ ಬಸ್‌ಗಳನ್ನು ಬಳಸಲಾಗುತ್ತಿತ್ತು. ಅವಕಾಶ ಸಿಕ್ಕಾಗ ಮತ್ತೆ ಪ್ರಯಾಣ ಮಾಡುವೆ' ಎಂದರು.

15ನೇ ಪುಟ ನೋಡಿ

69 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

ಬೆಂಗಳೂರು: ಉಚಿತವಾಗಿ ಹತ್ತು ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿರುವ ರಾಯಚೂರಿನ ಮಲ್ಲಮ್ಮ ಸೂಲಗಿತ್ತಿ, ಇತ್ತೀಚೆಗೆ ಕೊಚ್ಚಿ ಹೋಗಿದ್ದ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ಮರಳಿ ಅಳವಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನೀರಾವರಿ ಇಲಾಖೆ ನಿವೃತ್ತ ಅಧಿಕಾರಿ ಕನ್ನಯ್ಯ ನಾಯ್ಡು, ಸಾಹಿತ್ಯ ಕ್ಷೇತ್ರದಿಂದ ಎಂ. ವೀರಪ್ಪ ಮೊಯಿಲಿ, ಬಿ.ಟಿ. ಲಲಿತಾ ನಾಯಕ್, ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಸೇರಿದಂತೆ 69 ಸಾಧಕರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ. 13

ಅಮಿತ್ ಶಾ ಕೈವಾಡ: ಕೆನಡಾ ಆರೋಪ

ಒಟ್ಟಾವಾ (ಎಪಿ, ರಾಯಿಟರ್ಸ್): ಕೆನಡಾ ನೆಲದಲ್ಲಿ ಸಿಖ್ ಪ್ರತ್ಯೇಕತಾವಾದಿಗಳನ್ನು ಹತ್ಯೆಗೈಯುವ ಸಂಚಿನಲ್ಲಿ ಭಾರತದ ಗೃಹ ಸಚಿವ ಅಮಿತ್ ಶಾ ಅವರ ಕೈವಾಡವಿದೆ ಎಂದು ಕೆನಡಾ ಆರೋಪಿಸಿದೆ. 14

ಮಹಾರಾಷ್ಟ್ರ: ಬಂಡಾಯದ ಬಿಸಿ 11

ಬಳ್ಳಾರಿ ಜೈಲಿನಿಂದ ದರ್ಶನ್ ಬಿಡುಗಡೆ

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿದ್ದ ನಟ ದರ್ಶನ್‌ಗೆ ಹೈಕೋರ್ಟ್ ಚಿಕಿತ್ಸೆಗಾಗಿ ಆರು ವಾರ ಮಧ್ಯಂತರ ಜಾಮೀನು ನೀಡಿದ ಬೆನ್ನಲ್ಲೇ ಅವರು ಬುಧವಾರ ಸಂಜೆ ಬಿಡುಗಡೆಯಾಗಿ, ಬೆಂಗಳೂರು ತಲುಪಿದರು.



ಜೈಲಿನಿಂದ ಹೊರಕ್ಕೆ ಬರುವಾಗ ಕುಂಟುತ್ತಿದ್ದ ದರ್ಶನ್ ಅವರಿಗೆ ಸಂಬಂಧಿಯೊಬ್ಬರು ನೆರವಾದರು.

ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿನ ವಿಶೇಷ ಆತಿಥ್ಯ ಮತ್ತು ಅವರು ಫೋನ್ ಬಳಸಿದ್ದಾರೆ ಎಂಬ ಆರೋಪಗಳ ಕಾರಣ ಆಗಸ್ಟ್ 29ರಂದು ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಸರಿಯಾಗಿ ಎರಡು ತಿಂಗಳಿಗೆ ಅವರ ಬಿಡುಗಡೆಯಾಗಿದೆ. ಬಿಡುಗಡೆಗೂ ಮುನ್ನ ಅವರು ತಮ್ಮ ಪಿಪಿಸಿ (ಪ್ರಿಸನರ್ಸ್ ಪ್ರೈವೇಟ್ ಕ್ಯಾಶ್) ₹35 ಸಾವಿರ ಬಿಡಿಸಿಕೊಂಡಿದ್ದಾರೆ.

ದರ್ಶನ್ ಪತ್ನಿ ವಿಜಯಲಕ್ಷ್ಮಿ ಬೆಳಿಗ್ಗೆಯೇ ಬಳ್ಳಾರಿ ನಗರಕ್ಕೆ ಬಂದು ಹೋಟೆಲ್‌ವೊಂದರಲ್ಲಿ ಉಳಿದಿದ್ದರು. ಜಾಮೀನು ಆದೇಶ ಹೊರಬೀಳುತ್ತಲೇ 11.30ಕ್ಕೆ ಬಳ್ಳಾರಿ ಜೈಲಿಗೆ ಬಂದ ಅವರು, 25 ನಿಮಿಷ ದರ್ಶನ್ ಜೊತೆ ಚರ್ಚಿಸಿದರು.

ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜೈಲಿನ ಬಳಿ ಜಮಾಯಿಸುವ ಮುನ್ಸೂಚನೆ ಇದ್ದುದರಿಂದ ಪೊಲೀಸರು ಭದ್ರತೆಯನ್ನು ಹೆಚ್ಚಿಸಿದ್ದರು. ನಗರ ಡಿಎಸ್‌ಪಿ ಚಂದ್ರಕಾಂತ ನಂದಾರೆಡ್ಡಿ ಸ್ವತಃ ಮುಂದೆ ನಿಂತು ಭದ್ರತೆಯ ಮೇಲೆ ನಿಗಾ ವಹಿಸಿದ್ದರು.

ಇನ್ನಷ್ಟು ಸುದ್ದಿಗಳು 3 13


Kaleesuwari
50 Years of Health & Happiness
Gold Winner®
ಕರ್ನಾಟಕದ
ಏಕಮಾತ್ರ ವಿನ್ನರ್!
ದೀಪಾವಳಿ ಹಬ್ಬದ ಶುಭಾಶಯಗಳು
ಜಾಗತಿಕವಾಗಿ
ಅನುಮೋದಿಸಲ್ಪಟ್ಟದೆ
USFDA ಯೊಂದಿಗೆ ನೋಂದಾಯಿತ
ಹಗುರ ಮತ್ತು
ರುಚಿಕರ
50+ ವರ್ಷಗಳಿಂದ
ವಿಶ್ವಾಸಪಾತ್ರ
ಕೊಲೆಸ್ಟ್ರಾಲ್
ಟೆನ್ಶನ್ ಇಲ್ಲ
ವಿಟಮಿನ್ ಎ, ಡಿ, ಇ
ಆರೋಗ್ಯ ಭರಿತ
80 QUALITY CHECKS
SUPER SAVER PACK
ಆರ್ಡರ್ ಮಾಡಿ @ www.kaleesuwari.com

ಬಸ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಕಳುಹಿಸುತ್ತಿದ್ದ ಮದ್ಯವರ್ತಿಗಳು

₹5 ಲಕ್ಷ ಮೌಲ್ಯದ ಗೋವಾ ಮದ್ಯ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಾದಿಂದ ಅಕ್ರಮವಾಗಿ ಮದ್ಯ ತರಿಸಿಕೊಂಡು ಮನೆಯಲ್ಲಿ ದಾಸ್ತಾನು ಮಾಡಿಕೊಂಡು, ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿ ಪುರುಷೋತ್ತಮನನ್ನು ಅಬಕಾರಿ ಅಧಿಕಾರಿಗಳು ಬಂಧಿಸಿದ್ದಾರೆ. ವಿವಿಧ ಬ್ರ್ಯಾಂಡ್‌ನ ₹5 ಲಕ್ಷ ಮೌಲ್ಯದ ಮದ್ಯವನ್ನು ಆರೋಪಿಯಿಂದ ಜಪ್ತಿ ಮಾಡಲಾಗಿದೆ.

ಅಬಕಾರಿ ಇಲಾಖೆಯ ದಕ್ಷಿಣ ವಿಭಾಗದ ಜಂಟಿ ಆಯುಕ್ತರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ.

‘ಆರೋಪಿ ಮನೆಯಲ್ಲಿ 18 ಬ್ರ್ಯಾಂಡ್‌ಗಳ 144 ಬಾಟಲ್‌ಗಳಲ್ಲಿ 151.750 ಲೀಟರ್ ಮದ್ಯ ದೊರೆತಿದೆ. ಎಲ್ಲ ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಅಬಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

‘ಗೋವಾದ ಮದ್ಯದ ಅಂಗಡಿಯವರ ಜತೆಗೆ ಆರೋಪಿ ಸಂಪರ್ಕ ಹೊಂದಿದ್ದ. ಕಡಿಮೆ ಬೆಲೆಗೆ ಮದ್ಯ ತರಿಸಿಕೊಳ್ಳುತ್ತಿದ್ದ. ಗೋವಾದ ಮದ್ಯವರ್ತಿಗಳು ಬಸ್ ಮೂಲಕ ಮದ್ಯದ ಬಾಟಲ್‌ಗಳನ್ನು ಕಳುಹಿಸುತ್ತಿದ್ದರು. ಆರೋಪಿ ಅವುಗಳನ್ನು ಮನೆಯಲ್ಲಿ ಸಂಗ್ರಹಿಸಿಕೊಂಡು ಸ್ಥಳೀಯರಿಗೆ ಮಾರಾಟ ಮಾಡುತ್ತಿದ್ದ’ ಎಂದು ಮಾಹಿತಿ ನೀಡಿದ್ದಾರೆ.

‘ಬನಶಂಕರಿ ಎರಡನೇ ಹಂತದಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿಕೊಂಡು ಆರೋಪಿ ನಿಂತಿದ್ದ. ಆತನ ಚಲನವಲನ ಅನುಮಾನ ಮೂಡಿಸಿತ್ತು. ಈ ವೇಳೆ ಬ್ಯಾಗ್ ತೆಗೆದು ಪರಿಶೀಲಿಸಿದಾಗ ‘ಗೋವಾದಲ್ಲಿ ಮಾತ್ರ ಮಾರಾಟಕ್ಕೆ’ ಎಂದು ನಮೂದಿಸಿದ್ದ ಮದ್ಯದ ಬಾಟಲಿಗಳು ಸಿಕ್ಕಿದ್ದವು. ನಂತರ, ಆರೋಪಿಯ ಮನೆ ಮೇಲೆ ದಾಳಿ ನಡೆಸಿ ಪರಿಶೀಲಿಸಲಾಯಿತು’ ಎಂದು ಅಬಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಅಡಿಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ.



ಜಪ್ತಿ ಮಾಡಿರುವ ಮದ್ಯದ ಬಾಟಲ್‌ಗಳನ್ನು ಸಿಬ್ಬಂದಿ ಪ್ರದರ್ಶಿಸಿದರು

ಜಗಳ ಬಿಡಿಸಿದ್ದಕ್ಕೆ ಹಲ್ಲೆ: ಕೊಲೆಗೆ ಯತ್ನ

ಬೆಂಗಳೂರು: ಗಲಾಟೆ ಮಾಡಿಕೊಳ್ಳದಂತೆ ಬುದ್ಧಿವಾದ ಹೇಳಿದ್ದ ಇಬ್ಬರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಗೋಪಾಲನಗರ ನಿವಾಸಿಗಳಾದ ವಿಷ್ಣು (30) ಮತ್ತು ವಿಶ್ವ (32) ಬಂಧಿತರು.

ಆರೋಪಿಗಳು ಅ.28ರಂದು ತಡರಾತ್ರಿ 12.30ರ ಸುಮಾರಿಗೆ ಹೇಮಂತ್ ಮತ್ತು ಶ್ರೀನಿವಾಸ್ ಎಂಬುವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದರು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಹಲ್ಲೆಗೆ ಒಳಗಾದ ಹೇಮಂತ್ ಮತ್ತು ಶ್ರೀನಿವಾಸ್ ಕೂಲಿ ಕೆಲಸ ಮಾಡುತ್ತಿದ್ದರು. ಅ.28ರಂದು ರಾತ್ರಿ 12.30ರ ಸುಮಾರಿಗೆ ರಾಜಗೋಪಾಲ ನಗರ ಮುಖ್ಯರಸ್ತೆಯಲ್ಲಿ ಮದ್ಯದ ಅಮಲಿನಲ್ಲಿ ನಡೆದು ತೆರಳುತ್ತಿದ್ದರು. ಮಾರ್ಗದಲ್ಲಿ ಇಬ್ಬರೂ ಗಲಾಟೆ ಮಾಡಿಕೊಳ್ಳುತ್ತಿದ್ದರು. ಅದೇ ಮಾರ್ಗದಲ್ಲಿ ಬರುತ್ತಿದ್ದ ಆರೋಪಿಗಳಾದ ವಿಷ್ಣು ಮತ್ತು ವಿಶ್ವ ಅವರು ಹೇಮಂತ್ ಮತ್ತು ಶ್ರೀನಿವಾಸ್ ಅವರ ಜಗಳ ಬಿಡಿಸಿ ಬುದ್ಧಿಮಾತು ಹೇಳಿದ್ದರು.

ಇದರಿಂದ ಆಕ್ರೋಶಗೊಂಡ ಇಬ್ಬರು, ಆರೋಪಿಗಳ ಮೇಲೆ ಹಲ್ಲೆ ನಡೆಸಿದ್ದರು. ಇದರಿಂದ ಕೋಪಗೊಂಡ ಆರೋಪಿಗಳಾದ ವಿಷ್ಣು ಹಾಗೂ ವಿಶ್ವ ಅವರು ಹೇಮಂತ್ ಹೊಟ್ಟೆಗೆ ಮತ್ತು ಶ್ರೀನಿವಾಸ್ ಅವರ ಕಾಲಿಗೆ ಚಾಕುವಿನಿಂದ ಇರಿದು ಹತ್ಯೆಗೆ ಯತ್ನಿಸಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಎಸಿ ಮೆಕ್ಯಾನಿಕ್ ಸಾವು

ಬೆಂಗಳೂರು: ಆರ್‌.ಟಿ. ನಗರದ ಚಾಮುಂಡಿ ಬಡಾವಣೆಯ ಮನೆಯೊಂದರಲ್ಲಿ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡು ಗಾಯಗೊಂಡಿದ್ದ ಯುವಕ ರಾಶಿ(25) ಅವರು ಮಂಗಳವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ರಾಶಿ ಅವರು ಎ.ಸಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದರು. ಅ.27ರಂದು ರಾತ್ರಿ ತಂದೆ–ತಾಯಿ ಹಾಗೂ ಸಹೋದರನ ಜತೆಗೆ ಊಟ ಮುಗಿಸಿ ಮನೆಯ ನೆಲಮಹಡಿಯಲ್ಲಿದ್ದ ಕೊಠಡಿಯಲ್ಲಿ ನಿದ್ರೆ ಮಾಡುತ್ತಿದ್ದರು. ಮಧ್ಯರಾತ್ರಿ ಎದ್ದು ಮೊದಲ ಮಹಡಿಗೆ ನೀರು ಕುಡಿಯಲು ತೆರಳಿದ್ದರು. ಸಿಲಿಂಡರ್‌ನಿಂದ ಅನಿಲ ಸೋರಿಕೆ ಆಗಿರುವುದು ಅವರ ಗಮನಕ್ಕೆ ಬಂದಿರಲಿಲ್ಲ. ಲೈಟ್ ಹಾಕುತ್ತಿದ್ದಂತೆಯೇ ಬೆಂಕಿ ಹೊತ್ತಿಕೊಂಡಿತ್ತು. ಅವರು ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣವೇ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

ಪತ್ನಿಯ ಅಪಾರ್ಟ್‌ಮೆಂಟ್‌ಗೆ ಬಂದ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿ ಬಳ್ಳಾರಿ ಜೈಲಿನಲ್ಲಿದ್ದ ದರ್ಶನ್ ಬುಧವಾರ ಸಂಜೆ ಬಿಡುಗಡೆಯಾಗಿದ್ದು, ಬೆಂಗಳೂರಿನ ಹೊಸಕೆರೆಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್‌ಗೆ ತಡರಾತ್ರಿ ಬಂದರು.

ಹೊಸಕೆರೆಹಳ್ಳಿಯ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಸೇರಿದ ಫ್ಲ್ಯಾಟ್ ಇದೆ. ಅಲ್ಲಿಗೆ ತಡರಾತ್ರಿ ಬಂದು ವಾಸ್ತವ್ಯ ಮಾಡಿದರು. ಬಳ್ಳಾರಿಯಿಂದ ಕಾರಿನಲ್ಲೇ ಪತ್ನಿ ವಿಜಯಲಕ್ಷ್ಮಿ ಹಾಗೂ ನಟ ಧನ್ವೀರ್ ಜೊತೆಗೆ ಬಂದರು.

ದೇವನಹಳ್ಳಿಯ ಮೂಲಕ ನಗರ ಪ್ರವೇಶಿಸಿದ ಅವರು ಹೆಬ್ಬಾಳ ಮೇಲ್ಸೇತುವೆ, ಮಲ್ಲೇಶ್ವರ, ವಿಜಯನಗರ, ದೀಪಾಂಜಲಿನಗರ, ನಾಯಂಡಹಳ್ಳಿಯ ಮೂಲಕ ಫ್ಲ್ಯಾಟ್‌ಗೆ ಬಂದರು.

ದರ್ಶನ್ ಅವರು ಆರ್‌ಆರ್ ನಗರದ ನಿವಾಸಕ್ಕೆ ಬರುತ್ತಾರೆ ಎಂಬ ಮಾಹಿತಿ ಇತ್ತು. ಮನೆಯ ಸುತ್ತಮುತ್ತ ಬ್ಯಾರಿಕೇಡ್ ಹಾಕಿ ಪೊಲೀಸ್ ಭದ್ರತೆ ಕಲ್ಪಿಸಿದ್ದರು. ಮೂವರು ಪಿಎಸ್‌ಐ ನೇತೃತ್ವದಲ್ಲಿ ಭದ್ರತೆ ಕಲ್ಪಿಸಲಾಗಿತ್ತು. ಮನೆ ಬಳಿ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗಿತ್ತು.

ತಂಡ ತಂಡವಾಗಿ ಬರುತ್ತಿದ್ದ ಅಭಿಮಾನಿಗಳನ್ನು ಮಾರ್ಗ ಮಧ್ಯದಲ್ಲೇ ತಡೆದ ಪೊಲೀಸರು ವಾಪಸ್ ಕಳುಹಿಸಿದರು. ದಿಢೀರ್ ಮಾರ್ಗ ಬದಲಾವಣೆ ಮಾಡಿ ಹೊಸಕೆರೆಹಳ್ಳಿ ಅಪಾರ್ಟ್‌ಮೆಂಟ್‌ಗೆ ದರ್ಶನ್ ಅವರನ್ನು ಕರೆದೊಯ್ಯಲಾಯಿತು.

ಅಭಿಮಾನಿಗಳ ಸಂಭ್ರಮ: ದರ್ಶನ್ ಬರುತ್ತಿದ್ದ ಮಾರ್ಗದ ಉದ್ದಕ್ಕೂ ಅಭಿಮಾನಿಗಳು ಕಾರಿನತ್ತ ಕೈಬೀಸಿ ಜೈಕಾರ ಕೂಗಿದರು. ಅಲ್ಲಲ್ಲಿ ಪಟಾಕಿ ಸಿಡಿಸಿ ‘ಜೈ ಡಿ ಬಾಸ್’ ಘೋಷಣೆಕೂಗಿದರು.ದೇವನಹಳ್ಳಿಯಲ್ಲಿ ಟೋಲ್ ಬಳಿ ಕಾರನ್ನು ಅಡ್ಡಗಟ್ಟಲು ಮುಂದಾದ ಅಭಿಮಾನಿಗಳಿಗೆ ಪೊಲೀಸರು ಲಾಠಿ ಏಟು ನೀಡಿ ಚದುರಿಸಿದರು.

1,055 ಪ್ರಕರಣ ದಾಖಲು ₹5.31 ಲಕ್ಷ ದಂಡ ಸಂಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಚಾಲಕರು ಹಾಗೂ ಬೈಕ್ ಸವಾರರ ವಿರುದ್ಧ ನಗರ ಸಂಚಾರ ವಿಭಾಗದ ಪೊಲೀಸರು ಕಾರ್ಯಾಚರಣೆ ಮುಂದುವರೆಸಿದ್ದು, ಮಂಗಳವಾರ ಒಂದೇ ದಿನ 1,055 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಅವರಿಂದ ₹5.31 ಲಕ್ಷ ದಂಡ ಸಂಗ್ರಹಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ನಿಯಮ ಉಲ್ಲಂಘಿಸಿದವರ ವಿರುದ್ಧ ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಕಾರ್ಯಾಚರಣೆ ನಡೆಸಲಾಯಿತು. ಏಕಮುಖ ಸಂಚಾರ ಹಾಗೂ ನಿರ್ಬಂಧಿತ ರಸ್ತೆಗಳಲ್ಲಿ ಸಂಚರಿಸಿದವರ ವಿರುದ್ಧ 812 ಪ್ರಕರಣ ದಾಖಲಿಸಿಕೊಂಡು ₹4.9 ಲಕ್ಷ ದಂಡ ಸಂಗ್ರಹಿಸಲಾಗಿದೆ. ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡಿದ್ದವರ ವಿರುದ್ಧ 127 ಪ್ರಕರಣ ದಾಖಲಿಸಿಕೊಂಡು ₹64 ಸಾವಿರ ದಂಡ ಸಂಗ್ರಹಿಸಲಾಗಿದೆ. ದ್ವಿಚಕ್ರ ವಾಹನದಲ್ಲಿ ಮೂವರು ಕುಳಿತು ಸಂಚಾರ ಮಾಡಿದ್ದವರ ವಿರುದ್ಧ 116 ಪ್ರಕರಣ ದಾಖಲಿಸಿಕೊಂಡು ₹58 ಸಾವಿರ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಬಿಎಂಟಿಸಿ ಸಿಬ್ಬಂದಿ ಮೇಲೆ ಹಲ್ಲೆ: ಇಬ್ಬರ ಸೆರೆ

ಬೆಂಗಳೂರು: ಟ್ಯಾನರಿ ರಸ್ತೆಯ ಕೆನರಾ ಬ್ಯಾಂಕ್ ನಿಲ್ದಾಣದ ಬಳಿ ಕಳೆದ ವಾರ ಬಿಎಂಟಿಸಿ ಬಸ್ ನಿರ್ವಾಹಕ, ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಕಾರ್ತಿಕ್ (20) ಹಾಗೂ ಕಿರಣ್(20) ಅವರನ್ನು ಡಿ.ಜೆ ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಸ್ ಅಡ್ಡಗಟ್ಟಿ ಮುಂದಿನ ಬಾಗಿಲು ತೆಗೆದು ಇಬ್ಬರು ದುಷ್ಕರ್ಮಿಗಳು ಹಲ್ಲೆ ನಡೆಸಿದ್ದರು’ ಎಂದು ಆರೋಪಿಸಿ ಚಾಲಕ ಗಗನ್ ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ‘ಬಸ್ ತೆರಳುತ್ತಿದ್ದ ಮಾರ್ಗದಲ್ಲಿ ಆರೋಪಿಗಳಿಬ್ಬರೂ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ರಸ್ತೆಯಲ್ಲಿ ಜಾಗ ಬಿಡದ ವಿಚಾರಕ್ಕೆ ಹಲ್ಲೆ ನಡೆಸಿದ್ದೆವು ಎಂಬುದಾಗಿ ಆರೋಪಿಗಳು ತಿಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಬಿಎಂಟಿಸಿ ಬಸ್ ಚಕ್ರ ಹರಿದು ಸವಾರ ಸಾವು

ಬೆಂಗಳೂರು: ಜೀವನ್‌ಬಿಮಾ ನಗರದಲ್ಲಿ ಬಿಎಂಟಿಸಿ ಬಸ್ ಹಿಂದಿಕ್ಕುವ ವೇಳೆ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದ ಬೈಕ್ ಸವಾರನ ತಲೆಯ ಮೇಲೆಯೇ ಬಸ್ಸಿನ ಚಕ್ರ ಹರಿದು ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಇಂದಿರಾನಗರದ ನಿವಾಸಿ ರತನ್ ಕುಮಾರ್(32) ಮೃತ ಸವಾರ. ಇಂದಿರಾ ನಗರದ ಸರ್ವೀಸ್ ರಸ್ತೆಯ ಬಿಡಿಎ ಕಾಂಪ್ಲೆಕ್ಸ್ ಬಳಿ ಘಟನೆ ನಡೆದಿದೆ. ಘಟನೆ ಸಂಬಂಧ ಬಿಎಂಟಿಸಿ ಡಿಪೊ 6ಕ್ಕೆ ಸೇರಿದ ಬಸ್‌ನ ಚಾಲಕ ನಾಗರಾಜು ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಬಿಎಂಟಿಸಿ ಬಸ್ ಚಾಲಕ ನಾಗರಾಜು ರಾತ್ರಿ ಪಾಳಿ ಕರ್ತವ್ಯ ಮುಗಿಸಿಕೊಂಡು ಇಂದಿರಾನಗರದ ಡಿಪೊ ಕಡೆಗೆ ತೆರಳುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ರತನ್ ಕುಮಾರ್ ಅವರು ಬಸ್‌ಅನ್ನು ಹಿಂದಿಕ್ಕಲು ವೇಗವಾಗಿ ಚಲಾಯಿಸುತ್ತಿದ್ದರು. ಬಲಭಾಗದಲ್ಲಿ ಟೆಂಪೊವೊಂದು ನಿಂತಿರುವುದನ್ನು ಗಮನಿಸಿ ಏಕಾಏಕಿ ಬ್ರೇಕ್ ಹಾಕಿದ್ದರು. ಆಗ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದರು. ಅವರ ತಲೆ ಮೇಲೆಯೇ ಬಿಎಂಟಿಸಿ ಬಸ್ ಚಕ್ರ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಇಂದು ಎರಡು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಗುರುವಾರ ‘ಯೆಲ್ಲೊ ಅಲರ್ಟ್’ ನೀಡಿರುವ ಹವಾಮಾನ ಇಲಾಖೆ, ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದೆ.

ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಲಂಚ: ಪಿಎಸ್‌ಐ ಗಂಗಾಧರಯ್ಯ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲ್ಲೆ ಪ್ರಕರಣದ ಆರೋಪಿಗಳನ್ನು ಬಂಧಿಸಲು ದೂರುದಾರನಿಂದಲೇ ₹25,000 ಲಂಚ ಪಡೆಯುತ್ತಿದ್ದ ವೈಟ್‌ಫೀಲ್ಡ್ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಗಂಗಾಧರಯ್ಯ ಎಂ.ಆರ್. ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಸಂಜೆ ಬಂಧಿಸಿದ್ದಾರೆ.

ವರ್ತೂರು ಸಮೀಪದ ಮುತ್ತಸಂದ್ರ ನಿವಾಸಿ ಅಂಬರೀಷ್ ಎಂಬುವವರ ಮೇಲೆ ಅಕ್ಟೋಬರ್ 24ರಂದು ಹಲ್ಲೆ ನಡೆಸಿದ ಆರೋಪದಡಿ ಇಬ್ಬರು ಪುರುಷರು, ಇಬ್ಬರು ಮಹಿಳೆಯರು ಮತ್ತು ಇತರರ ವಿರುದ್ಧ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆರೋಪಿಗಳಿಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿತ್ತು.

ಆರೋಪಿಗಳನ್ನು ಬಂಧಿಸುವಂತೆ ದೂರುದಾರ ಅಂಬರೀಷ್ ಪಿಎಸ್‌ಐ ಬಳಿ ಒತ್ತಾಯಿಸಿದ್ದರು. ಆರೋಪಿಗಳು ಜಾಮೀನು ಪಡೆದಿರುವುದನ್ನು ಮುಚ್ಚಿಟ್ಟಿದ್ದ ಪಿಎಸ್‌ಐ, ಎಲ್ಲರನ್ನೂ ಬಂಧಿಸಬೇಕಾದರೆ ₹50,000 ಲಂಚ ಕೊಡುವಂತೆ ಬೇಡಿಕೆ ಇಟ್ಟಿದ್ದರು. ಚೌಕಾಸಿ ನಡೆಸಿದಾಗ ₹25,000 ಕೊಟ್ಟರೆ ಬಂಧಿಸುವುದಾಗಿ ಹೇಳಿದ್ದರು.

ಪಿಎಸ್‌ಐ ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಅಂಬರೀಷ್ ಅವರು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–1ಕ್ಕೆ ದೂರು ಸಲ್ಲಿಸಿದ್ದರು. ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ಬಂದು ಹಣ ತಲುಪಿಸುವಂತೆ ಆರೋಪಿ ಸೂಚಿಸಿದ್ದರು. ಅದರಂತೆ ಬುಧವಾರ ಸಂಜೆ 6 ಗಂಟೆ ಸುಮಾರಿಗೆ ಗಂಗಾಧರಯ್ಯ ಅವರನ್ನು ಭೇಟಿಮಾಡಿದ ಅಂಬರೀಷ್ ಹಣ ನೀಡಿದರು. ಗಂಗಾಧರಯ್ಯ ಹಣ ಪಡೆದುಕೊಳ್ಳುತ್ತಿದ್ದಂತೆ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.



ಹುದ್ದೆಗಳ ವಿಂಗಡಣೆ
(ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳನ್ನು ಹೊರತುಪಡಿಸಿ)

ನಿಗಮ	ಹುದ್ದೆ	ಸಂಖ್ಯೆ
ಕೆಪಿಟಿಸಿಎಲ್	ಜೆಎಸ್‌ಎ	411
	ಜೆಪಿಎಂ	81
ಬೆಸ್ಕಾಂ	ಜೆಪಿಎಂ	906
ಚೆಸ್ಕಾಂ	ಜೆಪಿಎಂ	309
ಹೆಸ್ಕಾಂ	ಜೆಪಿಎಂ	560
ಮೆಸ್ಕಾಂ	ಜೆಪಿಎಂ	449
ಜೆಸ್ಕಾಂ	ಜೆಪಿಎಂ	44

ಕೆಪಿಟಿಸಿಎಲ್, ವಿವಿಧ ಎಸ್ಕಾಂಗಳಲ್ಲಿ 2,984 ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕರ್ನಾಟಕ ಸರ್ಕಾರದ ಇಂಧನ ಇಲಾಖೆ ಅಡಿ ಕಾರ್ಯನಿರ್ವಹಿಸುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (KPTCL) ಮತ್ತು ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಖಾಲಿ ಇರುವ ಕೆಳ ಹಂತದ ವಿವಿಧ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಕೆಪಿಟಿಸಿಎಲ್ ಹಾಗೂ ವಿವಿಧ ಎಸ್ಕಾಂಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿ ಕಿರಿಯ ಸ್ಟೇಷನ್ ಪರಿಚಾರಕ (JSA) ಮತ್ತು ಜೂನಿಯರ್ ಪವರ್ ಮ್ಯಾನ್ (JPM) ಎಂಬ ಒಟ್ಟು 2,984 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಇದರಲ್ಲಿ ಕಲ್ಯಾಣ ಕರ್ನಾಟಕ ವೃಂದದ (224) ಹುದ್ದೆಗಳೂ ಸೇರಿವೆ.

ವಿಶೇಷವೆಂದರೆ ಈ ಹುದ್ದೆಗಳಿಗೆ ಕರ್ನಾಟಕದಲ್ಲಿನ ಮಾನ್ಯತಾ ಸಂಸ್ಥೆಯಿಂದ ಎಸ್ಸೆಸ್ಸೆಲ್ಸಿ ತೇರ್ಗಡೆ ಅಥವಾ ಅದಕ್ಕೆ ತತ್ಸಮಾನವಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿದವರು ಮಾತ್ರ ಅರ್ಜಿ ಸಲ್ಲಿಸಬೇಕು. ಸಿಬಿಎಸ್‌ಇ ಅಥವಾ ಇತರೆ ಬೋರ್ಡ್ ಪರೀಕ್ಷೆಗಳಿಂದ 10ನೇ ತರಗತಿ ಪಾಸಾದವರು ಅರ್ಜಿ ಸಲ್ಲಿಸುವ ಹಾಗಿಲ್ಲ. ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದು ಫಲಿತಾಂಶಕ್ಕೆ ಕಾಯುತ್ತಿರುವವರೂ ಅರ್ಹರಲ್ಲ.

ಅರ್ಜಿ ಸಲ್ಲಿಸಲು ಕನಿಷ್ಠ 18 ವರ್ಷ ವಯಸ್ಸು ಪೂರ್ಯೆಸಿರಬೇಕು. ಗರಿಷ್ಠ ಸಾಮಾನ್ಯ ಅಭ್ಯರ್ಥಿಗಳಿಗೆ 35, 2ಎ, 2ಬಿ, 3ಎ, 3ಬಿ 38, ಎಸ್‌.ಸಿ/ಎಸ್‌ಟಿ, ಪ್ರವರ್ಗ 1 ಅಭ್ಯರ್ಥಿಗಳಿಗೆ 40 ವರ್ಷಗಳು. ಮಾಜಿ ಸೈನಿಕರಿಗೂ ವಯೋಮಿತಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ ಸಾಮಾನ್ಯ, 2ಎ, 2ಬಿ, 3ಎ, 3ಬಿ, ಪ್ರವರ್ಗ 1 ಅಭ್ಯರ್ಥಿಗಳಿಗೆ ₹614, ಎಸ್‌.ಸಿ/ಎಸ್‌ಟಿ ₹378. ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ. ಅರ್ಹ ಪುರುಷ, ಮಹಿಳೆ, ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳು ನವೆಂಬರ್ 20ರವರೆಗೆ ಅರ್ಜಿ ಸಲ್ಲಿಸಬಹುದು. ಒಂದು ಹುದ್ದೆಗೆ ಒಂದು ಅರ್ಜಿ ಮಾತ್ರ ಸಲ್ಲಿಸಬಹುದು. ಉದಾಹರಣೆಗೆ ಜೆಪಿಎಂ ಹುದ್ದೆಗೆ ಅರ್ಜಿ ಸಲ್ಲಿಸಬೇಕಾದರೆ ಕೆಪಿಟಿಸಿಎಲ್ ಅಥವಾ ಯಾವುದೇ ಒಂದು ಎಸ್ಕಾಂಗೆ ಅನ್ವಯವಾಗುವಂತೆ ಅರ್ಜಿ ಸಲ್ಲಿಸಬೇಕು. ಜೆಎಸ್‌ಎ ಹುದ್ದೆಗಳು ಕೆಪಿಟಿಸಿಎಲ್‌ನಲ್ಲಿ ಮಾತ್ರ ಲಭ್ಯ ಇವೆ.

ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿ ತಿಳಿಯಲು https://kptcl.karnataka.gov.in/ ವೆಬ್‌ಸೈಟ್‌ಗೆ ಭೇಟಿ ಕೊಟ್ಟು ವಿವರವಾದ ಅಧಿಸೂಚನೆ ನೋಡಿ.

ಸ್ಪರ್ಧಾತ್ಮಕ ಪರೀಕ್ಷೆ ಇಲ್ಲ

ಈ ಹುದ್ದೆಗಳಿಗೆ ಎಸ್ಸೆಸ್ಸೆಲ್ಸಿ ಮೆರಿಟ್ ಕೈ ಬಿಟ್ಟು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಹಲವರು ಒತ್ತಾಯಿಸಿದ್ದರು. ಆದರೆ, ಈ ಬಗ್ಗೆ ಇಲಾಖೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಈ ಸಾರಿ ನಿಗದಿತ ಮಾರ್ಗಸೂಚಿಗಳಂತೆ ನೇಮಕಾತಿ ನಡೆಯಲಿದ್ದು, ಮುಂದಿನ ಬಾರಿ ಸ್ಪರ್ಧಾತ್ಮಕ ಪರೀಕ್ಷೆ ಇಡುವ ಬಗ್ಗೆ ವಿಚಾರ ಮಾಡಲಾಗುತ್ತದೆ ಎನ್ನಲಾಗಿದೆ.

ಆಯ್ಕೆ ವಿಧಾನ ಹೇಗಿದೆ?

ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ಎಲ್ಲ ಅಭ್ಯರ್ಥಿಗಳಿಗೆ ಈ ಎರಡೂ ಹುದ್ದೆಗಳಿಗೂ ಮೊದಲು ಸಹನ ಶಕ್ತಿ (ದೈಹಿಕ ಸಾಮರ್ಥ್ಯ) ಪರೀಕ್ಷೆ ಇರಲಿದೆ. ಸಹನ ಶಕ್ತಿ ಪರೀಕ್ಷೆ ಪಾಸಾದವರನ್ನು ಅವರು ಎಸ್ಸೆಸ್ಸೆಲ್ಸಿಯಲ್ಲಿ ಪಡೆದ ಶೇಕಡಾವಾರು ಅಂಕಗಳನ್ನು ಪರಿಗಣಿಸಿ ಮೆರಿಟ್ ಆಧಾರದಲ್ಲಿ ನೇಮಕ ಮಾಡಲಾಗುತ್ತದೆ. ಯಾವುದೇ ಲಿಖಿತ ಸ್ಪರ್ಧಾತ್ಮಕ ಪರೀಕ್ಷೆ ಇರುವುದಿಲ್ಲ.

ನೇಮಕವಾಗುವ ಅಭ್ಯರ್ಥಿಗಳಿಗೆ ಮೂರು ವರ್ಷ ಕಡ್ಡಾಯ ಬುನಾದಿ ತರಬೇತಿ ಇರಲಿದೆ. ಈ ಅವಧಿಯಲ್ಲಿ ಗರಿಷ್ಠ ₹21 ಸಾವಿರ ಮಾಸಿಕ ವೇತನ ಮಾತ್ರ ಸಿಗಲಿದೆ. ಆ ನಂತರ ಎರಡು ವರ್ಷ ಪ್ರೊಬೇಷನರಿ ಸಮಯ ಇರಲಿದೆ. ಅಲ್ಲಿಂದ ವೇತನ ಶ್ರೇಣಿ ₹28,550–₹63,000

ಸಹನ ಶಕ್ತಿ ಪರೀಕ್ಷೆ ಹೇಗಿರಲಿದೆ?

8 ಮೀಟರ್ ಎತ್ತರದ ವಿದ್ಯುತ್ ಕಂಬ ಹತ್ತಬೇಕು, 14 ಸೆಕೆಂಡುಗಳಲ್ಲಿ 100 ಮೀಟರ್ ಓಟ ಓಡಬೇಕು. 1 ನಿಮಿಷಕ್ಕೆ 5 ಬಾರಿ ಸ್ಕಿಪ್ಪಿಂಗ್ ಮಾಡಬೇಕು, 8 ಮೀಟರ್ ದೂರ ಶಾಟ್‌ಪುಟ್ ಎಸೆಯಬೇಕು ಹಾಗೂ 3 ನಿಮಿಷಗಳಲ್ಲಿ 800 ಮೀಟರ್ ಓಡಬೇಕು. ಇದರಲ್ಲಿ ಪ್ರತಿಯೊಬ್ಬರಿಗೂ ವಿದ್ಯುತ್ ಕಂಬ ಹತ್ತುವುದು ಕಡ್ಡಾಯ. ಇನ್ನುಳಿದ ಯಾವುದಾದರೂ ಎರಡರಲ್ಲಿ ಪಾಸಾಗಬೇಕು.



ಬಹುಆಯ್ಕೆಯ ಪ್ರಶ್ನೆಗಳು

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಪ್ರಸ್ತುತ, ಶಾಂಘೈ ಸಹಕಾರ ಸಂಘಟನೆಯಲ್ಲಿರುವ 10 ಸದಸ್ಯ ರಾಷ್ಟ್ರಗಳೆಂದರೆ ಚೀನಾ, ಖಝಾಕಿಸ್ತಾನ್, ಕಿರ್ಗಿಸ್ತಾನ್, ರಷ್ಯಾ, ತಜಕಿಸ್ತಾನ್, ಉಜ್ಬೇಕಿಸ್ತಾನ್, ಭಾರತ, ಪಾಕಿಸ್ತಾನ, ಇರಾನ್ ಮತ್ತು ಬೆಲಾರಸ್ ಆಗಿದೆ.
ಬಿ. ಬೆಲಾರಸ್ ಅಧಿಕೃತವಾಗಿ ಜುಲೈ 2024ರಲ್ಲಿ ಶಾಂಘೈ ಸಹಕಾರ ಸಂಘಟನೆಗೆ ಸೇರಿಕೊಂಡಿತು ಮತ್ತು ಅದರ 10ನೇ ಸದಸ್ಯ ರಾಷ್ಟ್ರವಾಯಿತು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಶಾಂಘೈ ಸಹಕಾರ ಸಂಘಟನೆಯನ್ನು ಜೂನ್ 2001ರಲ್ಲಿ ಶಾಂಘೈ (ಚೀನಾ) ನಲ್ಲಿ ರಚಿಸಲಾಯಿತು.
ಬಿ. 2017ರಲ್ಲಿ ಅಸ್ತಾನಾದಲ್ಲಿ ನಡೆದ ಶಾಂಘೈ ಸಹಕಾರ ಸಂಘಟನೆಯ ಮುಖ್ಯಸ್ಥರ ಸಭೆಯಲ್ಲಿ ಭಾರತ ಮತ್ತು ಪಾಕಿಸ್ತಾನ ಪೂರ್ಣ ಸದಸ್ಯತ್ವ ಪಡೆದವು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಶಾಂಘೈ ಸಹಕಾರ ಸಂಘಟನೆಯ ಸೆಕ್ರೆಟರಿಯೇಟ್ ಚೀನಾದ ಬೀಜಿಂಗ್‌ನಲ್ಲಿದೆ.
ಬಿ. ಜಾಂಗ್ ಮಿಂಗ್ ಅವರು ಶಾಂಘೈ ಸಹಕಾರ ಸಂಘಟನೆಯ ಪ್ರಸ್ತುತ(ಅಕ್ಟೋಬರ್, 2024) ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 1996ರಿಂದ ಅರ್ಥಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಗುತ್ತಿದೆ.
ಬಿ. ಮೊದಲ ಬಾರಿಗೆ ಅರ್ಥಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ರಾಗ್ನರ್ ಫ್ರಿಶ್ ಮತ್ತು ಜಾನ್ ಟಿನ್ಬರ್ಗೆನ್ (Ragnar Frisch and Jan Tinbergen) ರವರು ಪಡೆದಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಬಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2024ನೇ ಸಾಲಿನ ಅರ್ಥಶಾಸ್ತ್ರ ವಿಭಾಗದ ನೊಬೆಲ್ ಪುರಸ್ಕಾರಕ್ಕೆ, ಅಮೆರಿಕಾದ ಮೂವರು ಅರ್ಥಶಾಸ್ತ್ರಜ್ಞರಾದ ಡೆರಾನ್ ಆಶಿಮೊಗ್ಲೊ, ಸೈಮನ್ಸ್ ಜಾನ್ಸನ್ ಹಾಗೂ ಜೇಮ್ಸ್ ಎ. ರಾಬಿನ್ಸನ್ ಅವರನ್ನು ಆಯ್ಕೆ ಮಾಡಲಾಗಿದೆ.
ಬಿ. 2024ನೇ ಸಾಲಿನ ಅರ್ಥಶಾಸ್ತ್ರ ವಿಭಾಗದ ಪ್ರಶಸ್ತಿಯನ್ನು ದೇಶಗಳ ನಡುವಿನ ಶ್ರೀಮಂತಿಕೆಯ ವ್ಯತ್ಯಾಸಕ್ಕೆ ಆಯಾ ದೇಶಗಳಲ್ಲಿನ ಸಾಮಾಜಿಕ ವ್ಯವಸ್ಥೆಗಳು (ಶಿಕ್ಷಣ, ಪೊಲೀಸ್, ಕುಟುಂಬ, ಕಾನೂನು, ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆ ಮುಂತಾದವು) ಕಾರಣವಾಗುತ್ತವೆ' ಎನ್ನುವುದನ್ನು ನೊಬೆಲ್ ಪುರಸ್ಕಾರಕ್ಕೆ ಪಾತ್ರರಾದ ಅರ್ಥಶಾಸ್ತ್ರಜ್ಞರು ವಿವರಿಸಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2014ರಲ್ಲಿ ಕೈಲಾಶ್ ಸತ್ಯಾರ್ಥಿ ಅವರು ಶಾಂತಿ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
ಬಿ. 2019ರಲ್ಲಿ ಅಭಿಜಿತ್ ಬ್ಯಾನರ್ಜಿ ಅವರು ಅರ್ಥಶಾಸ್ತ್ರ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

7. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಪೂರ್ವ ಏಷ್ಯಾ ಶೃಂಗಸಭೆಯು (EAS)ರಾಜಕೀಯ, ಭದ್ರತೆ ಮತ್ತು ಆರ್ಥಿಕ ಸವಾಲುಗಳನ್ನು ಚರ್ಚಿಸಲು ಇಂಡೋ-ಪೆಸಿಫಿಕ್ ಪ್ರದೇಶದ ದೇಶಗಳ ನಾಯಕರಿಗೆ ವೇದಿಕೆಯಾಗಿದೆ.
ಬಿ. ಪೂರ್ವ ಏಷ್ಯಾ ಶೃಂಗಸಭೆಯನ್ನು 2005ರಲ್ಲಿ ಕೌಲಾಲಂಪುರ್‌ನಲ್ಲಿ ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘಟನೆ (ASEAN) ಸ್ಥಾಪಿಸಿತು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

8. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಪ್ರಸ್ತುತ, ಪೂರ್ವ ಏಷ್ಯಾ ಶೃಂಗಸಭೆಯು ವಿಶ್ವದ ಶೇ. 54 ರಷ್ಟು ಜನಸಂಖ್ಯೆಯನ್ನು ಮತ್ತು ಜಾಗತಿಕ ಜಿ.ಡಿ.ಪಿಯ ಪಾಲಿನಲ್ಲಿ ಶೇ 58 ರಷ್ಟು ಭಾಗವನ್ನು ಪ್ರತಿನಿಧಿಸುವ 18 ದೇಶಗಳ ವೇದಿಕೆಯಾಗಿದೆ.
ಬಿ. ಭಾರತವು 2018ರಿಂದ ಪೂರ್ವ ಏಷ್ಯಾ ಶೃಂಗಸಭೆಯ ಸದಸ್ಯತ್ವವನ್ನು ಹೊಂದಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಎ

9. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 11 ಅಕ್ಟೋಬರ್ 2024 ರಂದು ಲಾವೊಸ್ (ಲಾವೊ ಪೀಪಲ್ಸ್ ಡೆಮಾಕ್ರಟಿಕ್ ರಿಪಬ್ಲಿಕ್) ನ ವಿಯೆಂಟಿಯಾನ್ ನಲ್ಲಿ ನಡೆದ 19ನೇ ಪೂರ್ವ ಏಷ್ಯಾ ಶೃಂಗಸಭೆ (EAS) ಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು.
ಬಿ. ನ್ಯಾವಿಗೇಷನ್ ಮತ್ತು ವಾಯುಪ್ರದೇಶದ ಸ್ವಾತಂತ್ರ್ಯವನ್ನು ಒತ್ತಿಹೇಳುವ ವಿಶ್ವಸಂಸ್ಥೆಯ ಸಮುದ್ರದ ಕಾನೂನು (UNCLOS)ಗೆ ಬದ್ಧವಾಗಿರುವ ಸಮುದ್ರ ಚಟುವಟಿಕೆಗಳ ಪ್ರಾಮುಖ್ಯತೆಯನ್ನು ಪ್ರಧಾನಿ ಮೋದಿಯವರು 19ನೇ ಪೂರ್ವ ಏಷ್ಯಾ ಶೃಂಗಸಭೆಯಲ್ಲಿ ಒತ್ತಿ ಹೇಳಿದ್ದಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH
Prose

Gentleman of Rio en Medio

Read and respond:

Read the passage carefully and answer the questions set on it.

4. Why did the old man begin to weep?
Ans: To gain the sympathy of the crowd.

5. What wise thing did Robert do after he watched the monkey's tricks for the second time?
Ans: Robert did not throw money into the hat. He had been fooled once and would not be fooled again by the old man into believing that his monkey was dead.

Learn grammar through communication:

'If' clause is used when
1 It is possible to fulfil conditions. (Open condition-type 1 condition)
2 It is theoretically possible to fulfil conditions. (Improbable condition type 2 condition)
3 It is impossible to fulfil conditions.(Impossible condition type 3 condition)
Examples of TYPE 3 are given for you.

Study the given situations. They suggest that it is impossible that the condition will be fulfilled as it refers to the past. One is done for you.

Task 1: Rohini and her friends were on a picnic. They couldn't take photographs as John forgot to carry his camera. How did John express his feelings?
Rohini: John, did you bring your camera?
John: Oh! Sorry.
Rohini: It's ok.
John: If I had brought my camera, we'd have taken some photographs.

Task 2: Complete Hemanth's mother's reaction
Hemanth moved to the edge of the compound to pluck guava fruits. He lost balance, fell down and broke his leg. His mother said, "If you had not moved ________________".
Ans;- "If you had not moved to the edge of the compound, you wouldn't have fallen and broken your legs."

Task 3: In the inter-school cricket match, the captain of your school team chose only one fast bowler. As a result, your team-lost the game.
Your reaction: If the captain of our team ________________________ (complete the sentence)
Ans:- If the captain of our team had chosen more than one fast bowler, we wouldn't have lost the game.

OR

If the captain of our team had chosen more than one fast bowler, we would have won the game.

Task 4: Monsoon rains failed. Farmers couldn't grow crops. Newspaper reported:
Had it rained ________________________________
(complete the sentence)
Ans:- Had it rained sufficiently, the farmers could have grown crops.

Task 5: Shanthanu scored less marks in English. Therefore he couldn't get a seat in the college he wanted. Guess the response of his father: _________
Ans:- If you had scored good/more marks in English, you could have got a seat in the college of your choice.

OR

If you hadn't scored such low marks in English, you could have got a seat in the college you wanted.

Task 6:
Chitra : You missed the train, didn't you?
Saina: Yes. I went to the railway station at 10:30 a.m. But the train had left at 10:15 a.m.
Chitra : If you _______ (go) to the station at 10 a.m _________ wouldn't _________ (miss) the train.
(Complete the sentence)
Answer:
Chitra: If you had gone to the station at 10 a.m., you wouldn't have missed the train.

Make reference:

Task 1: The given table provides you information about the services offered at different counters in a Bank. Read the table and also the paragraph given below. Answer the questions.

Counter number	01	02	03	04	05	06
Services offered	Enquiry	Savings Bank	Loans	Demand Draft	Cash	Deposits

One of the Americans wished to buy two acres of land. The old man quoted rupees 50,000 for his land. But, the American didn't have enough money with him. He requested his friend to help him with money. He sent a cheque for rupees 20,000 to the American. The American went to a bank for a loan. The bank manager asked him to open an account which he did. The old man wanted the American to pay the price of the land only in the form of a demand draft. The old man invested 50% of the amount which he received from the American on deposits.

Which counter did the American and the old man approach for the following? Fill in the boxes provided. One is done for you.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ


II PUC - CHEMISTRY

Coordination Compound

1) Explain the bonding in coordination compounds in terms of Werner's postulates.
Ans: (a) A metal shows two kinds of valencies viz primary valency and secondary valency. Negative ions satisfy primary valencies, and secondary valencies are filled by both neutral ions and negative ions.
(b) A metal ion has a fixed amount of secondary valencies about the central atom. These valencies also orient themselves in a particular direction in the space provided to the definite geometry of the coordination compound.
(c) Secondary valencies cannot be ionised, while primary valencies can usually be ionised.

2) $FeSO_4$ solution mixed with $(NH_4)_2SO_4$ solution in 1:1 molar ratio gives the test of Fe^{2+} ion, but $CuSO_4$ solution mixed with aqueous ammonia in 1:4 molar ratio does not give the test of Cu^{2+} ion. Explain why.
Ans: $FeSO_4$ solution, when mixed with $(NH_4)_2SO_4$ in 1:1 molar ratio, produces a double salt $FeSO_4(NH_4)_2SO_4$-$6H_2O$. This salt is responsible for giving the Fe^{2+}.$CuSO_4$ mixed with aqueous ammonia in a ratio of 1:4 gives a complex salt. The complex salt does not ionize to give Cu^{2+}, hence failing the test.

3) Explain with two examples for each of the following: ligand, coordination entity, coordination number, coordination polyhedron, heteroleptic and homoleptic.
Ans: (a) **Ligands**: They are neutral molecules or negative ions bound to a metal atom in the coordination entity. For example, Cl^-, ^-OH
(b) Coordination entity: They are electrically charged radicals or species. They constitute a central ion or atom surrounded by neutral molecules or ions. Example – [$Ni(CO)_4$] , [$COCL_3(NH_3)_3$](C)
Coordination number: It is the number of bonds formed between ligands and central atom/ion. For example, (i) In $K_2[PtCl_6]$, 6 chloride ions are attached to Pt in the coordinate sphere. Thus, 6 is the coordination number of Pt. (ii) In $[Ni(NH_3)_4]Cl_2$, the coordination number of the central metal ion (Ni) is 4.**(d) Coordination polyhedron**: It is the spatial positioning of ligands that are directly connected to the central atom in the coordination sphere. For example,



(e) Heteroleptic: they are complexes with their metal ion being bounded to more than one kind of donor group. For example, [$Co(NH_3)_4Cl_2]^+$, [$Ni(CO)_4$]
(f) Homoleptic: they are complexes with their metal ion being bounded to only one type of donor. Example – [$PtCl_4]^{2-}$, [$Co(NH_3)_6]^{3+}$

4) What are the postulates of Werner's theory?
Ans:- Negative ions satisfy the primary valances, which are generally ionisable. Secondary valences cannot be ionised. Neutral molecules or negative ions satisfy these needs. For a metal, the secondary valence is equal to the coordination number and is constant

Werners theory of coordination compounds, isomers in coordination compounds, primary valence, secondary valence, etc.

Werner's theory's important postulates are as follows: The central metal or metal atoms in coordination compounds have two forms of valency which are primary valency and secondary valency. The oxidation state corresponds to the primary valency, while the coordinate number corresponds to the secondary valency.

Each metal atom has a fixed number of secondary valencies, like it has a fixed coordinate number.

The metal atom satisfies both its primary and secondary valencies. Negative ions satisfy primary valencies, but neutral molecules or negative ions satisfy secondary valencies.

The secondary valencies are always directed towards a particular place in space, resulting in determination of geometry of the coordinate compound's. As an example: A metal ion's secondary valencies are grouped octahedrally around the central metal ion if it has six of them. If the metal ion contains four secondary valencies, they are organized in a tetrahedral or square planar pattern around the center metal ion. The stereochemistry of the complex ion is thus determined by the secondary valency while the primary valency is non-directional.

5) What is meant by unidentate, bidentate and ambidentate ligands? Give two examples for each.
Ans: (i) Unidentate ligands: These are ligands with one donor site. For example, Cl^-, NH_3 (ii) Ambidentate ligands: These are ligands that fasten themselves to the central metal ion/atom via two different atoms.

(Contd…..)


ಮಳಿಗೆಗಳು
ಬೆಳಗ್ಗೆ 9.30 ರಿಂದ ರಾತ್ರಿ 10.30 ಗಂಟೆ
ವರೆಗೆ ತೆರೆದಿರುತ್ತದೆ
(31st Oct - 3rd Nov 2024)
FINANCE BONANZA
Upto ₹10,000
ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000
ಕ್ಯಾಶ್ ಬ್ಯಾಕ್*
BIGGEST Deepavali SALe
UPTO 70% OFF
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
EXCHANGE DHAMAKA
Upto ₹65,000
ಎಕ್ಸ್‌ಚೇಂಜ್ ಮೇಲೆ
ಉಚಿತ*
FIRE-BOLTT
SMART CALLING WATCH WORTH ₹20000
FINANCE POWERED BY Groww
0% EMI
Upto 3,500 Cash Back*
MIN PRODUCT VALUE ₹10,000
1 ಇ.ಎಮ್.ಐ ಉಚಿತ*
HDFC BANK
FESTIVE TREATS
10% INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000
IDFC FIRST Bank
5% INSTANT CASHBACK ON CC EMI* MIN SWIPE ₹5000 MAX CASH BACK UPTO ₹10000
YES BANK
5% INSTANT CASHBACK ON CC EMI* MIN SWIPE ₹20000 MAX CASH BACK UPTO ₹2000
DBS BANK
5% INSTANT CASHBACK ON CC E M I* MIN SWIPE ₹15000 MAX CASH BACK UPTO ₹2500
ASSURED BUYBACK
UPTO 70% On New Purchase*
realme C65 5G 6/128 ₹11,760* EMI STARTS FROM ₹980
ಉಚಿತ: BT NECK BAND WORTH ₹1599*
vivo Y200E 8/128 EFFECTIVE PRICE ₹17,290* (PRICE AFTER CASH BACK) EMI STARTS FROM ₹1,441
ಉಚಿತ: BT NECK BAND OR 10000 MAH POWER BANK WORTH ₹1599*
oppo F27 8/128 EFFECTIVE PRICE ₹17,690* (PRICE AFTER CASH BACK) EMI STARTS FROM ₹1,474
ಉಚಿತ: BT NECK BAND OR 10000 MAH POWER BANK WORTH ₹1599*
SAMSUNG A35 8+128 ₹25,999* EMI STARTS FROM ₹2,166
GET: EARBUDS @ ₹199*
iPhone 13 EFFECTIVE PRICE ₹44,840* (PRICE AFTER CASH BACK) EXCHANGE BONUS UPTO ₹6000 EMI STARTS FROM ₹1,952
ಉಚಿತ: ANC EARBUDS OR WIRELESS MAGSAFE POWER BANK WORTH ₹6499*
DELL INS 15 3535 10% CASH BACK
Ryzen 3-7320U
8GB 512GB SSD
15.6 FHD
Win 11 MSO 21
OFFER PRICE ₹31,490
ಇ.ಎಮ್.ಐ ₹2,624 MRP ₹49,395
ಉಚಿತ: 32GB PENDRIVE + W/L MOUSE WORTH ₹1299*
Lenovo SLIM 3 10% CASH BACK
RYZEN 5 7520U
16GB, 512GB SSD
RADEON 610M
15.6" FHD
WIN 11 MSO, 21
OFFER PRICE ₹43,990
ಇ.ಎಮ್.ಐ ₹3,666 MRP ₹69,890
ಉಚಿತ: 32GB PENDRIVE AND W/L MOUSE WORTH ₹1,299*
MacBook
EMI STARTS FROM ₹3,031
UPTO ₹10000 CASHBACK
ಉಚಿತ: 1 YEAR EXTENDED WARRANTY WORTH ₹9999*
hp VICTUS 10% CASH BACK
RYZEN 5, 5600H
512GB SSD, 16GB
4GB GFX RX6500M
15.6 FHD 144 HZ
WIN 11
OFFER PRICE ₹53,990
ಇ.ಎಮ್.ಐ ₹4,499 MRP ₹67,264
ಉಚಿತ: SMART WATCH WORTH ₹7,999*
Lenovo SLIM 3i 10% CASH BACK
HOT DEALS
14TH GEN CORE5 120U
16GB, 512GB SSD
15.6 FHD
WIN 11 MSO, 21
OFFER PRICE ₹58,990
ಇ.ಎಮ್.ಐ ₹4,916 MRP ₹95,090
ಉಚಿತ: UPGRADE TO 2 YRS WARRANTY BAG + SMART WATCH WORTH ₹10999*
LG 77 ಒಎಲ್ಇಡಿ EVO AI C4 4K SMART TV OLED77C4LA
ಇ.ಎಮ್.ಐ ₹2,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 65 ಒಎಲ್ಇಡಿ 4K SMART TV 65S90D
ಇ.ಎಮ್.ಐ ₹3,990
ಉಚಿತ: ₹45900 ಮೌಲ್ಯದ SAMSUNG 43 CRYSTAL 4K UHD SMART TV
SONY 65 OLED 4K ULTRA HD HIGH DYNAMIC RANGE (HDR) SMART TV (GOOGLE TV) K-65XR80
BRAVIA 8
ಇ.ಎಮ್.ಐ ₹6,500
Panasonic 55 4K ULTRA HD SMART ಎಲ್ಇಡಿ GOOGLE TV
ಇ.ಎಮ್.ಐ ₹2,455
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY PRIDE OF INDIA
LOWEST PRICE CHALLENGE
4K ಎಲ್ಇಡಿ
52% OFF
NVY Official LED partner of RCB
Model	Price	EMI
43 4K SMART	₹18,990	₹1,582
55 4K SMART	₹29,490	₹2,457
LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+™ GL-B257DBM3
ಇ.ಎಮ್.ಐ ₹3,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 630 Ltrs DOUBLE DOOR SIDE BY SIDE REFRIGERATOR APPLIANCES, EXPERT INVERTER TECHNOLOGY
ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 411L 2 Star Convertible Frost Free Double-Door Refrigerator
ಇ.ಎಮ್.ಐ ₹3,733
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Godrej 9 KG FRONT LOAD
ಇ.ಎಮ್.ಐ ₹3,208
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 KG FRONT LOAD
ಇ.ಎಮ್.ಐ ₹3,274
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 22ಲೀ ಕನ್‌ವೆಕ್ಷನ್ ಮೈಕ್ರೋವೇವ್
ಇ.ಎಮ್.ಐ ₹916
DAIKIN 1.0 TON 3 STAR INVERTER SPLIT AC
ಇ.ಎಮ್.ಐ ₹3,249
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
OFFER VALID TILL STOCK LAST | OFFER VALID TILL STOCK LAST
CHIMNEY UPTO 54% OFF
KAFF FABER HÄFELE Crompton Prestige BOSCH
WATER PURIFIER UPTO 47% OFF
EUREKA FORBES LG BRITA Livpure HAVELLS
MIXER GRINDER UPTO 54% OFF
Preethi Greenchef Vijayalakshmi Prestige Butterfly Panasonic BAJAJ
ELECTRIC WATER HEATER UPTO 60% OFF
Racold Haier HAVELLS BAJAJ V-GUARD KENSTAR
LG SOUND BAR SC9S, 3.1.3 CH, 400W, DOLBY ATMOS & IMAX ENHANCED.
OFFER PRICE ₹31,990
ಇ.ಎಮ್.ಐ ₹2,666
MRP ₹89,990
LG SAMSUNG SONY Haier Panasonic NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HÄFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi Vijayalakshmi ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ /
ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
STORE LOCATOR
165 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ವಕ್ಫ್: ಜೆಪಿಸಿಗೆ ಸಂಸದ ತೇಜಸ್ವಿ ಸೂರ್ಯ ಪತ್ರ



ಬೆಂಗಳೂರು: ವಿಜಯಪುರ ಜಿಲ್ಲೆ ಮತ್ತು ಇತರ ಕಡೆಗಳಲ್ಲಿ ರೈತರ ಜಮೀನು ವಕ್ಫ್‌ಗೆ ಪರಭಾರೆ ಮಾಡುತ್ತಿರುವ ಸಮಸ್ಯೆಯ ಬಗ್ಗೆ ರೈತರನ್ನು ಕರೆಸಿ ಅವರ ಅಹವಾಲು ಕೇಳುವಂತೆ ವಕ್ಫ್ ಕುರಿತ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್ ಅವರಿಗೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಪತ್ರ ಬರೆದಿದ್ದಾರೆ.

ರೈತರ ಜಮೀನು ವಕ್ಫ್‌ಗೆ ಸೇರಿದ್ದು ಎಂದು ಸರ್ಕಾರದಿಂದ ರೈತರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಪಹಣಿಯಲ್ಲೂ ಬದಲಾವಣೆ ಮಾಡಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಸಮಿತಿಯು ನೇರವಾಗಿ ರೈತರ ಅಹವಾಲು ಕೇಳಿದರೆ, ಸಮಸ್ಯೆ ಆಳ-ಅಗಲ ಅರಿವಾಗುತ್ತದೆ ಎಂದು ಹೇಳಿದ್ದಾರೆ.

‘ಸಿ.ಎಂ ಆಗಿದ್ದಾಗಲೇ ಎಚ್‌ಡಿಕೆ ಕೆಲಸ ಮಾಡಿಲ್ಲ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ತಾವು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೇ ಎಚ್‌.ಡಿ. ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರಕ್ಕೆ ಏನೂ ಮಾಡಲಿಲ್ಲ. ಕ್ಷೇತ್ರದ ಶಾಸಕ ಸ್ಥಾನವೂ ಇಲ್ಲದ ಅವರು ಈಗ ಏನು ಮಾಡುತ್ತಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಚುನಾವಣೆಗಾಗಿ ಚನ್ನಪಟ್ಟಣದಲ್ಲಿ ನಾವು ಕೆಲಸ ಮಾಡುತ್ತಿಲ್ಲ. ಕ್ಷೇತ್ರದ ಜನರ ಮನೆ ಬಾಗಿಲಿಗೆ ಹೋಗಿ ಅವರ ಕಷ್ಟಗಳನ್ನು ಆಲಿಸಿದ್ದೇವೆ. ಜನರ ಸಮಸ್ಯೆ ಕೇಳಲು ಕಾರ್ಯಕ್ರಮ ಮಾಡಿದಾಗ 22 ಸಾವಿರ ಕುಟುಂಬಗಳಿಂದ ಅರ್ಜಿ ಸಲ್ಲಿಕೆಯಾಗಿವೆ. ಇದು ಹಿಂದಿನ ಶಾಸಕರ ಕಾರ್ಯವೈಖರಿಗೆ ಸಾಕ್ಷಿ’ ಎಂದರು.

‘ಜೆ ಡಿ ಎ ಸ್ ಕುಟುಂಬ, ಸಂಸದ ಯದುವೀರ ಒಡೆಯರ್ ಸೇರಿದಂತೆ ಯಾರಾದರೂ ಪ್ರಚಾರ ಮಾಡಲಿ, ಜನರು ನಮ್ಮ ಪರ ಇದ್ದಾರೆ. ವಕ್ಫ್ ವಿಚಾರದಲ್ಲಿ ಬಿಜೆಪಿ ಅನಗತ್ಯವಾಗಿ ರಾಜಕೀಯ ಮಾಡುತ್ತಿದೆ. ಬಿಜೆಪಿ ಅವಧಿಯಲ್ಲೂ ವಕ್ಫ್ ಮಂಡಳಿಯಿಂದ ರೈತರಿಗೆ ನೋಟಿಸ್ ನೀಡಲಾಗಿತ್ತು. ರೈತರಿಗೆ ನೀಡಿದ ಭೂಮಿ ವಾಪಸ್ ಪಡೆಯುವುದಿಲ್ಲ’ ಎಂದರು.

ನ. 9,10ಕ್ಕೆ ಬಿಐಸಿ ಸಹಯೋಗದಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಿಂದ ಉತ್ಸವ

ಒಂದೇ ಸೂರಿನಡಿ ಕರ್ನಾಟಕದ ವೈಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀಮಂತ ಸಂಸ್ಕೃತಿ, ಕಲೆ, ಸಾಹಿತ್ಯ, ಆಹಾರ ಸೇರಿ ಹಲವು ವೈವಿಧ್ಯಗಳನ್ನು ಒಂದೇ ಸೂರಿನಡಿ ತರಲು ಮುಂದಾಗಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ನ.9 (ಶನಿವಾರ) ಮತ್ತು 10ರಂದು (ಭಾನುವಾರ) ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರ-ರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ‘ಕೃಷ್ಣೆಯಿಂದ ಕಾವೇರಿಯವರೆಗೆ’ ಶೀರ್ಷಿಕೆಯಡಿ ಉತ್ಸವ ಹಮ್ಮಿಕೊಂಡಿದೆ.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಬಿಐಸಿ ಸಹಯೋಗದಲ್ಲಿ ವಿಶ್ವವಿದ್ಯಾಲಯವು ಈ ಉತ್ಸವ ಆಯೋಜಿಸಿದೆ. ಎರಡು ದಿನಗಳ ಉತ್ಸವದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಐದು ವೇದಿಕೆಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಜಾನಪದ ಕಲಾ ಪ್ರದರ್ಶನ, ಗಾಯನ, ಪುಸ್ತಕ ಬಿಡುಗಡೆ, ಉಪನ್ಯಾಸ, ವಿಚಾರ ಸಂಕಿರಣ, ಆಹಾರ ಮೇಳ, ಕಾರ್ಯಾಗಾರ, ಚರ್ಚೆ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿ ಹಲವು ವೈವಿಧ್ಯತೆಗಳನ್ನು ಈ ಉತ್ಸವ ಒಳಗೊಂಡಿರಲಿದೆ.

ಬುಧವಾರ ಈ ಕುರಿತು ವಿವರ ನೀಡಿದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಸಹ ನಿರ್ದೇಶಕ ಮಂಜುನಾಥ್, ‘ಕರ್ನಾಟಕ ಹಲವು ವೈವಿಧ್ಯಗಳ ನಾಡಾಗಿದೆ. ಸಾಮಾನ್ಯ ಜನರು ಹಾಗೂ ವಿದ್ವಾಂಸರನ್ನು ಒಳಗೊಳ್ಳುವಂತೆ ಕಾರ್ಯಕ್ರಮ ರೂಪಿಸಿದ್ದೇವೆ. ಕರ್ನಾಟಕದಲ್ಲಿ ಹರಿಯುತ್ತಿರುವ ನದಿಗಳಲ್ಲಿ ಕೃಷ್ಣ ಮತ್ತು ಕಾವೇರಿ ಪ್ರಮುಖವಾಗಿವೆ. ಎರಡೂ ನದಿಗಳು ಈ ರಾಜ್ಯದ ವಿವಿಧ ಭೂ ಭಾಗಗಳಲ್ಲಿ ಹರಿಯುತ್ತಿರುವ ಹಾಗೆಯೇ, ನಮ್ಮ ಉತ್ಸವವೂ ಕರ್ನಾಟಕದ ವಿವಿಧ ಸಂಸ್ಕೃತಿ ಮತ್ತು ಭಾಷೆಗಳೊಂದಿಗೆ ಕೊಂಡಿ ಬೆಸೆಯುವ ಆಶಯ ಹೊಂದಿದೆ’ ಎಂದು ತಿಳಿಸಿದರು.

ಬಿಐಸಿ ಕಾರ್ಯಕ್ರಮ ನಿರ್ದೇಶಕಿ ಹಾಗೂ ಉತ್ಸವದ ಕ್ಯೂರೇಟರ್ ಲೇಖಾ ನಾಯ್ಡು, ‘ನ.9ರಂದು ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗಲಿದೆ. ಡೊಳ್ಳು ಕುಣಿತ ಸೇರಿ ವಿವಿಧ ಜಾನಪದ ಕಲಾ ಪ್ರದರ್ಶನಗಳ ಮೆರವಣಿಗೆ ನಡೆಯಲಿದೆ. 11 ಗಂಟೆಗೆ ಹಿಂದೂಸ್ತಾನಿ ಸಂಗೀತದ ಬಗ್ಗೆ ಹಿಂದೂಸ್ತಾನಿ ಗಾಯಕ ನಾಗರಾಜರಾವ್ ಹವಾಲ್ದಾರ್ ಅವರು ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ ನೀಡಲಿದ್ದಾರೆ. ಬಳಿಕ, ಕರ್ನಾಟಕದಲ್ಲಿ ಕ್ರೀಡೆಗಳ ಕುರಿತು ವಿಚಾರಸಂಕಿರಣ, ಹಸೆ ಚಿತ್ರದ ಕಾರ್ಯಾಗಾರ, ರಂಗಗೀತೆಗಳ ಪ್ರಸ್ತುತಿ, ತೊಗಲು ಬೊಂಬೆಯಾಟ ಪ್ರದರ್ಶನ, ಪ್ರಕೃತಿ ಸಂರಕ್ಷಣೆ ಬಗ್ಗೆ ಉಲ್ಲಾಸ್ ಕಾರಂತ್ ಅವರಿಂದ ಉಪನ್ಯಾಸ, ಕರ್ನಾಟಕ ಏಕೀಕರಣ ಚಳವಳಿಯ ಬಗ್ಗೆ ವಿಚಾರಸಂಕಿರಣ ಹಾಗೂ ಜನಪದ ನೃತ್ಯಗಳ ಪ್ರದರ್ಶನ ನಡೆಯಲಿದೆ’ ಎಂದರು.

‘ನ.10ರಂದು ಬೆಳಿಗ್ಗೆ 11 ಗಂಟೆಗೆ ಯಕ್ಷಗಾನ ಪ್ರದರ್ಶನ ಇರಲಿದೆ. ತದನಂತರ, ಅಡುಗೆಗಳ ಪ್ರಾತ್ಯಕ್ಷಿಕೆ, ಪುಸ್ತಕಗಳ ಬಿಡುಗಡೆ, ಅಡುಗೆ ಕುರಿತು ಮಾತುಕತೆ, ಕೌದಿ ಕಲೆಯ ಕಾರ್ಯಾಗಾರ, ‘ಕನ್ನಡ ಪ್ರಜ್ಞೆಯ ವಿಕಾಸ ಮತ್ತು ಜ್ಞಾನಪೀಠ ಪುರಸ್ಕೃತರು’ ವಿಷಯದ ಬಗ್ಗೆ ಚರ್ಚೆ, ಫ್ಯೂಶನ್ ಸಂಗೀತ ಕಛೇರಿ ಸೇರಿ ಹಲವು ಕಾರ್ಯಕ್ರಮಗಳು ನಡೆಯಲಿವೆ’ ಎಂದು ಮಾಹಿತಿ ನೀಡಿದರು.

ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಮುಖ್ಯ ಸಂವಹನ ಅಧಿಕಾರಿ ಸುದೀಶ್ ವೆಂಕಟೇಶ್, ಹಿಂದೂಸ್ತಾನಿ ಗಾಯಕ ನಾಗರಾಜರಾವ್ ಹವಾಲ್ದಾರ್, ಲೇಖಕಿ ರೂಪಾ ಪೈ, ಬಿಐಸಿ ಕಾರ್ಯಕ್ರಮ ಸಮಿತಿಯ ಪ್ರತೀತಿ ಬಲ್ಲಾಳ್ ಉಪಸ್ಥಿತರಿದ್ದರು.

ಉತ್ಸವದಲ್ಲಿ ಕಲಾ ಪ್ರದರ್ಶನ, ಆಹಾರ ಮೇಳ



‘ಎರಡೂ ದಿನಗಳು ವಿವಿಧ ಮಹಡಿಗಳಲ್ಲಿ ಕಲಾ ಪ್ರದರ್ಶನ ಹಾಗೂ ಆಹಾರ ಮೇಳ ನಡೆಯಲಿದೆ. ಕುಶಲ ಕರ್ಮಿಗಳೊಂದಿಗೆ ಮುಖಾಮುಖಿಯಾಗಿ ಅವರ ಅನುಭವಗಳನ್ನು ಕೇಳುವ ಅವಕಾಶವೂ ಇರಲಿದೆ. ಈ ಉತ್ಸವಕ್ಕೆ ಪ್ರವೇಶ ಉಚಿತ ವಾಗಿರಲಿದೆ’ ಎಂದು ಮಂಜುನಾಥ್ ತಿಳಿಸಿದರು.

ಬಿಐಸಿ ನಿರ್ದೇಶಕ ವಿಕ್ರಂ ಭಟ್, ‘ಕನ್ನಡೇತರರಿಗೆ ಕರ್ನಾಟಕದ ಸಂಸ್ಕೃತಿ ಮತ್ತು ಕಲೆಯ ಬಗ್ಗೆ ತಿಳಿಸಬೇಕು. ನಾವು ನಿರಂತರ ಕನ್ನಡ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಎರಡು ದಿನಗಳ ಈ ಉತ್ಸವವು ಜನರ ಸ್ಮರಣೆಯಲ್ಲಿ ಇರುತ್ತದೆ’ ಎಂದು ವಿವರಿಸಿದರು.

ನಗರದಲ್ಲಿ ಇಂದು

‘ಪ್ರಸ್ತುತ ಸಮಾಜದಲ್ಲಿ ಯುವ ಜನತೆಯ ಪ್ರಾತಿನಿಧ್ಯ ಹಾಗೂ ಸವಾಲುಗಳು’ ಉಪನ್ಯಾಸ: ಆರ್. ಶ್ರೀನಿವಾಸ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಗುಲಾಬಿ ಮಾರ್ಗ: ಸುರಂಗ ಕಾಮಗಾರಿ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಗುಲಾಬಿ ಮಾರ್ಗದಲ್ಲಿ ಸುರಂಗ ಕೊರೆಯುವ ಕಾರ್ಯ ಪೂರ್ಣಗೊಂಡಿದೆ. ಸುರಂಗ ಕೊರೆಯುವ ಯಂತ್ರ ‘ಭದ್ರಾ’ ತನ್ನ ಕಾರ್ಯ ಮುಗಿಸಿ ಬುಧವಾರ ಹೊರಬಂದಿದೆ.

ಏಪ್ರಿಲ್ 2ರಂದು ಕೆ.ಜಿ.ಹಳ್ಳಿ ನಿಲ್ದಾಣದಿಂದ ಸುರಂಗ ಕೊರೆಯುವ ಕಾರ್ಯವನ್ನು ‘ಭದ್ರಾ’ ಆರಂಭಿಸಿತ್ತು. ಬುಧವಾರ ನಾಗವಾರ ನಿಲ್ದಾಣದಲ್ಲಿ ಹೊರಬಂದಿದೆ.


9 ಸುರಂಗ ಕೊರೆಯುವ ಯಂತ್ರಗಳಲ್ಲಿ ‘ವರದ’, ‘ಅವನಿ’, ‘ಊರ್ಜ್ವಾ’, ‘ವಿಂಧ್ಯಾ’, ‘ಲವಿ’, ‘ವಮಿಕ’, ‘ರುದ್ರ’ ಮತ್ತು ‘ತುಂಗಾ’ ಯಂತ್ರಗಳು ಕೆಲಸ ಮುಗಿಸಿದ್ದವು. ಕೊನೇ ಹಂತದ ಕೊರೆಯುವ ಕಾರ್ಯವನ್ನು ‘ಭದ್ರಾ’ ನಡೆಸುತ್ತಿತ್ತು.

ಹಂತ- 2ರ ಯೋಜನೆಯಡಿ ರೀಚ್-6ರ ಮಾರ್ಗ ಇದಾಗಿದ್ದು, ಕಾಳೇನ ಅಗ್ರಹಾರದಿಂದ ನಾಗವಾರವರೆಗೆ 21.76 ಕಿ.ಮೀ.ನ ಈ ಮಾರ್ಗದಲ್ಲಿ 13.76 ಕಿ.ಮೀ. ಉದ್ದದ ಸುರಂಗ ಮಾರ್ಗ ಇದೆ. ಎರಡು ಪಥಗಳು ಸೇರಿ 20.992 ಕಿಲೋ ಮೀಟರ್ ಸುರಂಗ ನಿರ್ಮಾಣವಾಗಬೇಕಿತ್ತು. ಕೊರೆಯುವ ಕಾರ್ಯ ಮುಗಿದಿದ್ದು, ಸುರಂಗದ ಒಳಗೆ 12 ನಿಲ್ದಾಣಗಳ ನಿರ್ಮಾಣ ಸಹಿತ ಉಳಿದ ಕಾಮಗಾರಿಗಳು ಇನ್ನು ನಡೆಯಲಿವೆ.

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ. ನಗರ ನಾಲ್ಕನೇ ಹಂತ, ಜಯದೇವ ಆಸ್ಪತ್ರೆ, ಸ್ವಾಗತ್ ರೋಡ್ ಕ್ರಾಸ್, ಡೇರಿ ಸರ್ಕಲ್, ಮೈಕೊ ಇಂಡಸ್ಟ್ರೀಸ್, ಲ್ಯಾಂಗ್‌ಫೋರ್ಡ್ ಟೌನ್, ವೆಲ್ಲಾರ, ಎಂ.ಜಿ. ರಸ್ತೆ, ಶಿವಾಜಿನಗರ, ಕಂಟೋನ್ಮೆಂಟ್, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಅರೇಬಿಕ್ ಕಾಲೇಜು, ನಾಗವಾರದಲ್ಲಿ ಮೆಟ್ರೊ ನಿಲ್ದಾಣಗಳು ನಿರ್ಮಾಣ ಗೊಳ್ಳುತ್ತಿವೆ. 2025ರ ಅಂತ್ಯಕ್ಕೆ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ನಮ್ಮ ಮೆಟ್ರೊ ಗುಲಾಬಿ ಮಾರ್ಗದ ನಾಗವಾರದಲ್ಲಿ ನಡೆಯುತ್ತಿರುವ ಸುರಂಗ ಮಾರ್ಗದ ಕಾಮಗಾರಿ


Ministry of Home Affairs
Government of India
STATUE OF UNITY
एक भारत, श्रेष्ठ भारत.
A tribute to
Sardar Vallabhbhai Patel, on the occasion of his birth anniversary
National Unity Day 2024
PM Shri Narendra Modi will honour Sardar Patel with a floral tribute and address the nation
Various Programmes
• Rashtriya Ekta Divas Parade
• Indian Air Force fly past (Suryakiran)
• Daredevil riders show
• Traditional martial arts
• Gujarat Women Police Celebrate Nari Shakti by program on 'Atulya Bharat'
• NCC special show
• School band display
• Cultural programme
"The birth anniversary of Sardar Patel and National Unity Day is not just a date for us; rather, it is a celebration that showcases India's strength."
– PM Shri Narendra Modi
Date: 31st October, 2024 | Time: 07:15 AM | Venue: Ektanagar, Gujarat
Watch Live Telecast on
DD NEWS

ಬೆಳಕಿನ ಹಬ್ಬಕ್ಕೆ ಖರೀದಿ ಸಂಭ್ರಮ



ಬಸವನಗುಡಿಯ ಗಾಂಧಿ ಬಜಾರ್‌ನಲ್ಲಿ ಸಾರ್ವಜನಿಕರು ಮಣ್ಣಿನ ಹಣತೆಗಳನ್ನು ಖರೀದಿಸಿದರು – ಪ್ರಜಾವಾಣಿ ಚಿತ್ರ: ರಂಜು ಪಿ.

ಕೆ.ಆರ್. ಮಾರುಕಟ್ಟೆಯ ದರಗಳು

ಹೂವು (ಪ್ರತಿ ಕೆಜಿಗೆ ₹ಗಳಲ್ಲಿ)	ಕಳೆದ ವಾರ	ಈ ವಾರ
ಕನಕಾಂಬರ	600	2,000
ಮಲ್ಲಿಗೆ	400	1,000
ಗುಲಾಬಿ	150	200
ಸೇವಂತಿಗೆ	100	160
ಸುಗಂಧರಾಜ	150	200
ಚೆಂಡು ಹೂ	60	150
ಹಣ್ಣುಗಳು (ಪ್ರತಿ ಕೆ.ಜಿಗೆ)		
ಸೇಬು	100	120
ದಾಳಿಂಬೆ	80	100
ಏಲಕ್ಕಿ ಬಾಳೆ	50	70
ಸೀತಾಫಲ	80	100
ಬಾಳೆ	30	40
ತರಕಾರಿ (ಪ್ರತಿ ಕೆಜಿಗೆ)		
ಕ್ಯಾರೆಟ್	80	60
ಕ್ಯಾಪ್ಸಿಕಮ್	50	70
ಈರುಳ್ಳಿ	50	40
ಬೀನ್ಸ್	80	100
ಟೊಮೆಟೊ	20	30
ಆಲೂಗಡ್ಡೆ	25	30
ಬೀಟ್‌ರೂಟ್	40	40
ಹಾಗಲಕಾಯಿ	50	60
ಬೂದುಗುಂಬಳ	30	40
ಹೀರೆಕಾಯಿ	50	60
ಮೆಣಸಿನಕಾಯಿ	60	80
ಬಟಾಣಿ	200	240
ಬೆಳ್ಳುಳ್ಳಿ	380	320
ಪ್ರತಿ ಕಟ್ಟಿಗೆ		
ಕೊತ್ತಂಬರಿ	20	20
ಪುದೀನಾ	10	20
ಪಾಲಕ	10	20
ಸಬ್ಬಕ್ಕಿ	15	20
ಮೆಂತೆ	10	20

ಹಬ್ಬದ ವಿಶೇಷ

ಬಾಳೆಕಂಬ ಜೋಡಿಗೆ (ಮಧ್ಯಮ)	50
ಮಾವಿನ ತೋರಣ	20
100 ವೀಳ್ಯದೆಲೆಗೆ	100
ಗರಿಕೆ	30
ಬಿಲ್ವಪತ್ರೆ	20
ತೆಂಗಿನಕಾಯಿ ನಾಲ್ಕಕ್ಕೆ	100

ಮಳೆಯಿಂದ ಹೂವಿನ ಬೆಳೆಗಳು ಹಾಳಾಗಿವೆ. ಮಾರುಕಟ್ಟೆಗೆ ಪೂರೈಕೆಯಾಗುವ ಹೂವಿನ ಪ್ರಮಾಣ ಕಡಿಮೆಯಾಗಿದ್ದು, ಬೆಲೆ ಹೆಚ್ಚಾಗಿದೆ. ಗ್ರಾಹಕರು ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ

ಮಂಜುನಾಥ್, ಕೆ.ಆರ್. ಮಾರುಕಟ್ಟೆ ಹೂವಿನ ವ್ಯಾಪಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಆಚರಣೆಗೆ ಅಗತ್ಯವಿರುವ ಹೂವು, ಹಣ್ಣು, ಪೂಜೆ, ಅಲಂಕಾರಿಕ ವಸ್ತುಗಳ ಖರೀದಿಯ ಭರಾಟೆ ನಗರದ ಮಾರುಕಟ್ಟೆಗಳಲ್ಲಿ ಬುಧವಾರ ಜೋರಾಗಿತ್ತು. ಬೆಳಕಿನ ಹಬ್ಬದ ಮೆರುಗು ಹೆಚ್ಚಿಸುವ ವಸ್ತುಗಳ ಖರೀದಿಗೆ ಜನ ಮಳಿಗೆಗಳಲ್ಲಿ ಮುಗಿಬಿದ್ದಿದ್ದರು.

ಮಾರುಕಟ್ಟೆಗಳಲ್ಲಿ ಮಣ್ಣಿನ ಹಣತೆಗಳನ್ನು ರಸ್ತೆ ಬದಿಗಳಲ್ಲೇ ರಾಶಿ ಹಾಕಲಾಗಿದೆ. ತರಹೇವಾರಿ ವಿನ್ಯಾಸದ ಹಣತೆಗಳು ಜನರನ್ನು ಆಕರ್ಷಿಸುತ್ತಿದ್ದವು. ಹಣತೆಯೊಂದರ ಬೆಲೆ ₹5ರಿಂದ ₹300ವರೆಗಿದೆ.

ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ, ಮಲ್ಲೇಶ್ವರ ಮಾರುಕಟ್ಟೆ ಪ್ರದೇಶಗಳು ಜನ ಜಂಗುಳಿಯಿಂದ ಕೂಡಿದ್ದವು. ತರಕಾರಿ, ದಿನಸಿ ಮತ್ತು ಪೂಜೆಗೆ ಬೇಕಾಗುವ ಬೂದುಗುಂಬಳ, ಬಾಳೆಕಂದು, ವೀಳ್ಯದೆಲೆ, ತೆಂಗಿನಕಾಯಿ ಖರೀದಿ ಜೋರಾಗಿತ್ತು. ನಗರದ ವಿವಿಧ ಭಾಗಗಳಲ್ಲಿ ಹೂವು ಹಾಗೂ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವ ಕಿರು ಮಾರುಕಟ್ಟೆಗಳು ತಲೆ ಎತ್ತಿವೆ.

ದೀಪಾವಳಿ ಹಬ್ಬಕ್ಕೆ ಎಂದಿನಂತೆ ಹೂವಿನ ದರಗಳು ಏರಿಕೆ ಕಂಡಿದ್ದು, ಪ್ರತಿ ಕೆ.ಜಿ. ಕನಕಾಂಬರ ₹ 2,000, ಮಲ್ಲಿಗೆ ₹ 1,000, ಸೇವಂತಿಗೆ ₹ 180, ಗುಲಾಬಿ ಮತ್ತು ಸುಗಂಧರಾಜ ₹ 200 ರಂತೆ ಮಾರಾಟವಾಗುತ್ತಿವೆ.

'ದೀಪಾವಳಿಗೆ ಹೆಚ್ಚು ಖರೀದಿಯಾಗುವುದು ಸೇವಂತಿಗೆ ಹಾಗೂ ಚೆಂಡು ಹೂ. ಇತ್ತೀಚೆಗೆ ಸುರಿದ ಮಳೆಯಿಂದ ಚೆಂಡು ಹೂ ಬೆಳೆಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಆದ್ದರಿಂದ ಈ ಹೂಗಳ ದರ ಏರಿಕೆಯಾಗಿದ್ದು, ಕೆ.ಜಿಗೆ ₹150ರಂತೆ ಮಾರಾಟವಾಗುತ್ತಿವೆ. ವರಮಹಾಲಕ್ಷ್ಮಿ ಮತ್ತು ದಸರಾ ಹಬ್ಬಗಳಲ್ಲಿ ಇದ್ದ ಹೂವಿನ ಬೇಡಿಕೆ ಈಗಿಲ್ಲ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕರಾದ ಸುರೇಶ್ ಮತ್ತು ರಾಜು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಪೂಜಾ ಸಾಮಗ್ರಿಗಳ ಖರೀದಿ ಭರಾಟೆ: ದೀಪಾವಳಿಯನ್ನು ವಿವಿಧ ಸಮುದಾಯಗಳಲ್ಲಿ ತಮ್ಮದೇ ವಿಶೇಷ ಶೈಲಿಗಳಲ್ಲಿ ಆಚರಿಸಲಾಗುತ್ತದೆ. ಬಹುತೇಕರು ಹಿಂದಿನಿಂದಲೂ ಈ ಹಬ್ಬಕ್ಕೆ ಕೈಗೆ ನೋಮುದಾರ ಕಟ್ಟಿಕೊಳ್ಳುತ್ತಾರೆ.

ಪೂಜೆಯ ವೇಳೆ ನೋಮುದಾರ, ಅರಿಶಿನ-ಕುಂಕುಮ, ಅಡಿಕೆ, ವೀಳ್ಯದ ಎಲೆಗಳನ್ನು ಬಾಗಿನ ರೂಪದಲ್ಲಿ ನೀಡಲಾಗುತ್ತದೆ. ಈ ಎಲ್ಲ ಸಾಮಗ್ರಿಗಳ ಮಳಿಗೆಗಳ ಬಳಿಯೂ ಜನರ ದಂಡು ಬೀಡುಬಿಟ್ಟಿತ್ತು.

ಸಾಲು ರಜೆ: ಊರು, ಪ್ರವಾಸಿ ತಾಣದತ್ತ ಜನ



ಬೆಂಗಳೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ದೀಪಾವಳಿ ಹಬ್ಬ, ಕನ್ನಡ ರಾಜ್ಯೋತ್ಸವ ಮತ್ತು ವಾರಾಂತ್ಯದ ರಜೆಗಳಿಗಾಗಿ ಜನರು ಊರಿಗೆ ಹೋಗಲು ಧಾವಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಜತೆಗೆ ಸಾಲು ಸಾಲು ರಜೆಯಿರುವ ಕಾರಣಕ್ಕೆ ನಗರದ ಜನರು ಊರು ಹಾಗೂ ಪ್ರವಾಸಿ ತಾಣಗಳತ್ತ ಮುಖ ಮಾಡಿದ್ದಾರೆ.

ಬುಧವಾರ ರಾತ್ರಿ ಒಮ್ಮೆಲೇ ನಗರದಿಂದ ಕೆಎಸ್‌ಆರ್‌ಟಿಸಿ, ಖಾಸಗಿ ಬಸ್, ಸ್ವಂತ ವಾಹನ ಹಾಗೂ ಕ್ಯಾಬ್‌ಗಳಲ್ಲಿ ಜನರು ಹೊರಟಿದ್ದರಿಂದ ನಗರದ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

ಪ್ರಮುಖ ರಸ್ತೆ, ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆಯಲ್ಲಿ ಸಿಲುಕಿ ಪರದಾಟ

ಗುರುವಾರ ನರಕ ಚತುರ್ದಶಿ, ಶುಕ್ರವಾರ ರಾಜ್ಯೋತ್ಸವ, ಶನಿವಾರ ಬಲಿಪಾಡ್ಯಮಿ ಹಾಗೂ ಭಾನುವಾರ ವಾರಾಂತ್ಯ. ಹೀಗೆ ಸಾಲು ಸಾಲು ರಜೆ ಇರುವ ಕಾರಣದಿಂದ ಹೆಚ್ಚಿನ ಜನರು ವಿವಿಧ ಸ್ಥಳಗಳತ್ತ ತೆರಳಿದರು.

ತುಮಕೂರು ರಸ್ತೆಯ ಯಶವಂತಪುರ, ಗೊರಗುಂಟೆಪಾಳ್ಯ, ಪೀಣ್ಯ, ಜಾಲಹಳ್ಳಿ, ಎಂಟನೇ ಮೈಲು, ನಾಗಸಂದ್ರದ ಜಂಕ್ಷನ್‌ಗಳಲ್ಲಿ ಬುಧವಾರ ರಾತ್ರಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಹೆಬ್ಬಾಳ ಮೇಲ್ಸೇತುವೆ, ಕೆ.ಆರ್. ಪುರ ಹಾಗೂ ಮೈಸೂರು ರಸ್ತೆಯಲ್ಲೂ ದಟ್ಟಣೆಯಿಂದ ವಾಹನ ಚಾಲಕರು ಪರದಾಡಿದರು. ವಾಹನಗಳು ಮುಂದಕ್ಕೆ ಸಾಗಲು ಹಲವು ನಿಮಿಷಗಳೇ ಬೇಕಾಗಿತ್ತು. ನೈಸ್ ರಸ್ತೆ ಹಾಗೂ ಹೊರವರ್ತುಲ ರಸ್ತೆಗಳಲ್ಲೂ ಭಾರಿ ಸಂಖ್ಯೆಯ ವಾಹನಗಳು ನಗರದಿಂದ ವಿವಿಧ ಜಿಲ್ಲೆಗಳತ್ತ ಸಾಗಿದವು.

ನಿಲ್ದಾಣಗಳಲ್ಲೂ ದಟ್ಟಣೆ: ರೈಲು ಹಾಗೂ ಬಸ್ ನಿಲ್ದಾಣಗಳಲ್ಲೂ ದಟ್ಟಣೆ ಕಂಡುಬಂತು. ಯಶವಂತಪುರ, ಕಂಟೋನ್ಮೆಂಟ್, ಬೈಯಪ್ಪನಹಳ್ಳಿ, ಸಂಗೊಳ್ಳಿ ರಾಯಣ್ಣ, ಕೆಂಗೇರಿ ಹಾಗೂ ಚಿಕ್ಕಬಾಣಾವರ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಇತ್ತು. ಕೆಂಪೇಗೌಡ ಬಸ್ ನಿಲ್ದಾಣದ ಎರಡು ಟರ್ಮಿನಲ್‌ಗಳಲ್ಲೂ ಭಾರಿ ಪ್ರಯಾಣಿಕರಿದ್ದರು.

ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಿರುವುದರಿಂದ ಕೆಎಸ್‌ಆರ್‌ಟಿಸಿ 2,000 ವಿಶೇಷ ಬಸ್‌ಗಳನ್ನು ರಸ್ತೆಗೆ ಇಳಿಸಿತ್ತು. ವಿಶೇಷ ಬಸ್‌ಗಳು ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣಗಳಿಂದ ಸಂಚರಿಸಿದವು. ಬಿಎಂಟಿಸಿ ಬಸ್‌ಗಳನ್ನು ವಿವಿಧ ಜಿಲ್ಲಾ ಕೇಂದ್ರಕ್ಕೆ ಕಳುಹಿಸಲಾಯಿತು.

ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಹೊರ ರಾಜ್ಯಗಳ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರ್, ತಿರುಚ್ಚಿ, ಪಾಲಕ್ಕಾಡ್, ತ್ರಿಶ್ಯೂರ್, ಎರ್ನಾಕುಳಂ, ತಿರುಪತಿ, ವಿಜಯವಾಡ ಸಹಿತ ವಿವಿಧೆಡೆಗೆ ವಿಶೇಷ ಬಸ್‌ಗಳು ಬುಧವಾರ ರಾತ್ರಿ ಹೊರಟವು. ಎಲ್ಲ ಬಸ್‌ಗಳೂ ಪ್ರಯಾಣಿಕರಿಂದ ಭರ್ತಿಯಾಗಿದ್ದವು. ಬಸ್ ಹಾಗೂ ರೈಲುಗಳಲ್ಲಿ ಮುಂಗಡವಾಗಿ ಸೀಟು ಕಾಯ್ದಿರಿಸಿಕೊಂಡು ಜನರು ಪ್ರಯಾಣಿಸಿದರು.

'ಒಟ್ಟೊಟ್ಟಿಗೆ ರಜೆಗಳು ಬಂದಿವೆ. ಮಕ್ಕಳಿಗೂ ಶಾಲೆಗೆ ರಜೆ ಸಿಕ್ಕಿದೆ. ಹೀಗಾಗಿ ಪ್ರವಾಸಿ ತಾಣಗಳತ್ತ ಹೊರಟಿದ್ದೇವೆ' ಎಂದು ಪ್ರಯಾಣಿಕರೊಬ್ಬರು ಹೇಳಿದರು. ಖಾಸಗಿ ಬಸ್‌ಗಳಲ್ಲಿ ಪ್ರಯಾಣ ದರವು ಹೆಚ್ಚಾಗಿತ್ತು.



ಊರಿಗೆ ತೆರಳಲು ಬೆಂಗಳೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದಿದ್ದ ಪ್ರಯಾಣಿಕರು

ಹಸಿರು ಪಟಾಕಿಗಳಿಂದಲೂ ತಪ್ಪದ ಅಪಾಯ

• ವರುಣ ಹೆಗಡೆ

ಬೆಂಗಳೂರು: ಪರಿಸರ ಸ್ನೇಹಿಯೆಂದು ಮಾರಾಟ ಮಾಡಲಾಗುತ್ತಿರುವ ಹಸಿರು ಪಟಾಕಿಗಳಿಂದಲೂ ಅವಘಡಗಳು ಸಂಭವಿಸುತ್ತಿವೆ. ನಗರದ ಕಣ್ಣಿನ ಆಸ್ಪತ್ರೆಗಳಲ್ಲಿ ವರದಿಯಾಗುವ ಪಟಾಕಿ ಗಾಯ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿವೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪ್ರತಿ ವರ್ಷ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿವಿಧ ಸರ್ಕಾರೇತರ ಸಂಸ್ಥೆಗಳು ಹಾಗೂ ವೈದ್ಯಕೀಯ ಸಂಸ್ಥೆಗಳು ಹಸಿರು ಪಟಾಕಿಗಳ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಹಬ್ಬದ ಸಂದರ್ಭದಲ್ಲಿ ನಿಗದಿತ ಅವಧಿಗೆ ಮಾತ್ರ ಹಸಿರು ಪಟಾಕಿ ಸಿಡಿಸಲು ಅವಕಾಶ ನೀಡಿ, ಮಾರ್ಗಸೂಚಿ ಹೊರಡಿಸಲಾಗುತ್ತಿದೆ. ಇಷ್ಟಾಗಿಯೂ ವರ್ಷದಿಂದ ವರ್ಷಕ್ಕೆ ಪಟಾಕಿ ಸಿಡಿತದಿಂದ ಕಣ್ಣಿಗೆ ಗಾಯ ಮಾಡಿಕೊಳ್ಳುವವರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಲಕ್ಷ್ಮಿ ಬಾಂಬ್, ಬಿಜಲಿ ಪಟಾಕಿ ಹಾಗೂ ಹೂ ಕುಂಡ ಸಿಡಿತದಿಂದಲೇ ಹೆಚ್ಚಿನವರು ಗಾಯಗೊಳ್ಳುತ್ತಿದ್ದಾರೆ.

ಪಟಾಕಿ ಗಾಯಗಳಿಗೆ ಸಂಬಂಧಿಸಿದಂತೆ ಹಬ್ಬದ ಅವಧಿಯಲ್ಲಿ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 2020ರಲ್ಲಿ 23, 2021ರಲ್ಲಿ 33, 2022 ಹಾಗೂ 2023ರಲ್ಲಿ ತಲಾ 40 ಪ್ರಕರಣಗಳು ವರದಿಯಾಗಿದ್ದವು. ನಾರಾಯಣ ನೇತ್ರಾಲಯದಲ್ಲಿ ಕ್ರಮವಾಗಿ 24, 17, 45 ಹಾಗೂ 58 ಮಂದಿ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದಿದ್ದರು. ಕಳೆದ ವರ್ಷ ಪಟಾಕಿ ಗಾಯಕ್ಕೆ ಸಂಬಂಧಿಸಿದಂತೆ ಮಿಂಟೊ ಆಸ್ಪತ್ರೆಗೆ ದಾಖಲಾದವರಲ್ಲಿ ಗಾಯದ ತೀವ್ರತೆಗೆ ಎಂಟು ಮಂದಿ ದೃಷ್ಟಿ ಕಳೆದುಕೊಂಡಿದ್ದರು. ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ 15ಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದಿದ್ದರು. ನೇತ್ರಧಾಮ, ಡಾ. ಅಗರ್‌ವಾಲ್ಸ್ ಸೇರಿ ವಿವಿಧ ಕಣ್ಣಿನ ಆಸ್ಪತ್ರೆಗಳಲ್ಲಿಯೂ ಪ್ರಕರಣಗಳು ವರದಿಯಾಗಿದ್ದವು.

ಪಟಾಕಿ: ಮುನ್ನೆಚ್ಚರಿಕೆ ವಹಿಸಲು ಸಲಹೆ

'ಮಾರುಕಟ್ಟೆಯಲ್ಲಿ ಎಲ್ಲವನ್ನೂ ಹಸಿರು ಪಟಾಕಿಗಳೆಂದು ಮಾರಾಟ ಮಾಡಲಾಗುತ್ತಿದೆ. ಇದನ್ನು ಖರೀದಿಸುವ ಜನರು, ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸದೆ ಸಿಡಿಸುವುದರಿಂದ ಅಪಾಯವನ್ನು ತಂದೊಡ್ಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಪರವಾನಗಿ ಪಡೆದ ಮಳಿಗೆಗಳಲ್ಲಿ, ಹಸಿರು ಪಟಾಕಿ ಬಗ್ಗೆ ಖಚಿತಪಡಿಸಿಕೊಂಡು ಖರೀದಿಸಬೇಕು. ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ' ಎಂದು ನಗರದ ನೇತ್ರ ತಜ್ಞರು ತಿಳಿಸಿದ್ದಾರೆ.

'ವರ್ಷದಿಂದ ವರ್ಷಕ್ಕೆ ಪಟಾಕಿ ಗಾಯಗಳು ಹೆಚ್ಚುತ್ತಿವೆ. ಪಟಾಕಿಗಳು ಸ್ಫೋಟಗೊಳ್ಳಲು ಬಳಸುವ ರಾಸಾಯನಿಕಗಳು ಅಪಾಯಕಾರಿಯಾಗಿದ್ದು, ಅನಿರೀಕ್ಷಿತ ಸಿಡಿತಗಳು ಹಾಗೂ ಬೆಂಕಿಯ ಕಿಡಿಗಳು ಕಣ್ಣಿಗೆ ಹಾನಿ ಮಾಡಲಿವೆ. ಪಟಾಕಿ ಅವಘಡಗಳಿಂದ ಗಾಯಗೊಳ್ಳುವವರಲ್ಲಿ ಶೇ 50ಕ್ಕಿಂತ ಹೆಚ್ಚು ಮಂದಿ ನೋಡುಗರೇ ಆಗಿರುತ್ತಾರೆ' ಎಂದು ಡಾ. ಅಗರ್‌ವಾಲ್ಸ್ ಆಸ್ಪತ್ರೆಯ ನೇತ್ರ ಸಲಹೆಗಾರ ಡಾ. ರವಿ ದೊರೈರಾಜ್ ತಿಳಿಸಿದರು.

ಹಸಿರು ಪಟಾಕಿಗಳಲ್ಲಿಯೂ ನಿಗದಿತ ಪ್ರಮಾಣದಲ್ಲಿ ರಾಸಾಯನಿಕಗಳು ಇರುತ್ತವೆ. ಕಣ್ಣು ಸೂಕ್ಷ್ಮ ಅಂಗವಾಗಿರುವುದರಿಂದ ಸಣ್ಣ ಕಿಡಿಯೂ ದೊಡ್ಡ ಹಾನಿ ಮಾಡುತ್ತದೆ. ಆದ್ದರಿಂದ ಮುನ್ನೆಚ್ಚರಿಕೆ ವಹಿಸಬೇಕು

ಡಾ. ರೋಹಿತ್ ಶೆಟ್ಟಿ, ನಾರಾಯಣ ನೇತ್ರಾಲಯದ ಅಧ್ಯಕ್ಷ

ವೀಕ್ಷಿಸುವ ವೇಳೆ ಗಾಯ: ಪಟಾಕಿ ಸಿಡಿಸುವವರ ಜತೆಗೆ ವೀಕ್ಷಿಸುವವರು ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡು, ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಮಿಂಟೊದಲ್ಲಿ ಕಳೆದ ವರ್ಷ ಚಿಕಿತ್ಸೆ ಪಡೆದವರಲ್ಲಿ ಅರ್ಧದಷ್ಟು ಮಂದಿ ಪಟಾಕಿ ಸಿಡಿತ ವೀಕ್ಷಿಸುತ್ತಿರುವವರು, ಪಾದಚಾರಿಗಳು ಹಾಗೂ ವಾಹನ ಸವಾರರಾಗಿದ್ದಾರೆ. ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ಪಡೆದವರಲ್ಲಿ 25 ಮಂದಿ ಸಿಡಿತ ವೀಕ್ಷಿಸುವ ವೇಳೆ ಗಾಯಗೊಂಡವರಾಗಿದ್ದಾರೆ.

'ಪಟಾಕಿ ಹಚ್ಚುವವರು ಮಾತ್ರವಲ್ಲದೆ, ಅದನ್ನು ವೀಕ್ಷಿಸುವವರೂ ಎಚ್ಚರವಾಗಿರಬೇಕು. ಹಸಿರು ಪಟಾಕಿಗಳಾದರೂ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ, ಪಟಾಕಿ ಸಿಡಿಸಬೇಕು' ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕ ಡಾ. ನಾಗರಾಜು ಜಿ. ಸಲಹೆ ನೀಡಿದರು.

ನಗರದಲ್ಲಿ ಕೆಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವಾರದಿಂದ ಬಿಡುವು ನೀಡಿದ್ದ ಮಳೆ, ನಗರದ ಕೆಲವು ಪ್ರದೇಶಗಳಲ್ಲಿ ಬುಧವಾರ ಮಧ್ಯಾಹ್ನ ಸುರಿಯಿತು.

ಮಳೆ ನೀರು ರಸ್ತೆಯಲ್ಲೇ ನಿಂತಿದ್ದರಿಂದ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಯಿತು. ಹೆಬ್ಬಾಳ ಜಂಕ್ಷನ್‌ನ ಸುತ್ತಮುತ್ತಲಿನ ರಸ್ತೆಗಳು, ಸುಮನಹಳ್ಳಿ ಜಂಕ್ಷನ್, ವೀರಸಂದ್ರದಿಂದ ಹೊಸೂರು ರಸ್ತೆ, ಬಾಗಲೂರು ಕ್ರಾಸ್ ಅಂಡರ್‌ಪಾಸ್, ಓಕಳಿಪುರದ ರೈಲ್ವೆ ಕೆಳಸೇತುವೆಗಳಲ್ಲಿ ನೀರು ನಿಂತು ಸಂಚಾರಕ್ಕೆ ಅಡ್ಡಿಯಾಗಿತ್ತು.

ಹೆಮ್ಮಿಗೆಪುರದಲ್ಲಿ ಅತಿಹೆಚ್ಚು (3 ಸೆಂ.ಮೀ) ಮಳೆಯಾಯಿತು. ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ 2.8 ಸೆಂ.ಮೀ, ಬಸವೇಶ್ವರನಗರದಲ್ಲಿ 2.8 ಸೆಂ.ಮೀ, ನಂದಿನಿಲೇಔಟ್ 2.5 ಸೆಂ.ಮೀ, ನಾಗಪುರದಲ್ಲಿ 2.2 ಸೆಂ.ಮೀ, ಮಾರುತಿ ಮಂದಿರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ 2 ಸೆಂ.ಮೀ ಮಳೆಯಾಗಿದೆ. ರಾಜರಾಜೇಶ್ವರಿನಗರ, ರಾಜಾಜಿನಗರ, ಶೆಟ್ಟಿಹಳ್ಳಿ, ಹೇರೋಹಳ್ಳಿ, ಕಾಟನ್‌ಪೇಟೆ, ಕೆಂಗೇರಿಯಲ್ಲಿ ಸಾಧಾರಣ ಮಳೆಯಾಯಿತು.



ಪ್ರಕಾಶಿಸುತ್ತಿದೆ ವಿಧಾನಸೌಧ... ರಾಜ್ಯೋತ್ಸವದ ಪ್ರಯುಕ್ತ ವಿಧಾನಸೌಧಕ್ಕೆ ಹಳದಿ ಕೆಂಪು ಬಣ್ಣಗಳ ದೀಪಾಲಂಕಾರ ಮಾಡಲಾಗಿದ್ದು, ಬುಧವಾರ ರಾತ್ರಿ ಬಣ್ಣಗಳಿಂದ ಕಂಗೊಳಿಸುತ್ತಿತ್ತು – ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್ ಜಿ

'ದೇಶದ ಪರಿವರ್ತನೆಗೆ ಶಿಕ್ಷಣದ ಸುಧಾರಣೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಸಮಗ್ರ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯವಾಗಿದ್ದು, ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣದ ಮೇಲೆ ಹೆಚ್ಚು ಗಮನ ಹರಿಸಬೇಕಿದೆ' ಎಂದು ಪ್ರಥಮ್ ಶಿಕ್ಷಣ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರುಕ್ಮಿಣಿ ಬ್ಯಾನರ್ಜಿ ಹೇಳಿದರು.

ಐಐಎಂಬಿ 51ನೇ ಸಂಸ್ಥಾಪನ ದಿನದಂದು 'ಇಂದಿನ ಭಾರತದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿನ ಅವಕಾಶಗಳು ಮತ್ತು ಸವಾಲುಗಳು' ವಿಷಯ ಕುರಿತು ಉಪನ್ಯಾಸ ನೀಡಿದರು.

'ಪ್ರತಿಯೊಬ್ಬ ಮಕ್ಕಳೂ ದೇಶದ ಪ್ರಗತಿಗೆ ಹೇಗೆ ಕೊಡುಗೆ ನೀಡುತ್ತಾರೆ ಎಂಬುದು ಮುಖ್ಯ. ಓದುವ ಸಾಮರ್ಥ್ಯ ಮತ್ತು ಸಂಖ್ಯೆಗಳ ಜ್ಞಾನದ ವಿಷಯದಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ವೇಗಗೊಳಿಸಲು ಈಗ ಹೆಚ್ಚಿನ ಮೌಲ್ಯವರ್ಧನೆ ಅಗತ್ಯವಿದೆ' ಎಂದು ತಿಳಿಸಿದರು.

ಐಐಎಂಬಿ ನಿರ್ದೇಶಕ ಪ್ರೊ.ರಿಷಿಕೇಷ್ ಟಿ.ಕೃಷ್ಣ ಮಾತನಾಡಿ, 'ಐದು ವರ್ಷಗಳ ಅವಧಿಯಲ್ಲಿ ₹ 13 ಕೋಟಿ ವೆಚ್ಚದಲ್ಲಿ ಎನ್‌ಎಸ್‌ಆರ್‌ಸಿಇಎಲ್‌ನಲ್ಲಿ ಫಿನ್‌ಟೆಕ್‌ನಲ್ಲಿ ಉತ್ಕೃಷ್ಟತಾ ಕೇಂದ್ರ ಸ್ಥಾಪಿಸಲು ರಾಜ್ಯ ಸರ್ಕಾರ ಅನುಮೋದಿಸಿದೆ' ಎಂದರು.

ಐಐಎಂಬಿ ಆಡಳಿತ ಮಂಡಳಿ ಸದಸ್ಯೆ ಪ್ರೊ.ಮಾಳವಿಕಾ ಆರ್. ಹರಿತಾ ಮಾತನಾಡಿದರು. ಹಳೆ ವಿದ್ಯಾರ್ಥಿಗಳಿಗೆ ಸೇವಾ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಸೀಬೆ, ಸೀತಾಫಲ ಮತ್ತು ದಾಳಿಂಬೆ ಹಣ್ಣುಗಳ ಮಾರಾಟ

ಹಾಪ್‌ಕಾಮ್ಸ್: ಇಂದಿನಿಂದ 'ಹಣ್ಣುಗಳ ಮೇಳ'

ಪ್ರಜಾವಾಣಿ ವಾರ್ತೆ

ಹಣ್ಣುಗಳು	ಪ್ರಸ್ತುತ ಮಾರಾಟ ದರ (ಕೆ.ಜಿಗೆ ₹ಗಳಲ್ಲಿ)	ಶೇ 10 ರಿಯಾಯಿತಿ (ಕೆ.ಜಿಗೆ ₹ಗಳಲ್ಲಿ)
ದಾಳಿಂಬೆ (ಭಗವಾ/ಕೇಸರ್)	220	198
ಸೀಬೆ (ಅಲಹಾಬಾದ್ ಸಫೇದ್)	86	78
ಸೀಬೆ (ತೈವಾನ್)	105	95
ಸೀಬೆ (ಡೈಮಂಡ್ ರೆಡ್)	142	128
ಸೀತಾಫಲ:(ಸಹನಾ)	163	146
ಸೀತಾಫಲ: ಸಹನಾ(ಎಕಾನಮಿ)	148	135
ಸೀತಾಫಲ (ಸ್ಥಳೀಯ)	105	95

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಅಂಗವಾಗಿ ನಗರದ ಪ್ರಮುಖ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಅ.31 ರಿಂದ ನ.11ರವರೆಗೆ ಸೀತಾಫಲ, ಸೀಬೆ ಹಾಗೂ ದಾಳಿಂಬೆ ಹಣ್ಣುಗಳ ಮೇಳವನ್ನು ಆಯೋಜಿಸಲಾಗಿದೆ.

'ವಿವಿಧ ತಳಿಗಳ ಹಣ್ಣುಗಳು ಮೇಳದಲ್ಲಿ ಲಭ್ಯವಿವೆ. ಮೇಳದ ಅಂಗವಾಗಿ ಶೇ 10ರಷ್ಟು ರಿಯಾಯಿತಿ ದರದಲ್ಲಿ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ' ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಗೋಪಾಲಕೃಷ್ಣ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಭಗವಾ / ಕೇಸರ್ ತಳಿಯ ದಾಳಿಂಬೆ, ಅಲಹಾಬಾದ್ ಸಫೇದ್, ತೈವಾನ್ ಹಾಗೂ ಡೈಮಂಡ್ ರೆಡ್ ತಳಿಗಳ ಸೀಬೆ ಮತ್ತು ಸಹನಾ ಹಾಗೂ ಸ್ಥಳೀಯ ತಳಿಗಳ ಸೀತಾಫಲ ಹಣ್ಣುಗಳು ಮೇಳದಲ್ಲಿರಲಿವೆ. ರಾಜ್ಯದಲ್ಲಿ ವಾರ್ಷಿಕವಾಗಿ ಅಂದಾಜು 2.97 ಲಕ್ಷ ಟನ್ ದಾಳಿಂಬೆ, 1.64 ಲಕ್ಷ ಟನ್ ಸೀಬೆ ಮತ್ತು ಏಳು ಸಾವಿರ ಟನ್‌ನಷ್ಟು ಸೀತಾಫಲ ಬೆಳೆಯಲಾಗುತ್ತದೆ. ಸೊಸೈಟಿಯ ಸದಸ್ಯ ರೈತರು ಮತ್ತು ಗ್ರಾಹಕರ ಅನುಕೂಲಕ್ಕಾಗಿ ಈ ಹಣ್ಣಿನ ಮೇಳ ಆಯೋಜಿಸಲಾಗುತ್ತಿದೆ' ಎಂದು ಅವರು ವಿವರಿಸಿದರು.

ಬೆಂಗಳೂರು ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸಹಕಾರದೊಂದಿಗೆ ನಗರದ ವಿವಿಧ ಅಪಾರ್ಟ್‌ಮೆಂಟ್‌ಗಳಲ್ಲಿ 'ಸಂಚಾರಿ ಮಳಿಗೆ'ಗಳ ಮೂಲಕವೂ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಮುನೇಗೌಡ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಮಿರ್ಜಿ, ಪ್ರಧಾನ ವ್ಯವಸ್ಥಾಪಕ ಜಯಪ್ರಕಾಶ್, ನಿರ್ದೇಶಕರು ಹಾಗೂ ಇಂಟೆಗ್ರಾ ಮೈಕ್ರೊಸಿಸ್ಟಂ ಕಂಪನಿಯ ಮಾರಾಟ ವಿಭಾಗದ ಸಲಹೆಗಾರ ಸಾಯಿ ಪ್ರಭು ಹಾಜರಿದ್ದರು.

ಮುಖ್ಯಾಂಶಗಳು

- ರಾಜ್ಯೋತ್ಸವ, ದೀಪಾವಳಿ ಹಬ್ಬಕ್ಕಾಗಿ ಮೇಳ
- ಮೇಳ ನ.11ರವರೆಗೆ ನಡೆಯಲಿದೆ
- ಆಯ್ದ ಮಳಿಗೆಗಳಲ್ಲಿ ಶೇ 10ರಷ್ಟು ರಿಯಾಯಿತಿ



'ಹಾಪ್‌ಕಾಮ್ಸ್'ನ ಪ್ರಧಾನ ವ್ಯವಸ್ಥಾಪಕ ಜಯಪ್ರಕಾಶ್, ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಶಂಕರ್ ಮಿರ್ಜಿ, ಆನ್‌ಲೈನ್ ಸರ್ವಿಸ್ ಪ್ರೊವೈಡರ್ ರಿಷಬ್ ಜೈನ್, ಅಧಿಕಾರಿ ಭರತ್ ಕುಮಾರ್ ಅವರು ಸೀಬೆ, ಸೀತಾಫಲ, ದಾಳಿಂಬೆ ಹಣ್ಣುಗಳನ್ನು ಪ್ರದರ್ಶಿಸಿದರು

ಆನ್‌ಲೈನ್‌ನಲ್ಲೂ ಲಭ್ಯ

ಹಣ್ಣುಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡಲು ಹಾಪ್‌ಕಾಮ್ಸ್, ಜಕ್ಕೂರು ಟೆಕ್ನೊಪಾರ್ಕ್ ಕಂಪನಿಯ (ಜೆಟಿಪಿಎಲ್) ಭಾಗವಾದ ಇಂಟೆಗ್ರಾ ಮೈಕ್ರೊಸಿಸ್ಟಂ ಪ್ರೈವೇಟ್ ಲಿಮಿಟೆಡ್‌ನೊಂದಿಗೆ ಕೈಜೋಡಿಸಿದೆ. ಈ ಕಂಪನಿ ಅಭಿವೃದ್ಧಿಪಡಿಸಿರುವ ಒಎನ್‌ಡಿಸಿ (ONDC – Open Network for Digital Commerce) ಆ್ಯಪ್ ಮೂಲಕ ಹಣ್ಣುಗಳಿಗೆ ಬೇಡಿಕೆ ಸಲ್ಲಿಸಬಹುದು. ಹಾಪ್‌ಕಾಮ್ಸ್‌ನ 20 ಮಳಿಗೆಗಳಿಂದ ಆನ್‌ಲೈನ್ ಮೂಲಕ ಹಣ್ಣುಗಳನ್ನು ಖರೀದಿಸಬಹುದು. ಆ ಮಳಿಗೆಗಳ ಪಟ್ಟಿ ಆ್ಯಪ್‌ನಲ್ಲಿದೆ. ಗ್ರಾಹಕರು ಸಮೀಪದ ಮಳಿಗೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಮುನೇಗೌಡ ವಿವರಿಸಿದರು.

ವಿದೇಶಿ ನೇರ ಬಂಡವಾಳ ಆಕರ್ಷಣೆಯಲ್ಲಿ ಗುಜರಾತ್ ಹಿಂದಿಕ್ಕಿದ ಕರ್ನಾಟಕ

ಮೂಲಸೌಕರ್ಯಕ್ಕೆ ₹1.31 ಲಕ್ಷ ಕೋಟಿ

ಯಾವುದಕ್ಕೆ ಎಷ್ಟು ವೆಚ್ಚ? (ಸಾವಿರ ಕೋಟಿಗಳಲ್ಲಿ)

₹40 ಒಟ್ಟು ಮಾಡಿದ ಖರ್ಚು 40 ಕಿ.ಮೀ ಉದ್ದದ ಸುರಂಗ ರಸ್ತೆ	₹40 ನಮ್ಮ ಮೆಟ್ರೊ 3ನೇ ಹಂತ ವಿಸ್ತರಣೆ (80 ಕಿ.ಮೀ)	₹27 ಬೆಂಗಳೂರು ಬ್ಯುಸಿನೆಸ್ ಕಾರಿಡಾರ್	₹12 100 ಕಿ.ಮೀ ಎತ್ತರಿಸಿದ ಕಾರಿಡಾರ್	₹9 ಡಬಲ್ ಡೆಕ್ಕರ್ ಮೆಟ್ರೊ ಹಳಿಗಳು	₹3 ಪೆರಿಫೆರಲ್ ರಸ್ತೆ	₹500 ಕೋಟಿ ಸ್ಕೈಡೆಕ್ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗ ರಸ್ತೆ, ನಮ್ಮ ಮೆಟ್ರೊ ಡಬಲ್ ಡೆಕ್ಕರ್, ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಸೇರಿ ನಗರದ ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ₹1,31,500 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಜಿಸಿದ್ದಾರೆ.

ನಗರದಲ್ಲಿ ಜೀವನದ ಗುಣಮಟ್ಟವನ್ನು ಸುಧಾರಿಸಲು ಹಾಗೂ ವ್ಯಾಪಾರ ಮತ್ತು ತಂತ್ರಜ್ಞಾನದ ಜಾಗತಿಕ ಕೇಂದ್ರವಾಗಿ ಬೆಂಗಳೂರನ್ನು ಅಭಿವೃದ್ಧಿಗೊಳಿಸಲು ಯೋಜನೆಗಳನ್ನು ರೂಪಿಸಲಾಗಿದೆ. ಮೂಲಸೌಕರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಮೇಲೆ ನಗರದ ಚಿತ್ರಣವೇ ಬದಲಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೀರ್ಘಕಾಲೀನ ಅಭಿವೃದ್ಧಿಗಾಗಿ ಮೂಲಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ರಾಜ್ಯ ಜಿಎಸ್‌ಡಿಪಿ ಅಭಿವೃದ್ಧಿ ದರವನ್ನು ಶೇ 14ರಷ್ಟು ಸಾಧಿಸುವ ಗುರಿ ಹೊಂದಲಾಗಿದೆ. ಪ್ರಮುಖ ಯೋಜನೆಗಳಿಗೆ ₹16,750 ಕೋಟಿ ಸಹಾಯ ಪಡೆಯಲು ವಿಶ್ವಬ್ಯಾಂಕ್ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಜತೆ ಮಾತುಕತೆ ನಡೆಸುತ್ತಿದ್ದೇವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಸಾಲಗಳಲ್ಲಿ, ಬೆಂಗಳೂರು ವಿಪತ್ತು ನಿರ್ವಹಣೆಗೆ ₹3,500 ಕೋಟಿ, ನಗರ ನೀರು ಸರಬರಾಜು ಆಧುನೀಕರಣಕ್ಕೆ ₹1,200 ಕೋಟಿ, ಕರಾವಳಿ ಕರ್ನಾಟಕದಲ್ಲಿ ಸಾಗರ ಸಂಬಂಧಿ ಆರ್ಥಿಕತೆ ಅಭಿವೃದ್ಧಿಗೆ ₹600 ಕೋಟಿ, ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ₹3,650 ಕೋಟಿ, ಹವಾಮಾನ ಪೂರಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ₹3,600 ಕೋಟಿ, ಸರ್ಕಾರಿ ಶಾಲೆಗಳ ಮೂಲಸೌಕರ್ಯಕ್ಕಾಗಿ ₹2,800 ಕೋಟಿ, ಎಲೆಕ್ಟ್ರಿಕ್ ಬಸ್‌ಗಳಿಗಾಗಿ ₹1,400 ಕೋಟಿಯನ್ನು ಬಳಸಲಾಗುತ್ತದೆ ಎಂದಿದ್ದಾರೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಹೆಬ್ಬಾಳದಿಂದ ಜಯನಗರ (19 ಕಿ.ಮೀ) ಮತ್ತು ಮಾರತ್‌ಹಳ್ಳಿಯಿಂದ ಮೈಸೂರು ರಸ್ತೆ (24 ಕಿ.ಮೀ) - ನಗರದ ಉತ್ತರ-ದಕ್ಷಿಣ ಮತ್ತು ಪೂರ್ವ-ಪಶ್ಚಿಮಕ್ಕೆ ಸಂಪರ್ಕ ಕಲ್ಪಿಸುವ ಎರಡು ಸುರಂಗಗಳನ್ನು ನಿರ್ಮಿಸುವ ಯೋಜನೆ ಇದೆ. ಬಿಬಿಎಂಪಿಯ ₹14,000 ಕೋಟಿ ಸಾಲ ಪಡೆದು, ಟಿಡಿಆರ್ ಮೂಲಕ ₹5,000 ಕೋಟಿ ಸಂಗ್ರಹಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ ಹಣಕಾಸು ಸಾಲಿನ ಆರಂಭಿಕ ಏಳು ತಿಂಗಳಲ್ಲಿ ರಾಜ್ಯವು ₹1,03,683 ಕೋಟಿ ಆದಾಯ ಸಂಗ್ರಹಿಸಿದೆ.

₹1.95 ಲಕ್ಷ ಕೋಟಿ ಆದಾಯ ಸಂಗ್ರಹ ಗುರಿ: ಸಿದ್ದರಾಮಯ್ಯ



ಪ್ರಸ್ತುತ ಹಣಕಾಸು ವರ್ಷದಲ್ಲಿ ₹1,95,525 ಕೋಟಿ ಆದಾಯ ಸಂಗ್ರಹ ಗುರಿ ಹೊಂದಲಾಗಿದೆ. ಈಗಾಗಲೇ ಶೇ 53ರಷ್ಟು ಗುರಿ ಸಾಧಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ರಾಜ್ಯ ಆದಾಯ ಸಂಗ್ರಹದಲ್ಲಿ ಶೇ 11.2ರಷ್ಟು ಪ್ರಗತಿಯನ್ನು ದಾಖಲಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಉದ್ಯಮ ಸ್ನೇಹಿ ನೀತಿಗಳು ಹಾಗೂ ಉತ್ತಮ ಆರ್ಥಿಕ ನೀತಿಗಳಿಂದಾಗಿ ವಿದೇಶಿ ಬಂಡವಾಳ ಹೂಡಿಕೆಯಲ್ಲೂ ಹೆಚ್ಚಿನ ಪ್ರಗತಿ ಸಾಧ್ಯವಾಗಿದೆ. 2024-25ರ ಪ್ರಥಮ ತ್ರೈಮಾಸಿಕದಲ್ಲಿ ರಾಜ್ಯವು ₹2.2 ಶತಕೋಟಿ ನೇರ ವಿದೇಶಿ ಬಂಡವಾಳ ಆಕರ್ಷಿಸಿದ್ದು, ಗುಜರಾತ್ ಹಿಂದಿಕ್ಕಿ ದೇಶದಲ್ಲಿ ಎರಡನೇ ಸ್ಥಾನಕ್ಕೆ ಏರಿದೆ ಎಂದಿದ್ದಾರೆ.

ಪ್ರಸ್ತುತ ಸಾಲಿನಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಬಜೆಟ್‌ನಲ್ಲಿ ಘೋಷಿಸಿರುವ ₹52,009 ಕೋಟಿ ಪೈಕಿ ಈಗಾಗಲೇ ₹24,235 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ವಯನಾಡ್ ಭೂಕುಸಿತ ಸಂತ್ರಸ್ತರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಸಮರ್ಪಕ ಪುನರ್ವಸತಿ ಸೌಲಭ್ಯ ಕಲ್ಪಿಸಿಲ್ಲ ಎಂದು ಬೇಸರಗೊಂಡಿರುವ ವಯನಾಡ್‌ನ ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳ ಭೂಕುಸಿತ ಸಂತ್ರಸ್ತರು ಈಗ ಪ್ರತಿಭಟನೆ ಆರಂಭಿಸಿದ್ದಾರೆ.

ಈಚೆಗೆ ಸಂತ್ರಸ್ತರು ಕಾರ್ಯಪಡೆ ರಚಿಸಿಕೊಂಡಿದ್ದಾರೆ. ಅದರ ನೇತೃತ್ವದಲ್ಲಿಯೇ ಬುಧವಾರ ವಯನಾಡ್ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಯಿತು.

ಶಾಶ್ವತ ಪುನರ್ವಸತಿ ಕ್ರಮಗಳನ್ನು ಚುರುಕುಗೊಳಿಸಬೇಕು, ಬದುಕಿಗೆ ನೆರವಾಗಬೇಕು. ಬ್ಯಾಂಕ್ ಸಾಲ ಬಾಕಿ ಮನ್ನಾ ಮಾಡಬೇಕು, ನಾಪತ್ತೆ ಆಗಿರುವ 47 ಜನರಿಗೆ ಶೋಧ ಮುಂದುವರಿಸಬೇಕು ಎಂಬುದು ಬೇಡಿಕೆಗಳು.

ದೇಹದ ಅಂಗಾಂಗಗಳು ಪತ್ತೆಯಾಗಿರುವ ಪ್ರಕರಣದಲ್ಲಿ ಮೃತರ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಸುವ ಪ್ರಕ್ರಿಯೆಯೂ ವಿಳಂಬವಾಗಿದೆ ಎಂದೂ ಸಂತ್ರಸ್ತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಂತ್ರಸ್ತರಿಗೆ ವಸತಿ ಸೌಲಭ್ಯ ಕಲ್ಪಿಸಲಿಕ್ಕಾಗಿ ಉಪನಗರ ನಿರ್ಮಿಸಲು ರಾಜ್ಯ ಸರ್ಕಾರ ಎರಡು ಚಹಾ ತೋಟಗಳನ್ನು ಗುರುತಿಸಿದೆ. ಆದರೆ, ಅವುಗಳ ಸ್ವಾಧೀನ ಸಾಧ್ಯವಿಲ್ಲ. ಕಾನೂನು ತೊಡಕು ಉಂಟಾಗಿದೆ ಎಂದು ಹೇಳಲಾಗಿದೆ.

ಈ ಮಧ್ಯೆ, 'ಸಂತ್ರಸ್ತರಿಗೆ ಹಣಕಾಸು ನೆರವು ಸೌಲಭ್ಯವನ್ನು ತ್ವರಿತಗತಿಯಲ್ಲಿ ಒದಗಿಸಲು ಪರಿಣಾಮಕಾರಿ ವ್ಯವಸ್ಥೆ ರೂಪಿಸಬೇಕು' ಎಂದು ಕೇರಳ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಬುಧವಾರ ನಿರ್ದೇಶಿಸಿದೆ.

ದುರಂತವನ್ನು ರಾಷ್ಟ್ರೀಯ ಪ್ರಾಕೃತಿಕ ವಿಕೋಪ ಎಂದು ಘೋಷಿಸಬೇಕೇ ಎನ್ನುವುದು ಉನ್ನತಾಧಿಕಾರ ಸಮಿತಿಯ ಪರಿಶೀಲನೆಯಲ್ಲಿದೆ. ತೀರ್ಮಾನವನ್ನು ಶೀಘ್ರ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರವು ಕೋರ್ಟ್‌ಗೆ ಮಾಹಿತಿ ನೀಡಿತು. ಸಂತ್ರಸ್ತರಿಗೆ ನಿತ್ಯ ₹300 ರೂಪಾಯಿ ಆರ್ಥಿಕ ನೆರವು ಒದಗಿಸುವ ಕಾರ್ಯಕ್ರಮವನ್ನು ಮತ್ತೆ 30 ದಿನ ವಿಸ್ತರಿಸಲಾಗುವುದು ಎಂದು ತಿಳಿಸಿತು.

ಆಸ್ತಿ ತೆರಿಗೆ ಬಾಕಿ: ಕಾರ್ಯಾಚರಣೆ ಆರಂಭಿಸಿದ ಬಿಬಿಎಂಪಿ

115 ಕಟ್ಟಡಗಳಿಗೆ ಬೀಗಮುದ್ರೆ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸುಸ್ತಿದಾರರಿಗೆ ಹಲವು ನೋಟಿಸ್ ನೀಡಿದ್ದರೂ ಬಾಕಿ ಪಾವತಿಸದಿದ್ದರಿಂದ ಕಟ್ಟಡಗಳಿಗೆ ಬೀಗಮುದ್ರೆ ಹಾಕುವ ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದೆ.

ಬುಧವಾರ ಸಂಜೆಯ ವೇಳೆಗೆ ಎಂಟೂ ವಲಯದಲ್ಲಿ 115 ಕಟ್ಟಡಗಳಿಗೆ ಬೀಗ ಹಾಕಲಾಗಿದೆ. ಪೂರ್ವ ವಲಯದಲ್ಲಿ ಅತಿ ಹೆಚ್ಚು ಕಟ್ಟಡಗಳಿಗೆ (32) ಬೀಗಮುದ್ರೆ ಹಾಕಲಾಗಿದೆ. ಪಶ್ಚಿಮದಲ್ಲಿ 30, ರಾಜರಾಜೇಶ್ವರಿ ನಗರದಲ್ಲಿ 17, ದಕ್ಷಿಣದಲ್ಲಿ 13, ಯಲಹಂಕದಲ್ಲಿ ಎಂಟು ಹಾಗೂ ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ ವಲಯಗಳಲ್ಲಿ ತಲಾ ಐದು ಕಟ್ಟಡಗಳಿಗೆ ಬೀಗ ಹಾಕಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಪೂರ್ವ ವಲಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ವಸತಿಯೇತರ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗುತ್ತಿದೆ ಎಂದು ವಲಯ ಆಯುಕ್ತೆ ಸ್ನೇಹಲ್ ತಿಳಿಸಿದರು.

ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಮಿಟ್ಟಲ್ ಟವರ್‌ನಲ್ಲಿ ಆಸ್ತಿ ತೆರಿಗೆ ಪಾವತಿಸದ ಗೋಯಲ್ ಆಸ್ತಿಗೆ ಬುಧವಾರ ಬೀಗಮುದ್ರೆ ಹಾಕಲು ಮುಂದಾದಾಗ, ಆಸ್ತಿ ಮಾಲೀಕರು ಬಾಕಿಯಿದ್ದ ₹17,42,412 ತೆರಿಗೆಯನ್ನು ಕೂಡಲೇ ಪಾವತಿಸಿದರು ಎಂದು ಹೇಳಿದರು.

ವಿಭಾಗವಾರು ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರು ಹಾಗೂ ಪರಿಷ್ಕರಣೆ ಪ್ರಕರಣಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಸಮಯಾವಕಾಶವನ್ನು ನೀಡಿದ್ದರೂ ಆಸ್ತಿ ತೆರಿಗೆಯನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಬೀಗಮುದ್ರೆ ಹಾಕಿ, ಬಾಕಿ ಆಸ್ತಿ ತೆರಿಗೆ ವಸೂಲಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಪೂರ್ವ ವಲಯ ವ್ಯಾಪ್ತಿಯಲ್ಲಿ 2,418 ಪರಿಷ್ಕರಣೆ ಪ್ರಕರಣಗಳ ಆಸ್ತಿಗಳಿಂದ ಸುಮಾರು ₹66 ಕೋಟಿ ಆಸ್ತಿ ತೆರಿಗೆ ಬಾಕಿ ಇದೆ. 32,584 ಸುಸ್ತಿದಾರರಿಂದ ₹61.76 ಕೋಟಿ ಬಾಕಿ ಇದೆ. ಅಭಿಯಾನದ ಮೂಲಕ ಹಂತಹಂತವಾಗಿ ಎಲ್ಲಾ ಆಸ್ತಿಗಳಿಂದ ಬಾಕಿ ಆಸ್ತಿ ತೆರಿಗೆ ಸಂಗ್ರಹಿಸಲಾಗುವುದೆಂದು ಹೇಳಿದರು.

ವಲಯ ಜಂಟಿ ಆಯುಕ್ತೆ ಸರೋಜಾ, ಕಂದಾಯ ಅಧಿಕಾರಿ ಪ್ರಕಾಶ್, ಸಹಾಯಕ ಕಂದಾಯ ಅಧಿಕಾರಿ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಇ–ಖಾತಾಗೆ ಇ.ಸಿ ಬೇಡ

ಅಂತಿಮ ಇ–ಖಾತಾವನ್ನು ಪಡೆಯಲು ಆನ್‌ಲೈನ್‌ನಲ್ಲಿ ಋಣಭಾರ ಪ್ರಮಾಣ ಪತ್ರ (ಇ.ಸಿ) ಸಲ್ಲಿಸುವುದರಿಂದ ಆಸ್ತಿ ಮಾಲೀಕರಿಗೆ ಬಿಬಿಎಂಪಿ ವಿನಾಯಿತಿ ನೀಡಿದೆ.

ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಅಥವಾ ಖಾತಾ ವರ್ಗಾವಣೆ ಉದ್ದೇಶಕ್ಕಾಗಿ ಇ-ಖಾತಾ ಅನ್ನು ವಿತರಿಸಬೇಕಾದರೆ ಮಾತ್ರ ಇಸಿ ನೀಡಬೇಕಾಗುತ್ತದೆ. ಆದರೆ, ಶೇ 98ರಷ್ಟು ಆಸ್ತಿಗಳು ಈ ಪ್ರಕ್ರಿಯೆಯನ್ನು ಒಂದು ವರ್ಷದಲ್ಲಿ ಮಾಡುವುದಿಲ್ಲ. ಹೀಗಾಗಿ, ಇ.ಸಿ ಅಪ್‌ಲೋಡ್‌ನಿಂದ ವಿನಾಯಿತಿ ನೀಡಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಆಸ್ತಿ ಮಾಲೀಕರು ತಮ್ಮ ಇತರ ವಿವರಗಳನ್ನು ಅಪ್‌ಲೋಡ್ ಮಾಡಿದ ನಂತರ, ಅಂತಿಮ ಇ-ಖಾತವನ್ನು https://BBMPeAasthi.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.



ಅನ್ನಸಂದ್ರ ಪಾಳ್ಯದಲ್ಲಿ ಶಿಥಿಲಾವಸ್ಥೆ ಕಟ್ಟಡವನ್ನು ಬುಧವಾರ ತೆರವುಗೊಳಿಸಲಾಯಿತು

ಶಿಥಿಲಾವಸ್ಥೆ ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮಹದೇವಪುರ ವಲಯದ ಎಚ್‌ಎಎಲ್ ಉಪ ವಿಭಾಗದ ಅನ್ನಸಂದ್ರ ಪಾಳ್ಯದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡ ತೆರವುಗೊಳಿಸುವ ಕಾರ್ಯಾಚರಣೆಯನ್ನು ಬಿಬಿಎಂಪಿ ಬುಧವಾರ ಆರಂಭಿಸಿತು.

ಅನ್ನಸಂದ್ರಪಾಳ್ಯ, ಒಂದನೇ ಮುಖ್ಯರಸ್ತೆ, ಒಂದನೇ ಅಡ್ಡರಸ್ತೆಯ 707ರ ಸ್ವತ್ತು ಫಿರೋಜ್ ಖಾನ್ ಅವರ ಮಾಲೀಕತ್ವದಲ್ಲಿದೆ. 30x60 ಚದರ ಅಡಿಗಳ ವಿಸ್ತೀರ್ಣದ ನಿವೇಶನದಲ್ಲಿ ಸುಮಾರು 40 ವರ್ಷಗಳ ಹಿಂದೆ ನಿರ್ಮಿಸಿದ್ದ ನೆಲ ಮತ್ತು ಒಂದನೇ ಮಹಡಿ ಕಟ್ಟಡವು ಶಿಥಿಲಾವಸ್ಥೆಯಲ್ಲಿರುತ್ತದೆ. ಮುನ್ನೆಚ್ಚರಿಕೆ ಕ್ರಮವಾಗಿ ಈ ಕಟ್ಟಡವನ್ನು ತೆರವುಗೊಳಿಸಲು ಬಿಬಿಎಂಪಿ ನೋಟಿಸ್ ಜಾರಿ ಮಾಡಿತ್ತು.

ಸಮಯಾವಕಾಶ ನೀಡಿದ್ದರೂ ಅವರು ಕಟ್ಟಡ ತೆರವು ಮಾಡಿರಲಿಲ್ಲ. ಶಿಥಿಲಾವಸ್ಥೆ ಕಟ್ಟಡದಿಂದ ಅನಾಹುತ ಸಂಭವಿಸಬಹುದಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಎಚ್‌ಎಎಲ್ ಉಪ ವಿಭಾಗದ ವತಿಯಿಂದಲೇ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೋಮನಾಥ್ ಜಾಧವ್ ತಿಳಿಸಿದ್ದಾರೆ.

ರಾಜ್ಯೋತ್ಸವ: ಬಿಬಿಎಂಪಿ ಕನ್ನಡಮಯ

ಪ್ರಜಾವಾಣಿ ವಾರ್ತೆ



ಬಿಬಿಎಂಪಿ ಕೇಂದ್ರ ಕಚೇರಿ ಕಟ್ಟಡಕ್ಕೆ ಕನ್ನಡ ಧ್ವಜ ಹೊದಿಸಿ, ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಎನ್.ಆರ್. ಕಾಲೊನಿಯಲ್ಲಿರುವ ಬಿಬಿಎಂಪಿ ಕೇಂದ್ರ ಕಚೇರಿ ಕಟ್ಟಡ ಹಾಗೂ ಆವರಣ ಕೆಂಪು–ಹಳದಿ ಬಣ್ಣಗಳಿಂದ ತುಂಬಿಹೋಗಿದೆ.

ಕೇಂದ್ರ ಕಚೇರಿಯ ಪ್ರಮುಖ ಕಟ್ಟಡಕ್ಕೆ ಕನ್ನಡ ಧ್ವಜವನ್ನು ಹೊದಿಸಲಾಗಿದ್ದು, ಕೆಂಪು–ಹಳದಿಯ ವಿದ್ಯುತ್ ದೀಪಗಳನ್ನೂ ಅಳವಡಿಸಲಾಗಿದೆ. ಬುಧವಾರ ಮಧ್ಯಾಹ್ನದಿಂದಲೇ ತಯಾರಿ ಆರಂಭವಾಗಿ, ಸಂಜೆಯ ವೇಳೆಗೆ ದೀಪಗಳು ಝಗಮಗಿಸುತ್ತಿದ್ದವು.

ಅನೆಕ್ಸ್ ಕಟ್ಟಡಗಳಿಗೂ ಕನ್ನಡ ಧ್ವಜವನ್ನು ಹೊದಿಸಲಾಗಿದ್ದು, ಎಲ್ಲೆಡೆ ಕನ್ನಡಮಯ ವಾತಾವರಣವನ್ನು ಸೃಷ್ಟಿಸಲಾಗಿದೆ. ಕಲ್ಲಿನ ಕಟ್ಟಡಗಳೆಲ್ಲವೂ ಕನ್ನಡ ಧ್ವಜವನ್ನು ಹೊದ್ದುಕೊಂಡು ಕಂಗೊಳಿಸುತ್ತಿವೆ. ಗೇಟ್‌ಗಳು ಹಾಗೂ ಗ್ರಿಲ್‌ಗಳಿಗೆ ಕನ್ನಡ ಧ್ವಜದ ಜೊತೆಗೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ.

ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ನವೆಂಬರ್ 6ರಂದು 'ಕರ್ನಾಟಕ ರಾಜ್ಯೋತ್ಸವ' ಹಾಗೂ 'ಪುನೀತ್ ರಾಜ್‌ಕುಮಾರ್ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ. ಈ ಕಾರಣದಿಂದ ಬಿಬಿಎಂಪಿ ಕೇಂದ್ರ ಕಚೇರಿಯ ಆವರಣವನ್ನು ಸಜ್ಜುಗೊಳಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ. ಅಮೃತ್‌ರಾಜ್ ತಿಳಿಸಿದರು.

ನಕಲಿ ನಕ್ಷೆ: ಮಾಲೀಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯದ ಮಲ್ಲತಹಳ್ಳಿಯಲ್ಲಿ ನಕಲಿ ನಕ್ಷೆ ಸಿದ್ಧಪಡಿಸಿಕೊಂಡು ಕಟ್ಟಡ ನಿರ್ಮಿಸುತ್ತಿದ್ದವರ ವಿರುದ್ಧ ಬಿಬಿಎಂಪಿಯು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆ.

ಮಲ್ಲತಹಳ್ಳಿ ಗ್ರಾಮದ ಸರ್ವೆ ನಂಬರ್ 6 ಮತ್ತು 7ರ ಜಮೀನಿನ ಮಾಲೀಕರಾದ ಜಿ. ಲಕ್ಷ್ಮಿ ಪ್ರಸಾದ್, ಜಿಪಿಎ ಹೊಂದಿರುವ ಲ್ಯಾಕ್ವೆನ್ ಡೆವಲಪರ್ಸ್ ಪಾಲುದಾರರಾದ ಡಿ. ಹರ್ದೀಪ್ ಮತ್ತು ಎ. ವಿಜಯಕುಮಾರ್ ಅವರಿಗೆ ಕಟ್ಟಡದ ನಕ್ಷೆಯನ್ನು (ಪಿ.ಆರ್.ಜೆ ನಂ-3384/23-24) 2023ರ ನವೆಂಬರ್ 3ರಂದು ಬಿಬಿಎಂಪಿ ಅನುಮೋದಿಸಿದೆ.

ಮಂಜೂರು ನಕ್ಷೆಯಂತೆ ನೆಲ ಮಾಳಿಗೆ, ನೆಲ ಅಂತಸ್ತು, ಮೂರು ಅಂತಸ್ತು ಮತ್ತು ಟೆರಸ್ ಅಂತಸ್ತು ಸೇರಿ 1388.69 ಚದರ ಮೀಟರ್ ನಿರ್ಮಿತ ಪ್ರದೇಶವಿರಬೇಕು. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ನಕಲಿ ನಕ್ಷೆ ಸೃಷ್ಟಿಸಿಕೊಂಡು, ಆರು ಅಂತಸ್ತು ನಿರ್ಮಿಸಲಾಗುತ್ತಿದೆ. ಒಂದು ಅಂತಸ್ತಿಗೆ ನಾಲ್ಕು ಮನೆಗಳಂತೆ ಒಟ್ಟು 20 ಘಟಕಗಳನ್ನು ನಿರ್ಮಿಸಲಾಗುತ್ತಿದೆ. ನಕಲಿ ನಕ್ಷೆ ತಯಾರಿಸಿ ಪಾಲಿಕೆಗೆ ಮೋಸ ಮಾಡಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ನೋಟಿಸ್ ನೀಡಲಾಗಿದೆ.

ನಕಲಿ ನಕ್ಷೆ ತಯಾರಿಸಿರುವುದರಿಂದ ಮಾಲೀಕರು ಹಾಗೂ ಡೆವಲಪರ್ಸ್, ವಾಸ್ತುಶಿಲ್ಪಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿದ್ದು, ಎಫ್‌ಐಆರ್ ದಾಖಲಾಗಿದೆ ಎಂದು ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ ಆಯುಕ್ತ ಬಿ.ಸಿ. ಸತೀಶ್ ತಿಳಿಸಿದ್ದಾರೆ.



ಮಲ್ಲತಹಳ್ಳಿಯಲ್ಲಿ ನಕಲಿ ನಕ್ಷೆ ಸೃಷ್ಟಿಸಿಕೊಂಡು ನಿರ್ಮಿಸಿಕೊಂಡಿರುವ ಕಟ್ಟಡ

ತಾಲ್ಲೂಕು ಕಚೇರಿಗೆ ಕೃಷ್ಣಬೈರೇಗೌಡ ದಿಢೀರ್ ಭೇಟಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಚಿವರು ಭೇಟಿ ನೀಡಿದ ವೇಳೆ, ಕೆಲ ಅಧಿಕಾರಿಗಳು ಕಚೇರಿಯಲ್ಲಿರಲಿಲ್ಲ. ಕರ್ತವ್ಯಕ್ಕೆ ಗೈರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಯವರಿಗೆ ಸೂಚನೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ತಾಲ್ಲೂಕು ಕಚೇರಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿದಾಗ ತಹಶೀಲ್ದಾರ್, ವಿಶೇಷ ತಹಶೀಲ್ದಾರ್ ಸೇರಿದಂತೆ ಹಲವರು ಕರ್ತವ್ಯಕ್ಕೆ ಗೈರಾಗಿರುವುದು ಕಂಡುಬಂತು. ಹಾಜರಾತಿ ದಾಖಲೆ ಪುಸ್ತಕದಲ್ಲಿ ತಮ್ಮ ಚಲನವಲನ ಬಗ್ಗೆ ಅಧಿಕಾರಿಗಳು ನಮೂದಿಸಬೇಕು. ಯಾವ ಕಾರಣಕ್ಕಾಗಿ ಹೊರಗೆ ಹೋಗುವುದಾಗಿ ನಮೂದಿಸಿಲ್ಲ' ಎಂದರು.

'ಸರ್ಕಾರಿ ಜಮೀನು ಒತ್ತುವರಿ ತೆರವು ವಿಚಾರದಲ್ಲಿ ನಿರ್ಲಕ್ಷ್ಯ, ಭೂ ದಾಖಲೆ ನೀಡುತ್ತಿಲ್ಲ ಎಂಬ ಸಾಕಷ್ಟು ದೂರುಗಳು ಕೇಳಿಬಂದಿದೆ. ಗೈರಾಗಿರುವ ಅಧಿಕಾರಿಗಳು ಬಗ್ಗೆ ಹಾಗೂ ಅವ್ಯವಸ್ಥೆ ಬಗ್ಗೆ ವರದಿ ನೀಡುವಂತೆ ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗುವುದು' ಎಂದು ಹೇಳಿದರು.



ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು

ದ್ವಿತೀಯ ದರ್ಜೆ ಸಹಾಯಕನ ಅಮಾನತು

ಬೆಂಗಳೂರು: ಬೆಂಗಳೂರು ಪೂರ್ವ ತಹಶೀಲ್ದಾರ್ ಕಚೇರಿಗೆ ಕಂದಾಯ ಸಚಿವ ಭೇಟಿ ನೀಡಿದಾಗ ಕಚೇರಿಯಲ್ಲಿ ಇಲ್ಲದಿದ್ದರೂ, ಕಚೇರಿಯಲ್ಲಿರುವುದಾಗಿ ತಿಳಿಸಿದ್ದ ದ್ವಿತೀಯ ದರ್ಜೆ ಸಹಾಯಕ ರಕ್ಷಿತ್ ಅವರನ್ನು ಜಿಲ್ಲಾಧಿಕಾರಿ ಅಮಾನತು ಮಾಡಿದ್ದಾರೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಬುಧವಾರ ಭೇಟಿ ನೀಡಿ ಹಾಜರಾತಿಯನ್ನು ಪರಿಶೀಲಿಸಿದಾಗ ರಕ್ಷಿತ್ ಸಹಿ ಮಾಡಿರಲಿಲ್ಲ. ಅವರಿಗೆ ಕರೆ ಮಾಡಿದರೆ ಕಚೇರಿಯಲ್ಲಿರುವುದಾಗಿ ಉತ್ತರಿಸಿದ್ದರು. ಇದನ್ನು ನಿರ್ಲಕ್ಷ್ಯ ಮತ್ತು ಅಸಭ್ಯ ವರ್ತನೆ ಎಂದು ಪರಿಗಣಿಸಿ ಜಿಲ್ಲಾಧಿಕಾರಿ ಜಗದೀಶ್ ಜಿ. ಅಮಾನತು ಮಾಡಿದ್ದಾರೆ.

'ನಿರ್ದಿಷ್ಟ, ಸ್ಪಷ್ಟ ಉಲ್ಲೇಖ ಇಲ್ಲದಿದ್ದರೆ ಉಡುಗೊರೆ ಆಸ್ತಿ ಹಿಂಪಡೆಯಲಾಗದು'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉಡುಗೊರೆಯಾಗಿ ನೀಡಿದ ಆಸ್ತಿಗೆ ಸಂಬಂಧಿತ ದಾಖಲೆಯಲ್ಲಿ ಸ್ಪಷ್ಟ ಉಲ್ಲೇಖ ಇಲ್ಲದಿದ್ದರೆ, ಅದನ್ನು ಸಹಜವಾಗಿ ಹಿಂಪಡೆಯಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಉಜ್ವಲ್ ಭುಯನ್ ಅವರಿದ್ದ ಪೀಠವು ಪ್ರಕರಣವೊಂದರ ವಿಚಾರಣೆ ನಡೆಸಿ ಅ. 24ರಂದು ತೀರ್ಪು ನೀಡಿದೆ. ಆಸ್ತಿಗಳ ವರ್ಗಾವಣೆ ಕಾಯ್ದೆ 1882ರ ಸೆಕ್ಷನ್ 126 ಅನ್ನು ಅದು ತೀರ್ಪಿನಲ್ಲಿ ಉಲ್ಲೇಖಿಸಿದೆ.

ಉಡುಗೊರೆ ಕೊಟ್ಟವರು ಅಥವಾ ಪಡೆದವರು ಪರಸ್ಪರ ಒಪ್ಪಿದಲ್ಲಿ, ನಿರ್ದಿಷ್ಟ ಸಂದರ್ಭಗಳಿಗೆ ಅನುಸಾರವಾಗಿ ಹಿಂಪಡೆಯಬಹುದು ಎಂದು ಉಲ್ಲೇಖಿಸಿದ್ದರೆ ಮಾತ್ರ ರದ್ದುಪಡಿಸಬಹುದು. ಇಂತಹ ಸಂದರ್ಭದಲ್ಲಿ ದಾನಿಗಳ ಉಯಿಲು ಅವಲಂಬಿಸುವ ಅಗತ್ಯವಿಲ್ಲ ಎಂದು ಹೇಳಿದರು.

ಎರಡನೆಯದಾಗಿ, ಪರಸ್ಪರರ ಒಪ್ಪಂದದ ಅನುಸಾರ ಉಡುಗೊರೆಯನ್ನು ಪೂರ್ಣ ಅಥವಾ ಭಾಗಶಃ, ದಾನಿಯ ಪೂರ್ಣ ಸಮ್ಮತಿಯೊಂದಿಗೆ ಹಿಂಪಡೆಯಬಹುದು. ಮೂರನೆಯದಾಗಿ, ಒಪ್ಪಂದದ ಉದ್ದೇಶ|ವನ್ನೇ ರದ್ದುಗೊಳಿಸಿದ್ದ ಸಂದರ್ಭದಲ್ಲಿ ಹಿಂಪಡೆಯಬಹುದಾಗಿದೆ ಎಂದು ಹೇಳಿದೆ.

ತಮಿಳುನಾಡಿನ ಕಡಲೂರಿನಲ್ಲಿನ 3,750 ಚದರ ಅಡಿ ವಿಸ್ತೀರ್ಣದ ಭೂಮಿಗೆ ಸಂಬಂಧಿಸಿದ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದ್ದ ಮದ್ರಾಸ್ ಹೈಕೋರ್ಟ್‌ನ ನಿಲುವು ಪ್ರಶ್ನಿಸಿ ಎನ್.ತಾಜುದ್ದೀನ್ ಎಂಬವರು ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠವು ಇದೇ ವೇಳೆ ವಜಾ ಮಾಡಿತು.

ಕಸಾಪ: ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ಬೆಂಗಳೂರು: ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನವೆಂಬರ್ ತಿಂಗಳು ಪೂರ್ತಿ ತನ್ನ ಪ್ರಕಟಣೆಯ ಪುಸ್ತಕಗಳ ಮೇಲೆ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ಘೋಷಿಸಿದೆ.

ಇದುವರೆಗೆ ಎರಡು ಸಾವಿರಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿದ್ದು, ಅದನ್ನು ಜನರಿಗೆ ತಲುಪಿಸುವ ದೃಷ್ಟಿಯಿಂದ ವರ್ಷದಲ್ಲಿ ನಾಲ್ಕು ಸಂದರ್ಭದಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಯೋಜನೆ ರೂಪಿಸಲಾಗಿದೆ.

ನ.1ರಿಂದ ನ.30ರವರೆಗೆ ರಜಾ ದಿನಗಳಲ್ಲಿಯೂ ಬೆಳಿಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ಚಾಮರಾಜಪೇಟೆಯಲ್ಲಿರುವ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ರಾಜ್ಯಕ್ಕೆ ಪ್ರತ್ಯೇಕ ಕಾನೂನಾತ್ಮಕ ನಾಡಧ್ವಜಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕ ಕಾನೂನಾತ್ಮಕ ನಾಡಧ್ವಜ ನೀಡಬೇಕು. ನ.1ರಂದು ಆ ಧ್ವಜವನ್ನು ಹಾರಿಸಬೇಕು ಎಂದು ಬೆಳಗಾವಿಯ ಸಾಮಾಜಿಕ ಹೋರಾಟಗಾರ ಭೀಮಪ್ಪ ಗಡಾದ ಮತ್ತು ಹೈಕೋರ್ಟ್ ವಕೀಲ ಉಮಾಪತಿ ಎಸ್. ಆಗ್ರಹಿಸಿದರು.

'ಕಾನೂನಾತ್ಮಕ ನಾಡಧ್ವಜಕ್ಕಾಗಿ ಪಾಟೀಲ ಪುಟ್ಟಪ್ಪ ಹಲವು ವರ್ಷಗಳ ಹಿಂದೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು. ಭೀಮಪ್ಪ ಗಡಾದ ಹೋರಾಟ ಮುಂದುವರಿಸಿದ್ದರು. ಇದಕ್ಕೆ ಸ್ಪಂದಿಸಿದ ರಾಜ್ಯ ಸರ್ಕಾರವು ಒಂಬತ್ತು ಮಂದಿ ತಜ್ಞರ ಸಮಿತಿ ರಚಿಸಿತ್ತು. ಸಮಿತಿ ನೀಡಿದ ವರದಿಯ ಆಧಾರದಲ್ಲಿ ಸಚಿವ ಸಂಪುಟ ಒಪ್ಪಿಗೆ ಸೂಚಿಸಿತ್ತು. ಆ ನಂತರ 2018ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವಜ ಅನಾವರಣಗೊಳಿಸಿದ್ದರು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಲ್ಲಿಂದ ಮುಂದೆ ಯಾವುದೇ ಬೆಳವಣಿಗೆಯಾಗಿಲ್ಲ. ಈ ಬಗ್ಗೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದಾಗ ಸರ್ಕಾರವೇ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕೇ ಹೊರತು ಹೈಕೋರ್ಟ್ ಅಲ್ಲ ಎಂದು ನ್ಯಾಯಾಲಯ ಹೇಳಿತ್ತು. ರಾಜ್ಯಕ್ಕೆ ಶಾಸನಬದ್ಧವಾದ ಧ್ವಜವನ್ನು ಘೋಷಿಸಬೇಕು. ನ.1ರಂದು ಹಾರಿಸಬೇಕು. ಇಲ್ಲದೇ ಇದ್ದರೆ ಕನ್ನಡ ದ್ರೋಹಿ ಸರ್ಕಾರ ಎಂದು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಕೀಲರಾದ ಸುಧಾ ಕಾಟ್ವ, ಹೋರಾಟಗಾರ ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಪುಸ್ತಕ ಪ್ರಾಧಿಕಾರ ಶೇ 50 ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ಪ್ರಕಟಣೆಗಳ ಮೇಲೆ ನವೆಂಬರ್ ತಿಂಗಳು ಪೂರ್ತಿ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 706 ಶೀರ್ಷಿಕೆಗಳಡಿ ಕೃತಿಗಳನ್ನು ಪ್ರಕಟಿಸಿದೆ. ಈ ಕೃತಿಗಳನ್ನು ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಪ್ರಾಧಿಕಾರದ್ದಾಗಿದ್ದು, ಎಲ್ಲ ಪುಸ್ತಕಗಳ ಮೇಲೆ ಶೇ 50ರಷ್ಟು ರಿಯಾಯಿತಿ ಇರಲಿದೆ. ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದಿಂದ ತೆರೆಯಲಾದ ಎಲ್ಲ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಇರಲಿದೆ.

ಪ್ರಾಧಿಕಾರದ ಜಾಲತಾಣ https://kpp.karnataka.gov.in ಮೂಲಕವೂ ಖರೀದಿಸಬಹುದು ಎಂದಿದೆ.



❦ ಸುಭಾಷಿತ ❦

ಯಾರಾದರೂ ಕೃತಘ್ನರಾದರೆ ಅದು ಅವರ ದೋಷ. ಹಾಗೆಂದು ನೀನು ಸಜ್ಜನಿಕೆ ತೋರದಿದ್ದರೆ ಅದು ನಿನ್ನ ದೋಷ. -ಅ.ನ.ಕೃಷ್ಣರಾಯ

ಮರಕುಂಬಿ ಆದೇಶ: ಜಾತಿದೌರ್ಜನ್ಯ ವಿರೋಧಿ ಹೋರಾಟಕ್ಕೆ ಭೀಮಬಲ

ಕೊಪ್ಪಳ ಜಿಲ್ಲೆಯ ಮರಕುಂಬಿಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ ಪ್ರಕರಣದಲ್ಲಿ 98 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಹಾಗೂ ಮೂವರಿಗೆ ಐದು ವರ್ಷ ಜೈಲು ಶಿಕ್ಷೆಯನ್ನು ಕೊಪ್ಪಳದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಿಧಿಸಿದೆ. ಈ ಆದೇಶವು ಜಾತಿಹಿಂಸೆ ಮತ್ತು ಅಸ್ಪೃಶ್ಯತೆ ವಿರುದ್ಧದ ಹೋರಾಟದಲ್ಲಿ ನಿಸ್ಸಂಶಯವಾಗಿ ಒಂದು ಮೈಲಿಗಲ್ಲು; ಜಾತಿ ಆಧಾರಿತ ಹಿಂಸೆ ಮತ್ತು ತಾರತಮ್ಯ ವಿರೋಧಿ ಹೋರಾಟಕ್ಕೆ ಆತ್ಮವಿಶ್ವಾಸ ತುಂಬುವಂತಹದ್ದು. ಜಾತಿ ಕಾರಣದಿಂದಾಗಿ ದಲಿತರನ್ನು ನಿಂದಿಸುವವರಿಗೆ ಹಾಗೂ ಅವರ ಮೇಲೆ ದೌರ್ಜನ್ಯ ಎಸಗುವವರಿಗೆ ಈ ಆದೇಶವು ಎಚ್ಚರಿಕೆಯಂತಿದೆ. ದಲಿತರ ಮೇಲಿನ ಹಿಂಸೆ–ದೌರ್ಜನ್ಯ, ದಲಿತ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ತಾರ್ಕಿಕ ಅಂತ್ಯ ಕಾಣುವಲ್ಲಿ ವಿಫಲವಾಗುತ್ತಿರುವ ಉದಾಹರಣೆಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ, ನ್ಯಾಯಾಲಯದ ಆದೇಶವು ಶೋಷಿತರಿಗೆ ಕಾನೂನಿನ ಬಗ್ಗೆ ನಂಬಿಕೆ ಉಳಿಸುವಂತಿದೆ. 'ಇಂಥ ಪ್ರಕರಣದಲ್ಲಿ ಅನುಕಂಪ ತೋರುವುದು ನ್ಯಾಯದ ಅಪಹಾಸ್ಯ ಆಗಲಿದೆ' ಎಂದು ನ್ಯಾಯಾಧೀಶ ಸಿ. ಚಂದ್ರಶೇಖರ್ ಅಭಿಪ್ರಾಯಪಟ್ಟಿರುವುದು ಕಾನೂನು ವ್ಯವಸ್ಥೆಯ ಘನತೆಯನ್ನು ಹೆಚ್ಚಿಸುವಂತಹದ್ದಾಗಿದೆ. 2014ರ ಆಗಸ್ಟ್ 28ರಂದು ಮರಕುಂಬಿಯಲ್ಲಿ ದಲಿತರು ಮತ್ತು ಪ್ರಬಲ ಜಾತಿಗಳಿಗೆ ಸೇರಿದವರ ನಡುವೆ ಸಂಘರ್ಷ ಉಂಟಾಗಿತ್ತು. ಚಿತ್ರಮಂದಿರದಲ್ಲಿ ಸಿನಿಮಾ ಟಿಕೆಟ್ ಪಡೆಯುವ ಸಂದರ್ಭದಲ್ಲಿ ಉಂಟಾದ ಜಗಳ ತೀವ್ರ ಸಂಘರ್ಷವಾಗಿ ಬದಲಾಗಿತ್ತು. ದಲಿತ ಕೇರಿಯ ಮೇಲೆ ದಾಳಿ ನಡೆಸಿದ್ದ ಜಾತಿವ್ಯಸನಿಗಳ ಗುಂಪು, ದಲಿತರ ಮೇಲೆ ಹಲ್ಲೆ ನಡೆಸಿದ್ದಲ್ಲದೆ ಗುಡಿಸಲುಗಳಿಗೆ ಬೆಂಕಿ ಹಚ್ಚಿತ್ತು. ಆ ಪ್ರಕರಣದಲ್ಲಿ ದಾಖಲಾಗಿದ್ದ ದೂರನ್ನು ಆಧರಿಸಿ 117 ಜನರ ಮೇಲೆ ದೌರ್ಜನ್ಯ, ಹಲ್ಲೆ ಹಾಗೂ ಜೀವಬೆದರಿಕೆ ಪ್ರಕರಣಗಳನ್ನು ದಾಖಲಿಸಲಾಗಿತ್ತು. ವಿಚಾರಣೆ ಅವಧಿಯಲ್ಲಿ ಮೃತಪಟ್ಟಿರುವ ಆರೋಪಿಗಳು ಹಾಗೂ ಇಬ್ಬರು ಬಾಲಕರನ್ನು ಹೊರತುಪಡಿಸಿ, 98 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಹಾಗೂ ಜಾತಿನಿಂದನೆ ಕಾಯ್ದೆ ಅನ್ವಯವಾಗದ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಮೂವರಿಗೆ 5 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ವರ್ಷಗಳ ಕಾಲ ನಡೆದ ವಿಚಾರಣೆ ತಾರ್ಕಿಕ ಅಂತ್ಯ ತಲುಪಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಿರುವುದರಿಂದಾಗಿ ಸಂತ್ರಸ್ತರಿಗೆ ವಿಳಂಬವಾಗಿಯಾದರೂ ನ್ಯಾಯ ದೊರಕಿದಂತಾಗಿದೆ ಎಂದು ಸದ್ಯಕ್ಕೆ ಸಮಾಧಾನಪಡಬಹುದು.



ಜಾತಿವ್ಯಸನ ಧಾಳಾಗಿರುವ ಸಂದರ್ಭದಲ್ಲಿ ಪ್ರಕಟವಾಗಿರುವ ಈ ಆದೇಶವು ನ್ಯಾಯ ಹಾಗೂ ಸಾಮಾಜಿಕ ಸುಧಾರಣೆಯ ದಿಸೆಯಲ್ಲಿ ಆಶಾಕಿರಣದಂತೆ ಕಾಣಿಸುತ್ತಿದೆ

ಮರಕುಂಬಿ ಗ್ರಾಮದ ಹಿಂಸಾಚಾರವು ಈ ದೇಶದ ಯಾವುದೇ ಗ್ರಾಮದಲ್ಲಿ ನಡೆಯಬಹುದಾದ ಜಾತಿದ್ವೇಷದ ವಿದ್ಯಮಾನದಂತಿದೆ. ದಲಿತರ ಮೇಲೆ ಹಲ್ಲೆ, ಅತ್ಯಾಚಾರ, ಅವಮಾನ ಎಸಗುವ ಕೃತ್ಯಗಳು ಪ್ರತಿನಿತ್ಯ ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇವೆ. ಪರಿಶಿಷ್ಟ ಜಾತಿಯ ಮಹಿಳೆ ನೀರು ಕುಡಿದದ್ದಕ್ಕಾಗಿ ಸಾರ್ವಜನಿಕ ನೀರು ಸರಬರಾಜು ಟ್ಯಾಂಕನ್ನು ಶುದ್ಧೀಕರಿಸಲಾಗುತ್ತದೆ. ಗ್ರಾಮದೇವತೆಯ ಗುಜ್ಜುಕೋಲು ಮುಟ್ಟಿದ ಬಾಲಕನ ಮೇಲೆ ಹಲ್ಲೆ ನಡೆಸಿ, ಅವನ ಕುಟುಂಬಕ್ಕೆ ದಂಡ ವಿಧಿಸಲಾಗುತ್ತದೆ. ಮೊರಾರ್ಜಿ ವಸತಿ ಶಾಲೆಯಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಮಕ್ಕಳನ್ನು ಶಿಕ್ಷಕರೇ ಮಲದ ಗುಂಡಿಗೆ ಇಳಿಸುತ್ತಾರೆ. ಕೂದಲು ಕತ್ತರಿಸಲು ನಿರಾಕರಣೆ, ಹೋಟೆಲ್‌ಗಳಲ್ಲಿ ಪ್ರತ್ಯೇಕವಾಗಿ ಊಟ–ಉಪಾಹಾರ ನೀಡುವುದು, ಧಾರ್ಮಿಕ ಆಚರಣೆಯಿಂದ ಕೆಲವು ವರ್ಗಗಳನ್ನು ದೂರವಿಡುವುದು, ಬಾಡಿಗೆಗೆ ಮನೆ ನೀಡದಿರುವುದು... ಇವೆಲ್ಲವೂ ಅಸ್ಪೃಶ್ಯತೆಯ ಆಚರಣೆಗಳೇ ಆಗಿವೆ. ಇಂಥ ನಡವಳಿಕೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವ ಮೂಲಕ, ನಾಗರಿಕ ಸಮಾಜದಲ್ಲಿ ಅಸ್ಪೃಶ್ಯತೆ ಆಚರಣೆಗೆ ಅವಕಾಶವಿಲ್ಲ ಎನ್ನುವುದನ್ನು ಜಾತಿವ್ಯಸನಿಗಳಿಗೆ ಮನವರಿಕೆ ಮಾಡಿಕೊಡುವುದು ಸರ್ಕಾರದ ಹೊಣೆಗಾರಿಕೆ. ದುರದೃಷ್ಟವಶಾತ್, ಜಾತಿಯ ಹೆಸರಿನಲ್ಲಿ ನಡೆಯುವ ಶೋಷಣೆಗಳನ್ನು ಸಹಜ ಎನ್ನುವಂತೆ ಸ್ವೀಕರಿಸುವ ಮನಃಸ್ಥಿತಿ ಸಮಾಜದಲ್ಲಿದೆ. ಅತ್ಯಾಚಾರದಂಥ ಪಶುಸದೃಶ ಕೃತ್ಯಗಳಿಗೆ ವ್ಯಕ್ತವಾಗುವ ಪ್ರತಿಕ್ರಿಯೆಗಳೂ ಜಾತಿಯ ನೆಲೆಗಟ್ಟಿನಲ್ಲಿರುತ್ತವೆ. ದೇಶ ಸ್ವತಂತ್ರಗೊಂಡು ಎಪ್ಪತ್ತೈದು ವರ್ಷಗಳು ಕಳೆದ ನಂತರವೂ ದೇಶದ ಜಾತ್ಯತೀತ ಸ್ವರೂಪ ನಿರಂತರವಾಗಿ ಪರೀಕ್ಷೆಗೊಳಗಾಗುತ್ತಲೇ ಇದೆ ಹಾಗೂ ಗಾಸಿಗೊಳ್ಳುತ್ತಿದೆ. ಕಂಬಾಲಪಲ್ಲಿಯಲ್ಲಿ ನಡೆದ ದಲಿತ ಹತ್ಯಾಕಾಂಡಕ್ಕೆ ಇಡೀ ರಾಜ್ಯ ಬೆಚ್ಚಿಬಿದ್ದಿತ್ತು. ಆ ಬಳಿಕವೂ ಜಾತಿ ಹೆಸರಿನಲ್ಲಿ ಕ್ರೌರ್ಯ ಮರುಕಳಿಸುತ್ತಿರುವುದು ವ್ಯವಸ್ಥೆಯ ವೈಫಲ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಜಾತಿವ್ಯಸನಕ್ಕೆ ಪೆಟ್ಟು ಕೊಡುವ ಪ್ರಯತ್ನಗಳು ಹಿನ್ನಡೆ ಸಾಧಿಸುವ ಉದಾಹರಣೆಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ಪ್ರಕಟಗೊಂಡಿರುವ ಮರಕುಂಬಿ ಪ್ರಕರಣಕ್ಕೆ ಸಂಬಂಧಿಸಿದ ಆದೇಶವು ನ್ಯಾಯ ಹಾಗೂ ಸಾಮಾಜಿಕ ಸುಧಾರಣೆಯ ದಿಸೆಯಲ್ಲಿ ಆಶಾಕಿರಣದಂತೆ ಕಾಣಿಸುತ್ತಿದೆ. ಇಂಥ ನಡೆಗಳು ಹೆಚ್ಚಿದಷ್ಟೂ ನ್ಯಾಯದ ಬಗೆಗಿನ ಜನಸಾಮಾನ್ಯರ ವಿಶ್ವಾಸ ಹೆಚ್ಚುತ್ತದೆ; ಜಾತಿವಿನಾಶದ ಪ್ರಯತ್ನಗಳಿಗೂ ಭೀಮಬಲ ದೊರೆಯುತ್ತದೆ.

ದಿನದ ಟ್ವೀಟ್

ಹೀಗಿರಲಿ ದೀಪಗಳ ಹಬ್ಬ



ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯ. ಪಟಾಕಿ ಹಚ್ಚುವಾಗ ಜಾಗರೂಕರಾಗಿರಿ. ಏಕೆಂದರೆ ಅದು ಕಣ್ಣಿಗೆ ಹಾನಿ ಉಂಟು ಮಾಡಬಹುದು ಮತ್ತು ಅಂಧತ್ವಕ್ಕೂ ಕಾರಣವಾಗಬಹುದು. ಪಟಾಕಿ ಸುಡುವುದನ್ನು ನೋಡುವವರು ಇನ್ನಷ್ಟು ಎಚ್ಚರಿಕೆಯಿಂದ ಇರಬೇಕು. ನಿಮ್ಮ ದೃಷ್ಟಿಗೆ ಅಪಾಯ ತಂದುಕೊಳ್ಳಬೇಡಿ, ಗಾಳಿಯನ್ನು ಶುದ್ಧವಾಗಿ ಇಡಿ, ಹೊಗೆಯಿಲ್ಲದೆ ಬೆಳಕು ಪಸರಿಸುವಂತೆ ಮಾಡಿ.

ಡಾ. ಜಸ್‌ಪ್ರೀತ್ ಸಿಂಗ್ ಸುಖಿಜ, ನೇತ್ರವೈದ್ಯ

ಕಿಡಿನುಡಿ

...16ನೇ ಶತಮಾನದಲ್ಲಿ ನಿರ್ಮಿಸಿದ ದೇವಾಲಯಗಳಿಗೆ 19ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ವಕ್ಫ್ ನೋಟಿಸ್ ಕೊಡಲು ಹೇಗೆ ಸಾಧ್ಯ?...

ಬಸನಗೌಡ ಪಾಟೀಲ ಯತ್ನಾಳ
ಶಾಸಕ, ಬಿಜೆಪಿ ಮುಖಂಡ



25 ವರ್ಷಗಳ ಹಿಂದೆ
ಭಾನುವಾರ, 31-10-1999

● ಪುಸ್ತಕ ಖರೀದಿಸದ ಗ್ರಂಥಾಲಯ ಇಲಾಖೆ

ಬೆಂಗಳೂರು, ಅ. 30– ಸಾರ್ವಜನಿಕ ಗ್ರಂಥಾಲಯ ಇಲಾಖೆ ಪ್ರಸ್ತುತ ಸಾಲಿನಲ್ಲಿ ಒಂದೇ ಒಂದು ಪುಸ್ತಕವನ್ನೂ ಖರೀದಿಸಿಲ್ಲ ಎಂಬ ಆರೋಪ ಪ್ರಕಾಶಕರ ವಲಯದಿಂದ ಕೇಳಿಬರುತ್ತಿದೆ.

ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿಯಾದರೂ ಪುಸ್ತಕಗಳನ್ನು ಖರೀದಿಸಬೇಕಾದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಈ ವರ್ಷ ಹತ್ತು ತಿಂಗಳು ಕಳೆದರೂ ಒಂದೇ ಒಂದು ಪುಸ್ತಕವನ್ನೂ ಖರೀದಿಸದೆ ಇರುವುದು ಏಕೆ ಎಂಬ ಪ್ರಶ್ನೆ ಎದುರಾಗಿದೆ.

ನಿಯಮಾವಳಿಯ ಅನುಸಾರ ಆಯಾ ವರ್ಷ ಕೊಳ್ಳಬೇಕಾದ ಪುಸ್ತಕಗಳ ಕುರಿತು ನಿರ್ಧರಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗುತ್ತದೆ. ಈ ವರ್ಷದ ಪುಸ್ತಕ ಆಯ್ಕೆ ಸಮಿತಿಗೆ ವಿಮರ್ಶಕ ಜಿ.ಎಚ್.ನಾಯಕ ಅವರು ಅಧ್ಯಕ್ಷರಾಗಿದ್ದಾರೆ.

ಪ್ರಸ್ತುತ ವರ್ಷದಲ್ಲಿ ಈ ಸಮಿತಿ ಹಲವಾರು ಬಾರಿ ಸಭೆ ಸೇರಿದ್ದು ಮಾತ್ರವಲ್ಲದೆ ಕೊಳ್ಳಬೇಕಾದ ಪುಸ್ತಕಗಳ ಪಟ್ಟಿಯನ್ನೂ ಇಲಾಖೆಗೆ ಸಲ್ಲಿಸಿದೆ ಎಂದು ತಿಳಿದುಬಂದಿದೆ.

● ಒರಿಸ್ಸಾ ಚಂಡಮಾರುತ ಸಾವಿರಾರು ಸಾವು

ಭುವನೇಶ್ವರ, ಅ. 30 (ಪಿಟಿಐ, ಯುಎನ್‌ಐ)– ಶುಕ್ರವಾರ ಒರಿಸ್ಸಾಕ್ಕೆ ಅಪ್ಪಳಿಸಿದ ಭಾರಿ ಚಂಡಮಾರುತಕ್ಕೆ ಸಾವಿರಾರು ಜನರು ಬಲಿಯಾಗಿದ್ದು, ಸುಮಾರು 15 ದಶಲಕ್ಷ ಜನರು ಮನೆ- ಮಠ ಕಳೆದುಕೊಂಡು ತೀವ್ರ ತೊಂದರೆಗೆ ಒಳಗಾಗಿದ್ದಾರೆ ಎಂದು ಶಂಕಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಚಂಡಮಾರುತಕ್ಕೆ ಸಿಕ್ಕಿ ಕಣ್ಮರೆಯಾದ 400ಕ್ಕೂ ಹೆಚ್ಚು ಮಂದಿ ಮೀನುಗಾರರು ಪತ್ತೆಯಾಗಿಲ್ಲ.

50 ವರ್ಷಗಳ ಹಿಂದೆ
ಗುರುವಾರ, 31-10-1974

● ಭಾವದ ಬದಲು ಚಮತ್ಕಾರ ಸಂಗೀತ ವಿದುಷಿ ಆತಂಕ

ಬೆಂಗಳೂರು, ಅ. 30– 'ಕಲಾವಿದ ಆಳವಾದ ಅಭ್ಯಾಸದಿಂದ ತನ್ನ ಸಹಜ ಪ್ರತಿಭೆ ವಿಕಾಸವಾಗಲು ಶ್ರಮಿಸುತ್ತಿಲ್ಲ, ಶ್ರೋತೃ ಅಲ್ಪ ತೃಪ್ತ'– ಸಂಗೀತ ಕ್ಷೇತ್ರದಲ್ಲಿನ ಈ ಪ್ರವೃತ್ತಿಯಿಂದ ಹಿರಿಯ ಸಂಗೀತ ವಿದುಷಿ ಶ್ರೀಮತಿ ಜಿ.ಚನ್ನಮ್ಮನವರಿಗೆ ಆತಂಕ.

ಸಾವಿರಾರು ವರ್ಷಗಳಿಂದ ಸಾವಿರಾರು ಪ್ರತಿಭಾವಂತ ಕಲಾವಿದರ ಶ್ರಮ ಹಾಗೂ ಕಲ್ಪನೆಯಿಂದ ರೂಪಿತವಾದ ಈ ಭವ್ಯ ಸಂಗೀತ ಕಟ್ಟಡವು ಶಿಥಿಲವಾಗದಂತೆ ನೋಡಿಕೊಳ್ಳಬೇಕೆಂದು, ಬೆಂಗಳೂರು ಗಾಯನ ಸಮಾಜದ ಆಶ್ರಯದಲ್ಲಿ ನಡೆದ ಆರನೆಯ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಇಂದು ಕರೆ ನೀಡಿದರು.


● ಚುನಾವಣಾ ವ್ಯವಸ್ಥೆ ಸುಧಾರಣೆ ಆಗದಿದ್ದರೆ ಸಂಸತ್ತಿಗೆ ಘೇರಾವ್

ಲೂಧಿಯಾನ, ಅ. 30– ಕೇಂದ್ರ ಸರ್ಕಾರವು ಚುನಾವಣಾ ವ್ಯವಸ್ಥೆ ಸುಧಾರಣೆಗಳನ್ನು ಜಾರಿಗೆ ತರದೇ ಹೋದರೆ ಸಂಸತ್ತಿಗೆ ಘೇರಾವ್ ಹಾಕಲು ಕ್ರಮ ಕೈಗೊಳ್ಳಲಾಗುವುದು ಎಂದು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರು ಇಂದು ಬೆದರಿಕೆ ಹಾಕಿದ್ದಾರೆ.

ಸಂಸತ್ತನ್ನು ಘೇರಾವ್ ಮಾಡಲು ಅವರು ಕಾಲ ನಿಗದಿಪಡಿಸಿಲ್ಲವಾದರೂ ಅದು ಚುನಾವಣಾ ಸುಧಾರಣಾ ಸಮಿತಿಯ ವರದಿ ಸಲ್ಲಿಕೆ ಮೇಲೆ ಅವಲಂಬಿಸಿದೆ ಎಂದು ಅವರು ಹೇಳಿದ್ದಾರೆ.

ಅಕ್ರಮ ಗಣಿಗಾರಿಕೆ: ಬಾಕಿ ಪ್ರಕರಣಗಳ ತನಿಖೆಗೆ ಕ್ರಮ ಕೈಗೊಳ್ಳಬೇಕು

ಅದಿರಾಧಿಪತಿಗೆ ಜೈಲೇ ಭೂಷಣಂ!



ಅನುಸಂಧಾನ
ರವೀಂದ್ರ ಭಟ್ಟ

ಕನ್ನಡದಲ್ಲಿ ಒಂದು ಮಾತಿದೆ. ಆನೆ ಕದ್ದರೂ ಕಳ್ಳ, ಅಡಿಕೆ ಕದ್ದರೂ ಕಳ್ಳ ಅಂತ. ಆದರೆ ರಾಜ್ಯದಲ್ಲಿ ಈವರೆಗೆ ಯಾರನ್ನೂ ಅದಿರು ಕದ್ದ ಕಾರಣಕ್ಕಾಗಿ ಕಳ್ಳತನದ ಆರೋಪ ಹೊರಿಸಿ ಶಿಕ್ಷೆಗೆ ಗುರಿಪಡಿಸಿರಲಿಲ್ಲ. ಇದೇ ಮೊದಲ ಬಾರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಕಾರವಾರ–ಅಂಕೋಲಾ ಶಾಸಕ ಸತೀಶ್ ಸೈಲ್ ಅವರನ್ನು ಅದಿರು ಕಳ್ಳ ಎಂದು ತೀರ್ಮಾನಿಸಿ 7 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ. ಸತೀಶ್ ಜೊತೆಗೆ ನಿವೃತ್ತ ಬಂದರು ಅಧಿಕಾರಿ ಮಹೇಶ್ ಬಿಲಿಯೆ, ಲಕ್ಷ್ಮಿ ವೆಂಕಟೇಶ್ವರ ಟ್ರೇಡರ್ಸ್‌ನ ಮಾಲೀಕ ಖಾರದಪುಡಿ ಮಹೇಶ್, ಸ್ವಸ್ತಿಕ್ ಕಂಪನಿ ಮಾಲೀಕರಾದ ಕೆ.ವಿ.ನಾಗರಾಜ್, ಕೆ.ವಿ.ಎನ್. ಗೋವಿಂದರಾಜ್, ಆಶಾಪುರ ಮೈನಿಂಗ್ ಕಂಪನಿ ಮಾಲೀಕ ಚೇತನ್ ಶಾ, ಲಾಲ್ ಮಹಲ್ ಕಂಪನಿ ಮಾಲೀಕ ಪ್ರೇಮಚಂದ್ ಗರಗ್ ಜೈಲು ಸೇರಿದ್ದಾರೆ.

ಇವರದ್ದು ಒಂದು ಅರ್ಥದಲ್ಲಿ ಡಬಲ್ ಕಳ್ಳತನ. ಅಕ್ರಮವಾಗಿ ಗಣಿಗಾರಿಕೆ ನಡೆಸಿ ವಿದೇಶಗಳಿಗೆ ರಫ್ತು ಮಾಡುವುದಕ್ಕಾಗಿ ಕಾರವಾರದ ಬೇಲೆಕೇರಿ ಬಂದರಿಗೆ ಸಾಗಿಸಿದ್ದ ಅದಿರನ್ನು ಲೋಕಾಯುಕ್ತ ತನಿಖಾ ತಂಡದ ಅಧಿಕಾರಿಗಳು ಜಪ್ತಿ ಮಾಡಿ ಇಟ್ಟಿದ್ದರು. ತನಿಖಾ ಪ್ರಕ್ರಿಯೆ ಭಾಗವಾಗಿ ವಶಕ್ಕೆ ಪಡೆದಿದ್ದ ಅದಿರನ್ನೇ ಇವರು ಕಳ್ಳತನ ಮಾಡಿ ವಿದೇಶಕ್ಕೆ ರಫ್ತು ಮಾಡಿದ್ದರು. ಹೀಗೆ ಕಳ್ಳತನ ಮಾಡಲು ಭಾರಿ ಭಂಡತನ ಬೇಕು. ಇಲ್ಲಿ ಬೇಲಿಯೂ ಹೊಲ ಮೇಯ್ದಿದ್ದರಿಂದ ಇದು ಸಾಧ್ಯವಾಯಿತು. ಈಗ ಆ ಬೇಲಿಯೂ ಸೇರಿದಂತೆ ಅದಕ್ಕೆ ಕಾರಣರಾದ ಎಲ್ಲರೂ ಜೈಲು ಸೇರಿದ್ದಾರೆ. ಆದರೆ ಗಮನಿಸಬೇಕಾದ ಅಂಶ ಎಂದರೆ, ಇದು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಆದೇಶ ಅಲ್ಲ. ಕಳ್ಳತನ ಮಾಡಿದ್ದಕ್ಕೆ ಶಿಕ್ಷೆ ಅಷ್ಟೆ.


ಅಕ್ರಮ ಗಣಿಗಾರಿಕೆ, ಅಕ್ರಮ ಅದಿರು ಸಾಗಾಟ, ಪರಿಸರ ನಾಶ, ರಾಜ್ಯದ ಗಡಿರೇಖೆಯನ್ನೇ ಬದಲು ಮಾಡಿದ್ದು... ಇವೆಲ್ಲಾ ಇನ್ನೂ ವಿಚಾರಣೆಯ ಹಂತದಲ್ಲಿಯೇ ಇವೆ. ಜೊತೆಗೆ ಕಳ್ಳತನದ ಮಾಲನ್ನು ಖರೀದಿ ಮಾಡಿದ ಖದೀಮರೂ ಶಿಕ್ಷೆಯಿಂದ ಸದ್ಯಕ್ಕೆ ತಪ್ಪಿಸಿಕೊಂಡಿದ್ದಾರೆ. ಅಂದರೆ ಪಿಕ್ಚರ್ ಅಭಿ ಬಾಕಿ ಹೈ! ಅಂತಹ ಬಹುಭಾಷಾ ಚಿತ್ರವನ್ನು ನೋಡಲು ಜನ ಕಾತರರಾಗಿದ್ದಾರೆ. ಅದನ್ನು ಜನರಿಗೆ ತೋರಿಸುವ ಕೆಲಸವನ್ನು ರಾಜ್ಯ ಸರ್ಕಾರ ತ್ವರಿತವಾಗಿ ಮಾಡಬೇಕಿದೆ.

ರಾಜ್ಯದಲ್ಲಿ 2008ರಿಂದಲೂ ಅಕ್ರಮ ಗಣಿಗಾರಿಕೆ ಭಾರಿ ಸದ್ದು ಮಾಡಿದ್ದರೂ ಬಹುತೇಕ ಎಲ್ಲರೂ ಆರೋಪಿಗಳಾಗಿದ್ದರೇ ವಿನಾ ಅಪರಾಧಿಗಳು ಎಂದು ತೀರ್ಮಾನ ಆಗಿರಲಿಲ್ಲ. ಗಣಿ ಲೂಟಿ ಪ್ರಕರಣದಲ್ಲಿ ಹಲವಾರು ಮಂದಿ ಜೈಲಿಗೆ ಹೋಗಿ ಬಂದಿದ್ದರೂ, ಸರ್ಕಾರವೇ ಪತನವಾಗಿದ್ದರೂ ಆರೋಪ ಸಾಬೀತಾಗಿರುವುದು ಇದೇ ಮೊದಲು. ಸತೀಶ್ ಸೈಲ್ ಹಾದಿಯಲ್ಲಿ ಇನ್ನಷ್ಟು ಮಂದಿ ಜೈಲಿನೆಡೆಗೆ ನಡೆದರೆ ಅಚ್ಚರಿಪಡಬೇಕಿಲ್ಲ. ಅಂತಹ ಕಾಲ ಬರಲಿ ಎಂದು ಕರುನಾಡಿನ ಜನ ಬಯಸಿದ್ದಾರೆ.

ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಕರ್ನಾಟಕದ ಲೋಕಾಯುಕ್ತರಾಗಿದ್ದಾಗ, ರಾಜ್ಯದಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯ ಬಗ್ಗೆ ಎರಡು ಮಹತ್ವದ ತನಿಖಾ ವರದಿಗಳನ್ನು ನೀಡಿದ್ದರು. 2008ರ ಡಿಸೆಂಬರ್ 18ರಂದು ಮೊದಲ ವರದಿ ನೀಡಿದ ಅವರು, 2011ರ ಜುಲೈ 27ರಂದು ಎರಡನೇ ವರದಿಯನ್ನು ನೀಡಿದ್ದಾರೆ. ಲೋಡ್‌ಗಟ್ಟಲೆ ದಾಖಲೆಗಳನ್ನು ನೀಡಿದ್ದಾರೆ. ಆದರೂ ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗಲಿಲ್ಲ. ಅಕ್ರಮ ಗಣಿಗಾರಿಕೆಯನ್ನು ವಿರೋಧಿಸಿ ಬಳ್ಳಾರಿವರೆಗೆ ಪಾದಯಾತ್ರೆ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ಈ ವರದಿ ಆಧಾರದಲ್ಲಿ ಹೇಳಿಕೊಳ್ಳುವಂತಹ ಕಠಿಣ ಕ್ರಮ ಕೈಗೊಳ್ಳಲಿಲ್ಲ.

ಸಂತೋಷ್ ಹೆಗ್ಡೆ ವರದಿ ಆಧಾರದಲ್ಲಿ ಹಲವಾರು ರಾಜಕಾರಣಿಗಳು, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿತ್ತು. ಕ್ರಿಮಿನಲ್ ಪ್ರಕರಣ ದಾಖಲಿಸಬಹುದಿತ್ತು. ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಬಹುದಿತ್ತು. ಆದರೆ ಸಂತೋಷ್ ಹೆಗ್ಡೆ ಅವರ ವರದಿಯಲ್ಲಿ ಉಲ್ಲೇಖವಾದ ಹಲವಾರು ಅಧಿಕಾರಿಗಳು ನಿಶ್ಚಿಂತೆಯಿಂದ ನಿವೃತ್ತರಾದರು. ಕೆಲವರು ಗಣಿ ಕಂಪನಿಗಳಿಗೆ ಸಲಹೆಗಾರರೂ ಆದರು. ಅಲ್ಲದೆ ಕರ್ನಾಟಕದ ಸಾಕ್ಷಿಪ್ರಜ್ಞೆ ಎಂದೇ ಗುರುತಿಸಲಾಗುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ನೇತೃತ್ವದ ನಿಯೋಗವೊಂದು 2013ರಲ್ಲಿಯೇ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತ್ತು. ಅದರಂತೆ ಸಿದ್ದರಾಮಯ್ಯ ಅವರು ಎಚ್.ಕೆ.ಪಾಟೀಲ್ ನೇತೃತ್ವದಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನೂ ರಚಿಸಿದ್ದರು. ಅಕ್ರಮ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ 1.41 ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ನಷ್ಟವಾಗಿದೆ ಎಂದು ಉಪ ಸಮಿತಿ ಅಂದಾಜು ಮಾಡಿತ್ತು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಲೋಕಾಯುಕ್ತರ ವರದಿಯ ಪರಿಶೀಲನೆಗಾಗಿ ಸಮಿತಿಯೊಂದನ್ನು ನೇಮಿಸಿತು. ವರದಿಯಲ್ಲಿ ಉಲ್ಲೇಖಗೊಂಡ ಬಹಳಷ್ಟು ಅಧಿಕಾರಿಗಳು ತಪ್ಪಿತಸ್ಥರು ಎಂದು ಸಮಿತಿ ಹೇಳಿತು. ಆದರೂ ಮುಂದೆ ಆಡಳಿತದ ಚುಕ್ಕಾಣಿ ಹಿಡಿದವರು ಬಹುತೇಕ ಅಧಿಕಾರಿಗಳಿಗೆ ಕ್ಲೀನ್‌ಚಿಟ್ ನೀಡಿದರು. ಸಿದ್ದರಾಮಯ್ಯ ನೇತೃತ್ವದ ಆಗಿನ ಸರ್ಕಾರ ಒಂದಿಷ್ಟು ಹಣವನ್ನು ವಸೂಲಿ ಮಾಡುವ ಕ್ರಮ ಕೈಗೊಂಡಿತ್ತಾದರೂ ಒಟ್ಟಾರೆ ಪ್ರಕರಣಕ್ಕೆ ಮುಕ್ತಿ ಸಿಗಲಿಲ್ಲ. ಇದರಿಂದಾಗಿ ಹಾವೂ ಸಾಯಲಿಲ್ಲ, ಕೋಲೂ ಮುರಿಯಲಿಲ್ಲ.



ನಂತರ ಎಸ್.ಆರ್.ಹಿರೇಮಠ ಅವರಂಥವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದರಿಂದ ಈ ಹಗರಣದ ಬಗ್ಗೆ ಸಿಬಿಐ ತನಿಖೆ ನಡೆಯುವಂತಾಯಿತು. ಅಕ್ರಮ ಗಣಿಗಾರಿಕೆಯನ್ನು ನೆಪವಾಗಿಟ್ಟುಕೊಂಡು ರಾಜಕಾರಣಿಗಳು ಪರಸ್ಪರ ಬೈದಾಡಿಕೊಂಡರು ಅಷ್ಟೆ. ಜನ ಕೂಡ ಇದು ತಮಗೆ ಸಂಬಂಧಿಸಿದ ವಿಚಾರ ಅಲ್ಲ ಅಂತ ಸುಮ್ಮನಾಗಿ ಬಿಟ್ಟರು. ಅಷ್ಟೇ ಅಲ್ಲ, ಅಕ್ರಮ ಗಣಿಗಾರಿಕೆಯ ಆರೋಪ ಹೊತ್ತ ಗಾಲಿ ಜನಾರ್ದನ ರೆಡ್ಡಿ, ಆನಂದ್ ಸಿಂಗ್, ಅನಿಲ್ ಲಾಡ್, ನಾಗೇಂದ್ರ, ಸತೀಶ್ ಸೈಲ್ ಮುಂತಾದವರನ್ನು ಚುನಾವಣೆಯಲ್ಲಿ ಭಾರಿ ಬಹುಮತದಿಂದಲೇ ಗೆಲ್ಲಿಸಿದರು. ಅಲ್ಲಿಗೆ ಅವರೆಲ್ಲಾ ಪುನೀತರಾದರು. ಚುನಾವಣೆ ಸಂದರ್ಭದಲ್ಲಿ ಅಕ್ರಮ ಗಣಿಗಾರಿಕೆ ಎನ್ನುವುದು ಪರಸ್ಪರ ಕೆಸರೆರಚಾಟಕ್ಕೆ ವಸ್ತುವಾಯಿತೇ ವಿನಾ ರಾಜ್ಯಕ್ಕೆ ಬೇರೇನೂ ಲಾಭವಾಗಿಲ್ಲ.

ಅಕ್ರಮ ಗಣಿಗಾರಿಕೆಯಿಂದ ಹಾನಿಗೊಳಗಾದ ಪ್ರದೇಶದಲ್ಲಿ ಪರಿಸರ ರಕ್ಷಣೆಗೆ ಮತ್ತು ಕಾಡನ್ನು ಬೆಳೆಸುವುದಕ್ಕೆ ₹26 ಸಾವಿರ ಕೋಟಿ ಮೀಸಲಾಗಿಟ್ಟದ್ದರೂ ಅದನ್ನು ಅನ್ಯ ಉದ್ದೇಶಕ್ಕೆ ಬಳಸುವುದು ಹೇಗೆ ಎಂದು ನಮ್ಮ ರಾಜಕಾರಣಿಗಳು ಆಲೋಚಿಸಿದರೇ ವಿನಾ ಪರಿಸರ ರಕ್ಷಣೆಗೆ ಬಳಕೆ ಮಾಡಲಿಲ್ಲ.

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದಲೇ ಲೋಕಾಯುಕ್ತದ ಅಧಿಕಾರಿಗಳು ಜಪ್ತಿ ಮಾಡಿದ್ದ ಅದಿರನ್ನೂ ಕಳ್ಳತನ ಮಾಡುವ ಧೈರ್ಯ ಕೆಲವರಲ್ಲಿ ಬಂತು. ಕಳ್ಳಮಾಲನ್ನು ಕದ್ದು ಮಾರಿದ ಕಳ್ಳರಿಗೆ ಶಿಕ್ಷೆಯಾಗಿದೆ. ಕಳ್ಳತನಕ್ಕೆ ಪ್ರೇರಣೆ ನೀಡಿದವರು ಇನ್ನೂ ಹೊರಗೇ ಇದ್ದಾರೆ. ಅವರನ್ನು ಹಿಡಿದು ಕಂಬಿ ಹಿಂದೆ ತಳ್ಳುವ ಕೆಲಸವನ್ನು ಈಗಲಾದರೂ ಮಾಡಬೇಕಾಗಿದೆ. ಜಪ್ತಿ ಮಾಡಿದ್ದ ಅದಿರು ಕಳ್ಳತನದಿಂದ ರಾಜ್ಯ ಸರ್ಕಾರಕ್ಕೆ ₹200 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ ಎಂದು ಅಂದಾಜಿಸಲಾಗಿದೆ. ಇದೇ ವಿಷಯಕ್ಕೆ ಸಂಬಂಧಿಸಿದ ಇನ್ನೂ 9 ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಇವೆ. ಈ ಪ್ರಕ್ರಿಯೆ ಬೇಗ ಮುಗಿದು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಿದೆ.

ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರಿಗೆ ಶಿಕ್ಷೆಯಾಗಿರುವುದರಿಂದ ರಾಜ್ಯ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಇನ್ನೂ ಬಾಕಿ ಉಳಿದಿರುವ ಪ್ರಕರಣಗಳ ತನಿಖೆಗೆ ಕ್ರಮ ಕೈಗೊಳ್ಳಬೇಕು. ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಬಳಿ ಸಂತೋಷ್ ಹೆಗ್ಡೆ ಅವರ ವರದಿ ಇದೆ, ಸಚಿವ ಸಂಪುಟ ಉಪ ಸಮಿತಿಯ ವರದಿಯೂ ಇದೆ. ಪರಿಶೀಲನಾ ಸಮಿತಿಯ ವರದಿಯೂ ಇದೆ. ಇವೆಲ್ಲವನ್ನೂ ಇಟ್ಟುಕೊಂಡು ಸುಮ್ಮನೆ ಕೂರುವುದು ರಾಜ್ಯದ ಹಿತದ ದೃಷ್ಟಿಯಿಂದ ಸರ್ವಥಾ ಸಲ್ಲ. ಈಗಲಾದರೂ ದಿಟ್ಟ ಕ್ರಮಕ್ಕೆ ಮುಂದಾಗದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ.

ಅದಿರಂ ಮಧುರಂ ಎನ್ನುತ್ತಿದ್ದವರ ವದನಂ ಮಧುರ ಆಗಬಾರದು. ಅದಿರಾಧಿಪತಿಗಳಿಗೆ ಕಾರಾಗೃಹವೇ ಭೂಷಣಂ.

ಚುರುಮುರಿ



ಹಬ್ಬದ ಸಂಭ್ರಮ

● ಗುರು ಪಿ.ಎಸ್.

'ದೀಪಾವಳಿ ಬಂದೇ ಬಿಡ್ತು, ಹೊಸ ಬಟ್ಟೆ ಇಲ್ಲ, ಬಂಗಾರ ಇಲ್ಲ. ಈ ಸಲ ಹಬ್ಬಕ್ಕೇನೂ ಕೊಡಿಸೋದಿಲ್ವ...' ಅಡುಗೆ ಮನೆಯಿಂದಲೇ ಸುಪ್ರಭಾತ ಪ್ರಾರಂಭಿಸಿದಳು ಹೆಂಡತಿ.

'ನೀನೇ ಬಂಗಾರ, ಮತ್ತೇಕೆ ಬೇಕು ನಿನಗೆ ಚಿನ್ನ' ಎಂದೆ ಪ್ರೀತಿಯಿಂದ.

'ಈ ಸಿನಿಮಾ-ನಾಟಕದ ಡೈಲಾಗ್ ಎಲ್ಲ ನನ್ನ ಮುಂದೆ ಹೇಳಬೇಡಿ. ಚಿನ್ನ ಕೊಡಿಸೋಕ್ಕಾಗದಿದ್ದರೂ ಹೊಸ ಸೀರೆಯನ್ನಾದರೂ ಕೊಡಿಸಿ' ಸಿಟ್ಟಿನಲ್ಲಿಯೇ ಹೇಳಿದಳು ಪತ್ನಿ.

'ಬಟ್ಟೆ-ಬಂಗಾರವೇ ಹಬ್ಬ ಅಲ್ಲ' ನನಗೂ ಸಿಟ್ಟು ಬಂತು.

'ಹೋಗಲಿ ಮಕ್ಕಳಿಗೆ ಪಟಾಕಿಯಾದರೂ ತಗೊಂಡು ಬನ್ನಿ' ಹೆಂಡತಿಯ ಧ್ವನಿ ಸ್ವಲ್ಪ ತಗ್ಗಿತು.

'ಪಟಾಕಿ ಹೊಡೆದರೆ ಮಾತ್ರ ದೀಪಾವಳಿನಾ? ನಾವು ಸಂತೋಷವಾಗಿರೋದೇ ಹಬ್ಬ' ಎಂದೆ ವೇದಾಂತಿಯಂತೆ.

'ಇದೆಲ್ಲ ಕೇಳೋಕ್ಕಷ್ಟೇ ಸರಿ. ಹಬ್ಬ ಮಾಡಿಲ್ಲ ಅಂದ್ರೆ ಅಕ್ಕ-ಪಕ್ಕದವರು ಏನೆಂದುಕೊಳ್ತಾರೆ?'

'ಅವರಿವರು ಏನಂದುಕೊಳ್ತಾರೋ ಅಂತ ಅವರಿಷ್ಟದಂತೆ ಜೀವನ ಮಾಡೋಕಾಗುತ್ತೇನಮ್ಮ, ನಮ್ಮಿಷ್ಟದಂತೆ ಬದುಕಬೇಕು'.

'ಅಂದರೆ ನಿಮ್ಮ ಪ್ರಕಾರ ಹಬ್ಬ ಅಂದರೇನು?'

'ಬಯಸಿದ ಕ್ಷೇತ್ರದಲ್ಲಿ ಬಯಸಿದ ಪಕ್ಷದಿಂದ ಎಲೆಕ್ಷನ್ ಟಿಕೆಟ್ ಸಿಕ್ಕರೆ ಯುವ ರಾಜಕಾರಣಿಗಳಿಗೆ ಅದೇ ಹಬ್ಬ'.

'ಸೀನಿಯರ್ ರಾಜಕಾರಣಿಗಳಿಗೆ?'

'ಬಯಸಿದ ಭೂಮಿ ಡಿನೋಟಿಫೈ ಆಗಿ ಕೈ ಸೇರಿದರೆ ರಾಜಕಾರಣಿಗಳಿಗೆ ಅದೇ ದೀಪಾವಳಿ'.

'ಮತ್ತೆ?'

'ಜೈಲಿನಲ್ಲಿರೋರಿಗೆ ಬೇಲ್ ಸಿಕ್ಕರೆ ಹಬ್ಬ, ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅವರ ಲೇಔಟ್ ಸೇಲ್ ಆದರೆ ಹಬ್ಬ'.

'ಮುಂದೆ?'

'ಅಭಿನಯಿಸಿದ ಸಿನಿಮಾಗಳೆಲ್ಲ ಸೆಂಚುರಿ ಬಾರಿಸಿದರೆ ಸಿನಿಮಾ ನಟ-ನಟಿಯರಿಗೆ, ಆಡಿದ ಪಂದ್ಯಗಳಲ್ಲೆಲ್ಲ ಶತಕ ಹೊಡೆದರೆ ಕ್ರಿಕೆಟರ್‌ಗಳಿಗೆ ಹಬ್ಬ' ಉದಾಹರಣೆ ಕೊಡುತ್ತಾ ಸಾಗಿದೆ.

'ನಿಮಗೆ ಯಾವಾಗ ನಿಜವಾದ ಹಬ್ಬ?'

'ನೀನು ತವರು ಮನೆಗೆ ಹೋದಾಗ...'

ಅಡುಗೆ ಕೋಣೆಯಿಂದ ಸೌಟು ತೂರಿಬಂತು.

ಸಂಗತ

ದುರ್ಬಲ ಆಹಾರ, ದುರ್ಬಲ ನಾಳೆ

ಮಕ್ಕಳ ಆಹಾರ ಕ್ರಮದ ಮೇಲೆ ಅವರ ಕಲಿಕೆ ಅವಲಂಬಿಸಿರುತ್ತದೆ

● ಸದಾಶಿವ್ ಸೊರಟೂರು

ಶಾಲೆಯೊಂದರ ಪೋಷಕರ ಸಭೆಯಲ್ಲಿ ಇತ್ತೀಚೆಗೆ ಬಹುತೇಕ ತಾಯಂದಿರು ಒಂದು ಸರಳ ಕೋರಿಕೆಯನ್ನು ಮುಂದಿಟ್ಟರು: 'ಮಕ್ಕಳು ಸರಿಯಾಗಿ ಊಟ ಮಾಡುವುದಿಲ್ಲ. ಯಾವ ಅಡುಗೆ ಮಾಡಿದರೂ ತಿನ್ನುವುದಿಲ್ಲ, ನೀವಾದರೂ ಹೇಳಿ. ತಿನ್ನಲು ತಾಕೀತು ಮಾಡಿ'. ಆಹಾರವನ್ನು ತಾಕೀತು ಮಾಡಿ ತಿನ್ನಿಸುವುದಲ್ಲ. ಅದು ಇಷ್ಟಪಟ್ಟು ತಿನ್ನಬೇಕಾದದ್ದು. ಮಕ್ಕಳು ಹಾಗೆ ತಿನ್ನುವಂತೆ ಮಾಡಲು ನಾವೆಲ್ಲೋ ಸೋತಿದ್ದೇವೆ ಎಂಬುದನ್ನು ಶಿಕ್ಷಕರಾದ ನಾವು ಅವರಿಗೆ ಮನವರಿಕೆ ಮಾಡಿಸಬೇಕಾಯಿತು.

ಮಕ್ಕಳ ಆಹಾರದ ಶಿಸ್ತು ದಾರಿ ತಪ್ಪಿದೆ. ಅವರು ಸೇವಿಸುವ ಅಸಮರ್ಪಕ ಆಹಾರದಿಂದ ಅವರ ದೇಹಕ್ಕೆ ಸೇರಬೇಕಾದ ಕನಿಷ್ಠ ಪೋಷಕಾಂಶಗಳು ಸೇರುತ್ತಿಲ್ಲ. ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ ಮಕ್ಕಳಲ್ಲಿ ಅನೀಮಿಯಾ (ರಕ್ತಹೀನತೆ) ಸಮಸ್ಯೆ ಕಾಣಿಸಿಕೊಂಡಿದ್ದು, 13 ಸಾವಿರ ಮಕ್ಕಳನ್ನು ತೀವ್ರ ರೀತಿಯ ಸಮಸ್ಯೆಗಳು ಕಾಡುತ್ತಿವೆ ಎಂದು ಆರೋಗ್ಯ ಇಲಾಖೆಯ ವರದಿಯೊಂದು ಇತ್ತೀಚೆಗಷ್ಟೇ ತಿಳಿಸಿದೆ.

ತಿನ್ನಲು ಬಹಳಷ್ಟು ಒಳ್ಳೆಯ ಆಹಾರ ದೊರೆಯುತ್ತಿದ್ದರೂ ಅದನ್ನು ತಿನ್ನದ ಮತ್ತು ತಿನ್ನಲು ಒಳ್ಳೆಯ ಆಹಾರದ ಅಭಾವದಿಂದ ಬಳಲುತ್ತಿರುವ ಎರಡೂ ಸ್ತರದ ಮಕ್ಕಳನ್ನು ನಾವಿಲ್ಲಿ ಕಾಣಬಹುದು. ಈ ಎರಡು ರೀತಿಯ ಆಹಾರ ಕ್ರಮಗಳಿಂದಲೂ ಮಕ್ಕಳ ದೇಹದೊಳಗೆ ಸೇರಬೇಕಾದದ್ದು ಸೇರದೇ ಹೋಗುತ್ತದೆ. ಆಗ ಅವರು ಬೆಳೆಯಬೇಕಾದಂತೆ ಬೆಳೆಯದೆ, ಬಾಳಬೇಕಾದಂತೆ ಬಾಳದೆ ನಿಶ್ಶಕ್ತಿಯಿಂದ ಬಳಲಬೇಕಾಗುತ್ತದೆ. ಮಕ್ಕಳ ಆಹಾರ ಕ್ರಮದ ಮೇಲೆ ಅವರ ಕಲಿಕೆಯೂ ಅವಲಂಬಿಸಿರುತ್ತದೆ. ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ಸೇವನೆಯು ಮಗುವಿನಲ್ಲಿ ಆಲೋಚನಾ ಶಕ್ತಿ ಮತ್ತು ಉತ್ಪಾದಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅಲ್ಲದೆ ಬುದ್ಧಿಶಕ್ತಿ ಮತ್ತು ಕಲಿಕೆಯ ವೇಗವನ್ನು ಚುರುಕುಗೊಳಿಸುತ್ತದೆ ಎಂದು ಹಲವು ವರದಿಗಳು ಹೇಳುತ್ತವೆ.


ದೀರ್ಘಕಾಲದ ರಕ್ತಹೀನತೆಯು ಮಕ್ಕಳ ನರಮಂಡಲದ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಬಹುದು. ಮಕ್ಕಳ ನಡವಳಿಕೆಯನ್ನೂ ಪ್ರಭಾವಿಸಬಹುದು. ಕೆಲವು ಕಾಯಿಲೆಗಳಿಗೆ ತುತ್ತಾಗುವ ಅಪಾಯ ಸಹ ಎದುರಾಗಬಹುದು.

ಕೀನ್ಯಾದ ಸರ್ಕಾರಿ ಶಾಲೆಯೊಂದರಲ್ಲಿ ಅಲ್ಲಿನ ಬಡ ಮಕ್ಕಳಿಗೆ ಎರಡು ವರ್ಷಗಳವರೆಗೆ ಸತತವಾಗಿ ಉತ್ತಮ ಪೌಷ್ಟಿಕಾಂಶವುಳ್ಳ ಸತ್ವಯುತ ಆಹಾರವನ್ನು ನೀಡಲಾಯಿತು ಮತ್ತು ಆರು ತಿಂಗಳಿಗೊಮ್ಮೆ ಜಂತುಹುಳುವಿನ ಮಾತ್ರೆಗಳನ್ನೂ ಕೊಡಲಾಯಿತು. ನಂತರದ ವರ್ಷಗಳಲ್ಲಿ ಅಚ್ಚರಿಯ ಫಲಿತಾಂಶ ಸಿಕ್ಕಿತು. ಇತರ ಶಾಲೆಗಳಿಗಿಂತ ಆ ಶಾಲೆಯ ಮಕ್ಕಳು ಕಲಿಕೆಯಲ್ಲಿ ಹೆಚ್ಚಿನದ್ದನ್ನು ಸಾಧಿಸಿದ್ದರು.

ಈ ಮೊದಲೇ ಹೇಳಿದಂತೆ, ಫಾಸ್ಟ್‌ಫುಡ್, ಜಂಕ್‌ಫುಡ್ ರುಚಿಯ ಹಿಂದೆ ಬಿದ್ದ ಮಕ್ಕಳು ಮನೆಯ ಉತ್ತಮ ಊಟದ ಕಡೆ ಮನಸ್ಸು ಮಾಡುವುದಿಲ್ಲ. ಪೋಷಕರೂ ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಹೀಗೆ ಹೊರಗೆ ದುಬಾರಿಯಾದ ಆಹಾರ ತಿನ್ನುವುದು ಕೆಲವರಿಗೆ ಪ್ರತಿಷ್ಠೆಯ ವಿಷಯವಾಗಿದೆ. ಅದನ್ನು ತಿಂದೆವು, ಇದನ್ನು ತಿಂದೆವು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಕೆಲವು ಪೋಷಕರು ಇದನ್ನು ಪ್ರೋತ್ಸಾಹಿಸುತ್ತಿರುವುದು ಮಾತ್ರ ಸೋಜಿಗ. ಮಕ್ಕಳಿಗೆ ಲಭ್ಯವಾಗುವ 'ಪಾಕೆಟ್‌ಮನಿ' ಸಂಸ್ಕೃತಿಯಿಂದ ಅವರ ಆಹಾರ ಕ್ರಮ ಕೆಡುತ್ತಿರುವುದಂತೂ ದಿಟ. ಮಕ್ಕಳ ಶಾಲಾ ಬ್ಯಾಗ್‌ಗಳು ಕುರುಕಲು ತಿಂಡಿಯಿಂದ ತುಂಬಿ ಹೋಗಿರುತ್ತವೆ.

ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಎಷ್ಟೋ ಮಕ್ಕಳಿಗೆ ತಿನ್ನಲು ಸರಿಯಾದ ಊಟವಿಲ್ಲ. ಅಂತಹ ಬಡತನದ ಮಧ್ಯೆ ಪೋಷಕಾಂಶಗಳ ಕಡೆ ಗಮನ ಕೊಡುವುದಾದರೂ ಹೇಗೆ? ಏನೋ ಒಂದು ಹೊಟ್ಟೆ ತುಂಬಿದರೆ ಸಾಕು ಎನ್ನುವ ಹಸಿವಿನ ಕಷ್ಟ ಅದು. ಅಂತಹ ಬಡತನದಲ್ಲಿ ಸಮತೋಲಿತ ಆಹಾರ ಸಿಗುವುದು ಕಷ್ಟವೇ. ಬಡವರು ಬಡವರಾಗಿಯೇ ಉಳಿಯುವುದಕ್ಕೆ ಅವರು ಸೇವಿಸುವ ಆಹಾರ ಪದಾರ್ಥಗಳು ಒಂದು ಪ್ರಮುಖ ಕಾರಣವಾಗಿವೆ.

ನಾವು ಮಕ್ಕಳ ಭವಿಷ್ಯ ಎಂದರೆ ಅದು ಅವರು ತೆಗೆಯುವ ಅಂಕಗಳು ಎಂದೇ ಯೋಚಿಸುತ್ತೇವೆ. ಆ ಅಂಕಗಳನ್ನು ತೆಗೆಯಲು ಕೂಡ ಉತ್ತಮ ಆಹಾರವನ್ನು ಮಗು ಸೇವಿಸಬೇಕು ಎಂಬುದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಉತ್ತಮ ಆರೋಗ್ಯ ಒಂದು ಸಂಪತ್ತು. ಅದು ನಾಳೆಗಳಲ್ಲಿ ಹೂಡುವ ಅತಿ ದೊಡ್ಡ ಬಂಡವಾಳ ಎಂಬುದು ನಮಗೆ ತಿಳಿಯದೇ ಇರುವ ವಿಷಯವಲ್ಲ. ಒಮ್ಮೊಮ್ಮೆ ನಾವು ನಾಳೆಗೆ ದುರ್ಬಲ ಆರೋಗ್ಯದ ಮಾನವ ಸಂಪನ್ಮೂಲವನ್ನು ಕಾಣಿಕೆಯಾಗಿ ನೀಡುತ್ತಿದ್ದೇವೇನೊ ಅನಿಸುತ್ತದೆ.



ಸರ್ಕಾರವು ವಿವಿಧ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿನ ಪೋಷಕಾಂಶದ ಕೊರತೆಯನ್ನು ನೀಗಿಸಲು ಶ್ರಮಿಸುತ್ತದೆ. ವಾರದ ಆರು ದಿನವೂ ಸರ್ಕಾರಿ ಶಾಲಾ ಮಕ್ಕಳಿಗೆ ಹಾಲು, ಮೊಟ್ಟೆ, ಬಾಳೆಹಣ್ಣು ನೀಡುವ ಯೋಜನೆ ತುಂಬಾ ಅದ್ಭುತವಾದದ್ದು. ಇದರ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಮಕ್ಕಳ ಕಲಿಕೆಯಲ್ಲಿ ಮತ್ತು ಅವರ ಆರೋಗ್ಯದಲ್ಲಿ ನಾವು ಖಂಡಿತ ಕಾಣಬಹುದಾಗಿದೆ. ಆದರೆ ಅದು ತುಂಬಾ ಪ್ರಾಮಾಣಿಕವಾಗಿ ಅನುಷ್ಠಾನಗೊಳ್ಳಬೇಕಾಗಿದೆ ಅಷ್ಟೇ.

ಪೋಷಕರು ಮಕ್ಕಳಿಗೆ ಉತ್ತಮ ಆಹಾರ ಕ್ರಮವನ್ನು ರೂಢಿಸಬೇಕು. ಸದಾ ಹೊರಗೆ ತಿನ್ನುವುದು, ಕೌಮಾರ್ಯಕ್ಕೆ ಬಂದ ಮಕ್ಕಳು ದಪ್ಪ ಆಗುತ್ತೇವೆ ಎಂದು ಹೆದರಿ ಊಟ ಬಿಡುವುದು, ಸದಾ ಕುರುಕಲು ತಿಂಡಿಗೆ ಆತುಕೊಳ್ಳುವುದು, ಬೇಕರಿ ತಿಂಡಿಗಳ ಚಟ ಅಂಟಿಸಿಕೊಳ್ಳುವುದು, ಚಾಟ್ ತಿನ್ನುವುದನ್ನೇ ಊಟ ಎಂದು ಭಾವಿಸಿಕೊಳ್ಳುವುದು, ಸಮಯ ತಪ್ಪಿಸಿ ಊಟ ಮಾಡುವಂಥ ಅಭ್ಯಾಸಗಳನ್ನು ತಪ್ಪಿಸಬೇಕು.

ದುರ್ಬಲ ಆಹಾರವು ದುರ್ಬಲ ಕಲಿಕೆಗೆ ಮತ್ತು ಮಗುವಿನ ದುರ್ಬಲ ನಾಳೆಗಳಿಗೆ ಕಾರಣವಾಗಬಹುದು. ಹಾಗಾಗಿ, ನಾವು ಇಂದೇ ಎಚ್ಚೆತ್ತುಕೊಳ್ಳಬೇಕು.

ವಾಚಕರ ವಾಣಿ

ಅರ್ಥವಿಲ್ಲದ ತೀರ್ಮಾನ, ಸಂಪನ್ಮೂಲದ ದುರ್ಬಳಕೆ

ಹೊಸ ಪ್ರವಾಸೋದ್ಯಮ ನೀತಿಯ ಅನ್ವಯ, ರಾಜ್ಯದ ವಿವಿಧೆಡೆ ಪ್ರವಾಸೋದ್ಯಮ ಇಲಾಖೆಯ ಒಡೆತನದಲ್ಲಿರುವ 680 ಎಕರೆ ಜಮೀನನ್ನು ಮಾರಿ, ಅದರಿಂದ ಬರುವ ಹಣವನ್ನು ಪ್ರವಾಸೋದ್ಯಮ ಯೋಜನೆಗಳಿಗೆ ಬಳಸಿಕೊಳ್ಳುವ ಸರ್ಕಾರದ ತೀರ್ಮಾನ ಅರ್ಥವಿಲ್ಲದ್ದು. ಜೊತೆಗೆ ಇದು, ಇರುವ ಅಲ್ಪ ಪ್ರಮಾಣದ ಸಂಪನ್ಮೂಲದ ದುರ್ಬಳಕೆ ಎಂದೇ ಹೇಳಬಹುದು. ರಾಜ್ಯದಲ್ಲಿರುವ ಕೆಲವು ಪ್ರಖ್ಯಾತ ಪ್ರೇಕ್ಷಣೀಯ ಸ್ಥಳಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಮಾಡುವತ್ತ ಗಮನ ಹರಿಸಬೇಕಾಗಿರುವುದು ತುಂಬಾ ಅವಶ್ಯ. ಉದಾಹರಣೆಗೆ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಮಹಾಕೂಟದಂತಹ ಕ್ಷೇತ್ರಗಳು ಅಂತರರಾಷ್ಟ್ರೀಯ ಮನ್ನಣೆ ಗಳಿಸಿ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುತ್ತಲೇ ಇವೆ. ಆದರೂ ಈ ಸ್ಥಳಗಳಲ್ಲಿ ಮೂಲ ಸೌಕರ್ಯಗಳ ಕೊರತೆ ಇರುವುದು ಆಶ್ಚರ್ಯಕರ. ರಸ್ತೆ ಸಂಪರ್ಕ ಅಸಮರ್ಪಕವಾಗಿರುವುದು, ಪ್ರವಾಸಿಗರಿಗೆ ರಸ್ತೆ ಮಾರ್ಗದರ್ಶನದ ನಾಮಫಲಕಗಳು ಮತ್ತು ಪಾರ್ಕಿಂಗ್ ವ್ಯವಸ್ಥೆ ಇಲ್ಲದಿರುವುದು, ತಂಗಲು ತಕ್ಕಮಟ್ಟಿಗೆ ವ್ಯವಸ್ಥಿತವಾಗಿರುವ ಹೋಟೆಲ್‌ಗಳ ಕೊರತೆ, ಜನಜಂಗುಳಿಯಿಂದ ತುಂಬಿರುವ ಕಿರಿದಾದ ರಸ್ತೆಗಳು, ಸಾಲದ್ದಕ್ಕೆ ಬೀಡಾಡಿ ದನಗಳ ಹಾವಳಿಯಿಂದ ಈ ತಾಣಗಳು ಬಳಲುತ್ತಿವೆ. ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಗಮನಹರಿಸಲಿ.

ಗಿರಿಯಪ್ಪ ಕೊಳ್ಳಣ್ಣವರ, ಆಡಗಲ್, ಬಾದಾಮಿ

ದೀಪಾವಳಿ– ಪ್ರಭಾವಳಿ!

ಇಂದು ನರಕಚತುರ್ದಶಿ
ಅರ್ಥಾತ್ ದೀಪಾವಳಿ
ನಾಡಿದ್ದು ಬಲಿಪಾಡ್ಯಮಿ
ಸುರ್ ಸುರ್ ಸದ್ದು ಮಾಡಲು,
ನಡುವೆ ಬಂದಿದೆ
ಶುಕ್ರವಾರ...
ರಾಜ್ಯೋತ್ಸವ
ಕನ್ನಡ ಪ್ರಭಾವಳಿ ಬೀರಲು!

ಮ.ಗು.ಬಸವಣ್ಣ, ಮೈಸೂರು

ಲಾಕರ್ ಕಳ್ಳತನ: ಆತಂಕಕಾರಿ ವಿದ್ಯಮಾನ

ಜನಸಾಮಾನ್ಯರು ಕಷ್ಟಪಟ್ಟು ಸಂಪಾದಿಸಿದ ಚಿನ್ನಾಭರಣಗಳನ್ನು ಕಳ್ಳಕಾಕರ ಭಯದಿಂದ ರಕ್ಷಿಸಿಕೊಳ್ಳಲು, ತಮಗೆ ಸಮೀಪ ಇರುವ ಬ್ಯಾಂಕ್‌ನಲ್ಲಿ ಲಾಕರ್ ತೆರೆದು, ಅದಕ್ಕೆ ಪ್ರತಿವರ್ಷ ಸೇವಾ ಶುಲ್ಕ ಪಾವತಿಸಿ, ಅದರಲ್ಲಿ ಇಡುತ್ತಾರೆ. ಆದರೆ ಮೊನ್ನೆ ದಾವಣಗೆರೆ ಜಿಲ್ಲೆಯ ನ್ಯಾಮತಿ ನಗರದ ಎಸ್‌ಬಿಐ ಶಾಖೆಯಲ್ಲಿ ₹13 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ಕಳ್ಳರು ದೋಚಿರುವುದು ಆತಂಕ ಹುಟ್ಟಿಸುವ ಸಂಗತಿ. ಗ್ರಾಹಕರು ಅಪಾರ ನಂಬಿಕೆಯಿಂದ ಬ್ಯಾಂಕ್‌ನಲ್ಲಿ ಇಟ್ಟ ಚಿನ್ನಾಭರಣಕ್ಕೇ ಸುರಕ್ಷತೆ ಇಲ್ಲವೆಂದ ಮೇಲೆ ಇನ್ನು ನಂಬುವುದಾದರೂ ಯಾರನ್ನು? ಜನಸಾಮಾನ್ಯರು ತಮ್ಮ ಚಿನ್ನಾಭರಣಗಳ ಸುರಕ್ಷತೆಗಾಗಿ ಇನ್ನೆಲ್ಲಿ ಹೋಗಬೇಕು?

ನಾವು ಲಾಕರ್‌ನಲ್ಲಿ ಎಷ್ಟು ಚಿನ್ನಾಭರಣಗಳನ್ನು ಇಟ್ಟಿರುತ್ತೇವೆ ಎಂಬುದು ಬ್ಯಾಂಕ್‌ನವರಿಗೂ ತಿಳಿದಿರುವುದಿಲ್ಲ. ಅದು ಗ್ರಾಹಕರಿಗೆ ಮಾತ್ರ ತಿಳಿದಿರುತ್ತದೆ. ಒಂದು ವೇಳೆ ಗ್ರಾಹಕರೊಬ್ಬರು ತಮ್ಮ ಲಾಕರ್‌ನಲ್ಲಿ ₹2 ಲಕ್ಷ ಬೆಲೆಬಾಳುವ ಚಿನ್ನಾಭರಣಗಳನ್ನು ಇಟ್ಟು, ಈ ರೀತಿ ಬ್ಯಾಂಕ್ ದರೋಡೆ ಆದಾಗ ತಾವು ಲಾಕರ್‌ನಲ್ಲಿ ₹10 ಲಕ್ಷ ಬೆಲೆಬಾಳುವ ಚಿನ್ನಾಭರಣಗಳನ್ನು ಇಟ್ಟಿದ್ದುದಾಗಿ ಹೇಳಿದರೆ ಅದಕ್ಕೆ ಹೊಣೆ ಯಾರು? ಒಂದು ವೇಳೆ ಪರಿಹಾರ ನೀಡಿದರೂ ಗ್ರಾಹಕರಿಗೆ ಮೂಲ ಚಿನ್ನಾಭರಣ ಸಿಗುವುದಿಲ್ಲ. ಇದಕ್ಕೆಲ್ಲ ಯಾರು ಹೊಣೆ?

ಬೂಕನಕೆರೆ ವಿಜೇಂದ್ರ, ಮೈಸೂರು

ದಿವಾಳಿ ಆಗದಿರಲಿ ದೀಪಾವಳಿ

ಇತ್ತೀಚಿನ ದಿನಗಳಲ್ಲಿ ದೀಪಾವಳಿ ಹಬ್ಬಕ್ಕೆ ಶುಭಾಶಯ ಕೋರುವವರು 'ದಿವಾಳಿ' ಎಂಬ ಪದವನ್ನು ಹೆಚ್ಚಾಗಿ ಬಳಕೆ ಮಾಡುತ್ತಿದ್ದಾರೆ. ದಿವಾಳಿ ಎಂದರೆ ಎಲ್ಲವನ್ನೂ ಕಳೆದುಕೊಂಡವ, ಏನೂ ಇಲ್ಲದವ ಎಂದರ್ಥ. ಇದರ ಅರ್ಥ ಗೊತ್ತಿದ್ದರೂ ದಿವಾಳಿ ಪದದ ಬಳಕೆ ಹೆಚ್ಚಾಗುತ್ತಿರುವುದು ವಿಪರ್ಯಾಸ. ಕನ್ನಡಿಗರಾದ ನಾವು ನಮ್ಮ ಭಾಷೆ, ಸಂಸ್ಕಾರ– ಸಂಸ್ಕೃತಿ, ಆಚಾರ– ವಿಚಾರಗಳನ್ನು ಉಳಿಸಿಕೊಂಡು ಹೋಗಬೇಕು. ಮುಂದಿನ ಪೀಳಿಗೆ ಇವುಗಳನ್ನು ಮುಂದುವರಿಸುವಂತೆ ಮಾಡಬೇಕು. ಹೀಗಾಗಿ, ದೀಪಾವಳಿ 'ದಿವಾಳಿ' ಆಗದಿರಲಿ, ದಿವಾಳಿಯು 'ದೀಪಾವಳಿ' ಆಗಲಿ.

ಶರತ್ ಆರ್., ಕಡೂರು

ಕವಿಗಳ ನಾಮಫಲಕಕ್ಕೆ ವಿರೋಧ: ಸಲ್ಲದ ನಡೆ

ಕನ್ನಡ ನುಡಿಯನ್ನು ತನ್ನ ಆಡಳಿತ ಭಾಷೆಯಾಗಿ ಮಾಡಿಕೊಂಡಿರುವ ಕರ್ನಾಟಕದ ಒಂದು ಪ್ರದೇಶದಲ್ಲಿ ಕನ್ನಡ ಕವಿಗಳ ನಾಮಫಲಕ ಅಳವಡಿಸಲು ಪ್ರತಿರೋಧ ವ್ಯಕ್ತಪಡಿಸುತ್ತಿರುವ ನಡವಳಿಕೆ ಅಸಹನೀಯ. ಕನ್ನಡದ ಸುದ್ದಿಗೆ ಬಂದರೂ ಸಹನೆಯಿಂದ ಮೌನ ವಹಿಸುತ್ತಾರೆ ಎಂದು ತಿಳಿದು ಕೆಣಕುತ್ತಿರುವವರು ಯಾರು ಎನ್ನುವುದನ್ನು ಗುರುತಿಸಿ ಬುದ್ಧಿ ಹೇಳಬೇಕು. ಕನ್ನಡದ ಸಮೃದ್ಧಿಗೆ, ಸಹಿಷ್ಣುತೆಗೆ ತಳಪಾಯ ಹಾಕಿ ಸರ್ವ ಜನಾಂಗದ ತೋಟವಾಗಿ ರೂಪಿಸಿರುವ ನಾಡಿನಲ್ಲಿದ್ದು, ಇರುವ ಮನೆಗೇ ಬೆಂಕಿ ಹಚ್ಚಿ ಶಾಂತಿ ಕದಡುವುದು ಖಂಡನೀಯ.

ಕನ್ನಡದ ಸುದ್ದಿಗೆ ಬಂದರೆ ನಾವು ಸುಮ್ಮನಿರುವುದಿಲ್ಲ ಎನ್ನುವ ಕವಿಯ ವಾಣಿ ನಮ್ಮ ಸರ್ಕಾರಕ್ಕೆ ಸ್ಫೂರ್ತಿಯಾಗಲಿ. ತಕ್ಷಣವೇ ಕಠಿಣ ಕ್ರಮ ತೆಗೆದುಕೊಂಡು ಇಂತಹ ವಿಕೃತ ಮನಸ್ಸಿನವರಿಂದ ಕ್ಷಮೆ ಕೇಳಿಸಿ, ಇನ್ನೆಂದೂ ಇಂತಹ ಒಡಕು ಧ್ವನಿ ಕೇಳದಂತೆ ಅದನ್ನು ಮೊಳಕೆಯಲ್ಲಿಯೇ ಬೇರು ಸಹಿತ ಕಿತ್ತೆಸೆಯುವುದಕ್ಕೆ ಇದು ಸಕಾಲ.

ಸತ್ಯಬೋಧ, ಬೆಂಗಳೂರು

ದೇಶಕ್ಕೆ ಮಾರಕವಾದ ಕ್ಷಮಾಗುಣ

ರಾಜಕಾರಣಿಗಳ ಸ್ವಾರ್ಥ, ಭ್ರಷ್ಟಾಚಾರ, ಕುಟುಂಬರಾಜಕಾರಣದಂತಹ ಗುಣಗಳು ಸಾರ್ವಜನಿಕರಿಗೆ ಸ್ವೀಕಾರಾರ್ಹವಾಗಿರುವುದನ್ನು ಚಂದ್ರಕಾಂತ ವಡ್ಡು ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಅ. 24) ಗುರುತಿಸಿದ್ದಾರೆ. ಇವಷ್ಟೇ ಅಲ್ಲ, ಅವರ ಗೂಂಡಾಗಿರಿ, ಕೊಲೆಗಡುಕತನ ಮತ್ತು ಲಂಪಟತನವನ್ನೂ ಮತದಾರರು ಈಗಾಗಲೇ ಕ್ಷಮಿಸಿಯಾಗಿದೆ. ಇಲ್ಲದಿದ್ದರೆ ಕೊಲೆ ಆರೋಪ ಎದುರಿಸುತ್ತಿರುವವರು, ಅದಿರು ಕಳ್ಳತನ ಮಾಡಿದವರು, ಅನೈತಿಕ ಸಂಬಂಧ ಹೊಂದಿದವರೆಲ್ಲ ಚುನಾವಣೆಯಲ್ಲಿ ಸೋಲುತ್ತಿರಲಿಲ್ಲವೇ? ಮತದಾರನ ಇಂತಹ ಕ್ಷಮಾಗುಣವೇ ದೇಶಕ್ಕೆ ಮಾರಕ.

ಗೋವಿಂದ ಎಸ್. ಭಟ್ಟ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

2003ರಲ್ಲಿ ಮೂಡಿತ್ತು ಒಡಕು; ಪ್ರಬಲ ಜಾತಿಗಳಿಂದ ದಲಿತರ ಮೇಲೆ ನಿರಂತರ ಹಿಂಸೆ, ಶೋಷಣೆ

ದಲಿತರ ಮೇಲೆ ದೌರ್ಜನ್ಯ ಮರಕುಂಬಿ ಪಾಠ

ಕೊಪ್ಪಳ ಜಿಲ್ಲೆಯ ಗಂಗಾವತಿಯಿಂದ 12 ಕಿ.ಮೀ. ದೂರದಲ್ಲಿರುವ ಮರಕುಂಬಿ ಎಂಬ ಪುಟ್ಟ ಗ್ರಾಮ ಈಗ ದೇಶದಾದ್ಯಂತ ಸುದ್ದಿಯಲ್ಲಿದೆ. ದಲಿತರ ಮೇಲೆ ದೌರ್ಜನ್ಯ ನಡೆಸಿದ ಹಾಗೂ ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಿದ ಆರೋಪ ಸಾಬೀತಾಗಿದ್ದರಿಂದ ಪ್ರಬಲ ಜಾತಿಗಳ 98 ಮಂದಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ. ದಶಕದ ಹಿಂದೆ ನಡೆದ ಘಟನೆಗೆ ಸಂಬಂಧಿಸಿದ ತೀರ್ಪು ಇದಾಗಿದ್ದರೂ ಗ್ರಾಮದ ಜಾತಿ ಸಂಘರ್ಷಕ್ಕೆ ಸುಮಾರು 20 ವರ್ಷಗಳ ಇತಿಹಾಸ ಇದೆ; ಜಾತಿ ದೌರ್ಜನ್ಯ ಎಸಗುವುದು ಮತ್ತು ಅದನ್ನು ಲಘುವಾಗಿ ಪರಿಗಣಿಸುವುದರ ಪರಿಣಾಮ ಇಂದು ಗ್ರಾಮದಲ್ಲಿ ಗೋಚರಿಸುತ್ತಿದೆ

● ಪ್ರಮೋದ ಕುಲಕರ್ಣಿ

ಅದು 2014, ಆಗಸ್ಟ್ 28. ಕೊಪ್ಪಳ ಜಿಲ್ಲೆಯ ಗಂಗಾವತಿ ಪಟ್ಟಣದ ಶಿವೆ ಚಿತ್ರಮಂದಿರದಲ್ಲಿ ಕನ್ನಡದ 'ಪವರ್' ಸಿನಿಮಾ ನೋಡಲು ಮರಕುಂಬಿ ಗ್ರಾಮದ ಪ್ರಬಲ ಜಾತಿಗಳ ಒಂದಷ್ಟು ಯುವಕರು ತೆರಳಿದ್ದರು. ಟಿಕೆಟ್ ಪಡೆಯುವ ವಿಚಾರವಾಗಿ ಆ ಯುವಕರಿಗೂ ಮತ್ತು ಅಲ್ಲಿದ್ದ ಬೇರೆ ಜನರಿಗೂ ಜಗಳ ಆರಂಭವಾಗಿ, ಹೊಡೆದಾಟವೇ ನಡೆದಿತ್ತು. ಆಗ ಗ್ರಾಮದ ದಲಿತ ಸಮುದಾಯದ ಯುವಕರು ಕೂಡ ಅಲ್ಲಿಯೇ ಇದ್ದರು. ಇದೇ ಸಮುದಾಯದ ಹುಡುಗರೇ ತಮ್ಮ ಮೇಲಿನ ಹಲ್ಲೆಗೆ ಕಾರಣರಾಗಿದ್ದಾರೆ ಎಂದು ಪ್ರಬಲ ಜಾತಿಯ ಮಂಜುನಾಥ ಈಳಿಗೇರ ಆಕ್ರೋಶಗೊಂಡರು; ಸಿನಿಮಾ ಮುಗಿಸಿಕೊಂಡು ಗ್ರಾಮದ ದಲಿತರ ಕೇರಿಗೆ ತಮ್ಮ ಸಮುದಾಯದ ಜನರೊಂದಿಗೆ ಹೋಗಿ ಅಲ್ಲಿನ ಜನರ ಮೇಲೆ ಹಲ್ಲೆ ಮಾಡಿ, ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚಿದರು. ನಂತರ ದೊಡ್ಡ ಹಿಂಸಾಚಾರವೇ ನಡೆದು, ಎರಡೂ ಗುಂಪಿನ ಜನ ಗಾಯಗೊಂಡು ಆಸ್ಪತ್ರೆ ಸೇರಿದ್ದರು.

ಘಟನೆಯ ಸಂಬಂಧ ಮಾದಿಗ ಸಮುದಾಯದ ಭೀಮೇಶ್ ದೊಡ್ಡಮನಿ ದೂರು ನೀಡಿದ್ದರು (ಭೀಮೇಶ್ ಒಂದೂವರೆ ವರ್ಷದ ಹಿಂದೆ ಮೃತಪಟ್ಟಿದ್ದಾರೆ). ಮಂಜುನಾಥನನ್ನೇ ಎ–1 ಆರೋಪಿಯನ್ನಾಗಿ ಮಾಡಲಾಗಿತ್ತು. ಪ್ರಕರಣದ ಬಗ್ಗೆ ಹತ್ತು ವರ್ಷ ವಿಚಾರಣೆ ನಡೆಸಿದ ನ್ಯಾಯಾಲಯವು ಈಗ ಆದೇಶ ಪ್ರಕಟಿಸಿದೆ.

ಈ ಘಟನೆ ನಡೆದು 10 ವರ್ಷಗಳಾಗಿವೆ. ಆದರೆ, 20 ವರ್ಷಗಳ ಹಿಂದೆಯೇ ಊರಿನಲ್ಲಿ ಜಾತಿ ಸಂಘರ್ಷ ಆರಂಭವಾಗಿತ್ತು. ಅದಕ್ಕೆ ಕಾರಣವಾಗಿದ್ದು ಒಂದು ಸಮುದಾಯ ಭವನ.

'ಸಭೆ ಸಮಾರಂಭಗಳನ್ನು ನಡೆಸಲು ಸರ್ಕಾರ ಗ್ರಾಮದ ದಲಿತರ ಕೇರಿಯಲ್ಲಿ ಸಮುದಾಯ ಭವನ ನಿರ್ಮಿಸಿತ್ತು. ಇದನ್ನು ಗ್ರಾಮದ ಪ್ರಬಲ ಜಾತಿಯ ಜಮೀನ್ದಾರನೊಬ್ಬ ಭತ್ತ ತುಂಬಿದ ಚೀಲಗಳನ್ನು ದಾಸ್ತಾನು ಮಾಡಲು ಬಳಸಿಕೊಳ್ಳುತ್ತಿದ್ದ. ಆಗ ಗ್ರಾಮದ ದಲಿತರು ಸಭೆ ಮಾಡಿ, ಸಮುದಾಯ ಭವನ ಖಾಲಿ ಮಾಡಿಸಿದರೆ ನಮಗೂ ಸಭೆ ಸಮಾರಂಭ ನಡೆಸಲು ಅನುಕೂಲವಾಗುತ್ತದೆ ಎಂದು ತೀರ್ಮಾನಿಸಿ, ಅದನ್ನು ಊರಿನ ಹಿರಿಯರಿಗೆ ತಿಳಿಸಿದ್ದರು. ಇದು ಜಮೀನ್ದಾರನಿಗೆ ತಿಳಿದು ದಲಿತ ಯುವಕರ ಮೇಲೆ ಹಲ್ಲೆ ನಡೆಯಿತು. ಈ ಸಮುದಾಯಕ್ಕೆ ಸೇರಿದ ಕೆಲವರು ಭತ್ತ ಕಳವು ಮಾಡಿದ್ದಾರೆ ಎಂಬ ಆರೋಪವೂ ನಮ್ಮ ಮೇಲೆ ಬಂದಿದ್ದರಿಂದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆಯಿತು' ಎಂದು ನೆನಪಿಸಿಕೊಳ್ಳುತ್ತಾರೆ ಗ್ರಾಮದ ದಲಿತ ಮುಖಂಡ ಮೋಹನ ದೊಡ್ಡಮನಿ. ಕೊನೆಗೆ, ಆಗಿನ ಜಿಲ್ಲಾಧಿಕಾರಿ ಗ್ರಾಮಕ್ಕೆ ಭೇಟಿ ನೀಡಿ ಸಮುದಾಯ ಭವನ ಖಾಲಿ ಮಾಡಿಸಿಕೊಟ್ಟಿದ್ದರು. 2003ರಲ್ಲಿ ನಡೆದ ಈ ಘರ್ಷಣೆ ಗ್ರಾಮದ ದಲಿತರು ಮತ್ತು ಇತರರ ನಡುವೆ ಕಂದಕವನ್ನು ಸೃಷ್ಟಿಸಿತ್ತು. ಮುಂದೆ ಅದು ಮತ್ತಷ್ಟು ಸಂಘರ್ಷಕ್ಕೆ ಕಾರಣವಾಯಿತು.

ದಲಿತರಿಗೆ ಗ್ರಾಮದ ಹೋಟೆಲ್‌ಗಳಲ್ಲಿ ಪ್ರವೇಶವಿರಲಿಲ್ಲ. ಹೋಟೆಲ್‌ಗಳಲ್ಲಿ ಪ್ರತ್ಯೇಕ ಲೋಟ, ಅಂಗಡಿಗಳಲ್ಲಿ ಕ್ಷೌರ ನಿರಾಕರಣೆ, ದಿನಸಿ ಸಾಮಾನು ಕೊಡಲು ನಿರಾಕರಿಸಿದ ಘಟನೆಗಳು ಜರುಗಿದವು. ಈ ವೇಳೆ ಹಲವು ಸಂಘಟನೆಗಳು ಮಧ್ಯಪ್ರವೇಶಿಸಿ ಮಾತುಕತೆಯಿಂದ ಸಮಸ್ಯೆ ಪರಿಹರಿಸಿಕೊಳ್ಳುವಂತೆ ಬುದ್ಧಿ ಹೇಳಿದವು. ಅಧಿಕಾರಿಗಳ ದಂಡು ಗ್ರಾಮಕ್ಕೆ ಬಂದು ಶಾಂತಿ ಸಭೆ ನಡೆಸಿ ಸಂಧಾನ ಮಾಡಿ ದಲಿತರಿಗೆ ಹೋಟೆಲ್, ಕ್ಷೌರದಂಗಡಿಗಳಲ್ಲಿ ಅವಕಾಶ ಕಲ್ಪಿಸಿತು. ಆಗ ಸರ್ಕಾರದ ವತಿಯಿಂದಲೇ ಗ್ರಾಮದಲ್ಲಿ ಸಾರ್ವಜನಿಕ ಕ್ಷೌರದಂಗಡಿ ಆರಂಭಿಸಲಾಯಿತು. ಅದು ಈಗ ಅನಾಥ ಸ್ಥಿತಿಯಲ್ಲಿದೆ.

ಹೀಗೆ, 2003ರಿಂದ ಗ್ರಾಮದಲ್ಲಿ ದಲಿತರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆದುಕೊಂಡು ಬಂದಿವೆ. ಅವುಗಳ ಪೈಕಿ ದಲಿತರನ್ನು ತೀವ್ರವಾಗಿ ಕಲಕಿದ್ದು ವೀರೇಶಪ್ಪ ಅವರ ಸಾವಿನ ಪ್ರಕರಣ. 2014ರಲ್ಲಿ ದಲಿತರ ಗುಡಿಸಲುಗಳಿಗೆ ಬೆಂಕಿ ಇಟ್ಟ ಪ್ರಕರಣಕ್ಕೆ ಸಂಬಂಧಿಸಿ ದಲಿತ ಸಮುದಾಯದ ವೀರೇಶಪ್ಪ ಪಂಚನಾಮೆ ಸಾಕ್ಷಿದಾರರಾಗಿದ್ದರು; ಒಂದು ಬಾರಿ ನ್ಯಾಯಾಲಯದಲ್ಲಿ ಸಾಕ್ಷಿಯನ್ನೂ ಹೇಳಿದ್ದರು. ಕೃಷಿ ಕೂಲಿಕಾರರ ಸಂಘದ ಮುಖಂಡರೂ ಆಗಿದ್ದ ವೀರೇಶಪ್ಪ 2015ರಲ್ಲಿ ಕೊಪ್ಪಳದಲ್ಲಿ ರೈಲ್ವೆ ಹಳಿಯ ಬಳಿ ಶವವಾಗಿ ಪತ್ತೆಯಾಗಿದ್ದರು. ಇದು ದ್ವೇಷದಿಂದ ನಡೆದ ಕೊಲೆ ಎಂದು ಆರೋಪಿಸಿ ಹಲವು ಸಂಘಟನೆಗಳು ಪ್ರತಿಭಟಿಸಿದ್ದವು. ಈ ಘಟನೆ ನಂತರ ಗ್ರಾಮದಲ್ಲಿ ದಲಿತರು ಮತ್ತು ಇತರರ ನಡುವಿನ ಸಂಘರ್ಷ ತಾರಕಕ್ಕೇರಿತು.

ದಲಿತರ ಕೇರಿಯಲ್ಲಿ ಮನೆಗಳಿಗೆ ಬೆಂಕಿ ಹಚ್ಚಿದ ಘಟನೆ ಬಳಿಕ ಎರಡು ವರ್ಷಗಳ ತನಕ ದಲಿತರು ಮತ್ತು ಇತರರ ನಡುವೆ ಮಾತುಕತೆ ಇರಲಿಲ್ಲ. ಒಂದು ಓಣಿಯ ಅಂತರವಷ್ಟೇ ಇದ್ದರೂ ಯಾರಿಗೆ ಯಾರೂ ಮುಖಕ್ಕೆ ಮುಖ ಕೊಟ್ಟು ನೋಡದಂಥ ಸ್ಥಿತಿಯಿತ್ತು. ವರ್ಷಗಳು ಉರುಳಿದಂತೆ ವಾತಾವರಣ ತಿಳಿಯಾಗುತ್ತ ಬಂದಿತ್ತು. ಎಂಟು ವರ್ಷಗಳಲ್ಲಿ ಗ್ರಾಮದ ಎಲ್ಲ ಸಮುದಾಯಗಳ ಜನ ಒಟ್ಟಿಗೆ ಕೆಲಸ ಮಾಡಿದ್ದಾರೆ; ಗ್ರಾಮದಲ್ಲಿ ಜಾತಿ ಸಂಘರ್ಷ, ದಲಿತರ ಮೇಲಿನ ದೌರ್ಜನ್ಯಗಳು ಕಡಿಮೆಯಾಗಿದ್ದವು.

2003ರಿಂದ 2016ರವರೆಗೆ ನಡೆದ ಸಂಘರ್ಷಗಳನ್ನು ಮರೆತಿದ್ದ ಗ್ರಾಮದ ಜನ, ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಭತ್ತದ ಕೃಷಿಯನ್ನೇ ನೆಚ್ಚಿಕೊಂಡಿರುವ ಈ ಗ್ರಾಮದ ಪ್ರಬಲ ಜಾತಿಗಳ ಜನರ ಮನೆ, ಹೊಲಗಳಿಗೆ ಹೋಗಿ ದಲಿತರು ದುಡಿಯತೊಡಗಿದ್ದರು. ಕೆಲವು ತಿಂಗಳ ಹಿಂದೆ ದಲಿತರ ಕೇರಿಯಲ್ಲಿರುವ ದುರ್ಗಮ್ಮ ದೇವಿ ಜಾತ್ರೆಯನ್ನು ಎಲ್ಲರೂ ಸೇರಿ ಸಂಭ್ರಮದಿಂದ ಆಚರಿಸಿದ್ದರು. ಆಗ ನ್ಯಾಯಾಲಯದಲ್ಲಿರುವ ಪ್ರಕರಣದ ಬಗ್ಗೆ ಹಲವು ಬಾರಿ ಚರ್ಚೆ ನಡೆದಿತ್ತು; ಕೆಲ ಆರೋಪಿಗಳು ಮಾತುಕತೆ ಮೂಲಕ ಪರಿಹರಿಸಿಕೊಳ್ಳೋಣ ಎಂದರೆ, ಇನ್ನು ಕೆಲವರು ನ್ಯಾಯಾಲಯದಲ್ಲಿಯೇ ಇತ್ಯರ್ಥವಾಗಲಿ ಬಿಡಿ ಎಂದಿದ್ದರು. ಇಂಥ ಸಂದರ್ಭದಲ್ಲಿಯೇ ನ್ಯಾಯಾಲಯದ ಆದೇಶ ಬಂದಿದೆ. ಜೀವಾವಧಿ ಶಿಕ್ಷೆಗೊಳಗಾದವರಲ್ಲಿ ಈಡಿಗರು, ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜತೆಗೆ ಮುಸ್ಲಿಮರು, ಮಡಿವಾಳರು, ಕಬ್ಬೇರರು, ವಿಶ್ವಕರ್ಮ, ಲಂಬಾಣಿ ಸಮುದಾಯದವರೂ ಇದ್ದಾರೆ.

ಈಗ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಎರಡೂ ಗುಂಪುಗಳ ಜನರಲ್ಲಿಯೂ ಆತಂಕದ ಛಾಯೆ ಮನೆಮಾಡಿದೆ. ತಮ್ಮ ಮೇಲೆ ಆದ ದೌರ್ಜನ್ಯಕ್ಕೆ ನ್ಯಾಯಾಲಯದಲ್ಲಿ ಜಯ ದೊರೆತರೂ ಗ್ರಾಮದಲ್ಲಿ ಇದು ಮತ್ತಷ್ಟು ಸಂಘರ್ಷಕ್ಕೆ ಕಾರಣವಾಗಬಹುದೇನೋ ಎನ್ನುವ ಆತಂಕ ದಲಿತ ಕೇರಿಯ ಜನರನ್ನು ಕಾಡುತ್ತಿದೆ. ಇದೇ ಕಾರಣಕ್ಕೋ ಏನೋ, ಘಟನೆಯ ಬಗ್ಗೆ ಆಗಲಿ, ನ್ಯಾಯಾಲಯದ ಆದೇಶದ ಬಗ್ಗೆ ಆಗಲಿ ಗ್ರಾಮದ ದಲಿತರು ಒಂದು ಮಾತೂ ಆಡಲು ಸಿದ್ಧರಿಲ್ಲ. ಮುಂಜಾಗ್ರತಾ ಕ್ರಮವಾಗಿ ದಿನದ 24 ತಾಸು ಪೊಲೀಸರು ಊರ ಜನರ ಮೇಲೆ ಕಣ್ಗಾವಲು ಇರಿಸಿದ್ದಾರೆ.

ಜೀವಕಳೆ ಕಳೆದುಕೊಂಡ ಗ್ರಾಮ

ಮರಕುಂಬಿ ಗ್ರಾಮದಲ್ಲಿ ಅಂದಾಜು 1,500 ಜನಸಂಖ್ಯೆಯಿದ್ದು, ಈಡಿಗ, ಮುಸ್ಲಿಂ, ರಡ್ಡಿ ಹಾಗೂ ಭೋವಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗ್ರಾಮದ ಜನರಲ್ಲಿ ಈಗ ಮೊದಲಿನ ಜೀವಕಳೆಯಿಲ್ಲ. ಘಟನೆ ಬಗ್ಗೆ ವಿಚಾರಿಸಿದರೆ, 'ಬದುಕಿನಲ್ಲಿ ಹಿಂಡಿ ಹಿಪ್ಪೆಯಾಗಿದ್ದೇವೆ. ಇದೊಂದು ವಿಷಯ ಬಿಟ್ಟು ಬೇರೆ ಮಾತನಾಡಿ' ಎಂದು ಕೈ ಮುಗಿಯುತ್ತಾರೆ.

ಗ್ರಾಮದ ಸರ್ಕಾರಿ ಶಾಲೆಯ ಎದುರು ಇರುವ ಮನೆಯೊಂದರ ಐದು ಜನ ಜೈಲು ಸೇರಿದ್ದಾರೆ. ಬದುಕಿನ ಇಳಿಸಂಜೆಯಲ್ಲಿರುವ ಅದೇ ಮನೆಯ ವೃದ್ಧರೊಬ್ಬರು ಮನೆಯ ಮುಂದಿನ ಮರಕ್ಕೆ ಒರಗಿಕೊಂಡು, ಜೈಲಿನಲ್ಲಿರುವವರ ಬರುವಿಕೆಗಾಗಿ ಆಸೆಗಣ್ಣಿನಿಂದ ಎದುರು ನೋಡುತ್ತಿದ್ದಾರೆ.

ಭತ್ತದ ಕೃಷಿಯೇ ಈ ಗ್ರಾಮದ ಜನರ ಬದುಕಿಗೆ ಆಧಾರವಾಗಿದ್ದು, ಈಗಾಗಲೇ ಫಸಲು ಕಟಾವಿನ ಹಂತಕ್ಕೆ ಬಂದಿದೆ. ಹೊಲದಲ್ಲಿ ಕೆಲಸ ಮಾಡಬೇಕಿದ್ದ ಮನೆಯ ಯಜಮಾನರು ಜೈಲು ಸೇರಿದ್ದಾರೆ. ನೂರಾರು ಕುರಿಗಳನ್ನು ಹೊಂದಿರುವ ಮನೆಯೊಂದರ ಮಾಲೀಕನೂ ಶಿಕ್ಷೆಗೆ ಒಳಗಾಗಿರುವ ಕಾರಣ ಅದರ ಜವಾಬ್ದಾರಿ ಮಗ ಹೊತ್ತಿದ್ದಾನೆ. ಗ್ರಾಮದಲ್ಲಿ ಗುಂಪು ಚೀಟಿ ಮಾಡಿ ವಾರಕ್ಕೆ ಇಂತಿಷ್ಟು ಸಾಲದ ಕಂತು ಕಟ್ಟುವುದು ಹೇಗೆ ಎಂದು ಮಹಿಳೆಯರು ಕಣ್ಣೀರು ಹಾಕುತ್ತಿರುವ ಚಿತ್ರಣ ಸಾಮಾನ್ಯವಾಗಿದೆ.

ಬಳ್ಳಾರಿ ಜೈಲಿನಲ್ಲಿ...

ಕನಕಗಿರಿ ವಿಧಾನಸಭಾ ಕ್ಷೇತ್ರ (ಪರಿಶಿಷ್ಟ ಜಾತಿ ಮೀಸಲು) ವ್ಯಾಪ್ತಿಯಲ್ಲಿರುವ ಮರಕುಂಬಿ ಗ್ರಾಮ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿ ಹೊಂದಿದೆ. ಪೊಲೀಸರು ಪ್ರಕರಣದಲ್ಲಿ ಒಟ್ಟು 117 ಮಂದಿ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು. ಇದರಲ್ಲಿ 98 ಮಂದಿಗೆ ಜೀವಾವಧಿ, ಮೂವರಿಗೆ ತಲಾ ಐದು ವರ್ಷ ಶಿಕ್ಷೆ ವಿಧಿಸಲಾಗಿದೆ. ವಿಚಾರಣೆ ಹಂತದಲ್ಲಿಯೇ 11 ಮಂದಿ ಮೃತಪಟ್ಟಿದ್ದಾರೆ. ಇಬ್ಬರು ಬಾಲಕರೂ ಪ್ರಕರಣದಲ್ಲಿದ್ದರು. ಇನ್ನುಳಿದವರ ಹೆಸರು ಪುನರಾವರ್ತನೆಯಾಗಿದ್ದವು.

ಇದರಲ್ಲಿ ಪ್ರಬಲ ಜಾತಿಗೆ ಸೇರಿದ 98 ಮಂದಿಗೆ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿ ಜೀವಾವಧಿ ಶಿಕ್ಷೆ ಹಾಗೂ ತಲಾ ₹5,000 ದಂಡ ವಿಧಿಸಲಾಗಿದೆ. ಇನ್ನುಳಿದ ಮೂವರು ಎಸ್‌ಸಿ, ಎಸ್‌ಟಿ ಸಮುದಾಯದವರು. ಹಾಗಾಗಿ, ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅನ್ವಯವಾಗದು. ಇವರಿಗೆ ಐದು ವರ್ಷ ಜೈಲು ಹಾಗೂ ತಲಾ ₹2000 ದಂಡ ಹಾಕಲಾಗಿದೆ. ಆದೇಶ ಪ್ರಕಟವಾದ ಮರುದಿನವೇ ಒಬ್ಬರು ಮೃತಪಟ್ಟಿದ್ದಾರೆ. 100 ಜನ ಬಳ್ಳಾರಿ ಕಾರಾಗೃಹದಲ್ಲಿದ್ದಾರೆ.



ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಮರಕುಂಬಿ ಗ್ರಾಮದ ನೋಟ –ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ಮರಕುಂಬಿ ಗ್ರಾಮದಲ್ಲಿ ಸರ್ಕಾರವೇ ತೆರೆದಿದ್ದ ಸಾರ್ವಜನಿಕ ಕ್ಷೌರದಂಗಡಿ ಪಾಳು ಬಿದ್ದಿರುವುದು

ಮರಕುಂಬಿ ಗ್ರಾಮದಲ್ಲಿ ನಡೆದ ದೌರ್ಜನ್ಯ ಮತ್ತು ಹಿಂಸಾಚಾರ ಪ್ರಕರಣದಲ್ಲಿ ದಲಿತರಿಗೆ ಅನ್ಯಾಯವಾಗಿತ್ತು. ಹತ್ತು ವರ್ಷ ನಿರಂತರವಾಗಿ ಹೋರಾಟ ಮಾಡಿದ್ದರಿಂದ ಈಗ ನ್ಯಾಯ ಸಿಕ್ಕಿದೆ. ಅನೇಕ ಜನ ಧೈರ್ಯ ಮಾಡಿ ಸಾಕ್ಷ್ಯ ಹೇಳಿದ್ದರಿಂದ ಇದು ಸಾಧ್ಯವಾಯಿತು

ಅಪರ್ಣಾ ಬಂಡಿ
ಪಬ್ಲಿಕ್ ಪ್ರಾಸಿಕ್ಯೂಟರ್, ಕೊಪ್ಪಳ

ಕೋರ್ಟ್ ಮುಂದೆ ಎಲ್ಲರೂ ಸಮಾನರು ಎನ್ನುವ ಮಹತ್ವವನ್ನು ಈ ಪ್ರಕರಣ ತೋರಿಸಿಕೊಟ್ಟಿದೆ. ದೂರುದಾರರು ಮಾಡಿದ ಆರೋಪಗಳು ಸತ್ಯ ಇವೆ ಎನ್ನುವುದು ಸಾಕ್ಷ್ಯಗಳಿಂದ ಸಾಬೀತಾಗಿದೆ. ನ್ಯಾಯಾಲಯದ ಆದೇಶದ ವಿರುದ್ಧ ಹೈಕೋರ್ಟ್ ಮೊರೆ ಹೋಗಲು ಅವಕಾಶವಂತೂ ಇದ್ದೇ ಇದೆ


ಪೀರಾ ಹುಸೇನ್ ಹೊಸಳ್ಳಿ
ಹಿರಿಯ ವಕೀಲರು, ಕೊಪ್ಪಳ

ಕಂಬಾಲಪಲ್ಲಿ, ಬದನವಾಳು ಪ್ರಕರಣಗಳ ನೆನಪು

ಕರ್ನಾಟಕದಲ್ಲಿ ಜಾತಿ ದೌರ್ಜನ್ಯ, ಹಿಂಸೆ ಎಂದರೆ, ತಕ್ಷಣ ನೆನಪಾಗುವುದು ಕಂಬಾಲಪಲ್ಲಿ ಮತ್ತು ಬದನವಾಳು ಪ್ರಕರಣಗಳು. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಪ್ರವೇಶಕ್ಕೆ ಸಂಬಂಧಿಸಿದಂತೆ 1993ರ ಮಾರ್ಚ್ 25ರಂದು ಲಿಂಗಾಯತ ಹಾಗೂ ದಲಿತ ಸಮುದಾಯದ ಮುಖಂಡರ ನಡುವೆ ಸಂಘರ್ಷ ಉಂಟಾಗಿತ್ತು. ಘಟನೆಯಲ್ಲಿ ಮೂವರು ದಲಿತ ಯುವಕರು ಮೃತಪಟ್ಟಿದ್ದರು. ಘಟನೆ ನಡೆದ 17 ವರ್ಷಗಳ ನಂತರ ಮೈಸೂರಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 20 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಅದನ್ನು ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ 2014ರಲ್ಲಿ ಹೈಕೋರ್ಟ್ 7 ಮಂದಿಯನ್ನು ಖುಲಾಸೆಗೊಳಿಸಿ, 13 ಮಂದಿಯ ಜೀವಾವಧಿ ಶಿಕ್ಷೆಯನ್ನು ಕಾಯಂಗೊಳಿಸಿತ್ತು.

ಕಂಬಾಲಪಲ್ಲಿ ನರಮೇಧ ನಡೆದಿದ್ದು 2000ದ ಮಾರ್ಚ್ 11ರಂದು. ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯಲ್ಲಿ ಪ್ರಬಲ ರೆಡ್ಡಿ ಜಾತಿಯ ಗುಂಪೊಂದು ದಲಿತರ ಮನೆಗಳ ಮೇಲೆ ದಾಳಿ ಮಾಡಿತ್ತು; ಏಳು ಮಂದಿ ದಲಿತರನ್ನು ಮನೆಯಲ್ಲಿ ಕೂಡಿಹಾಕಿ, ಚಿಮಣಿಗಳಿಂದ ಸೀಮೆಎಣ್ಣೆ ಸುರಿದು ಸಜೀವವಾಗಿ ಸುಟ್ಟು ಹಾಕಲಾಗಿತ್ತು. ಘಟನೆಯ ಸಂಬಂಧ ಕೆಂಚಾರ್ಲಹಳ್ಳಿ ಠಾಣೆಯ ಪೊಲೀಸರು 32 ಮಂದಿ ಆಪಾದಿತರ ಮೇಲೆ ಆರೋಪಪಟ್ಟಿ ಸಿದ್ಧಪಡಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಕೋಲಾರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 2006ರಲ್ಲಿ ಸಾಕ್ಷ್ಯ ಕೊರತೆಯಿಂದ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿತು. ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿ, 2014ರಲ್ಲಿ ಅಲ್ಲಿಯೂ ಸಾಕ್ಷ್ಯಗಳ ಕೊರತೆಯಿಂದ ಆರೋಪಿಗಳು ಖುಲಾಸೆಯಾದರು. ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯ ಮತ್ತು ಹೈಕೋರ್ಟ್‌ನಿಂದ ನ್ಯಾಯ ಸಿಕ್ಕಿಲ್ಲವೆಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಸಿನಿ ಬಿಟ್ಸ್



ನ.8ರಂದು 'U 235' ತೆರೆಗೆ

ದೇವರಾಜ್ ಮುಖ್ಯಭೂಮಿಕೆಯಲ್ಲಿರುವ 'U 235' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಚನ್ನೇಗೌಡ ಸಿ.ಎನ್ ನಿರ್ದೇಶನದ ಚಿತ್ರ ನವೆಂಬರ್ 8ರಂದು ತೆರೆಗೆ ಬರಲಿದೆ.

'ಎಂಬಿಎ ಪದವಿಧರನಾಗಿರುವ ನನಗೆ ಸಿನಿಮಾ ನಿರ್ದೇಶನ ಕನಸು. ಕೆಲವು ಸಿನಿಮಾಗಳ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿ ಅನುಭವ ಪಡೆದಿರುವೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿನ ಕೋರ್ಟ್ ರೂಮ್ ಸನ್ನಿವೇಶಗಳು ಹೆಚ್ಚಿವೆ. ಯುರೇನಿಯಂ ಅನ್ವೇಷಣೆ ಸುತ್ತ ಕಥೆ ಸಾಗುತ್ತದೆ' ಎಂದರು ನಿರ್ದೇಶಕರು.

ಗೀತಾ ಕ್ರಿಯೇಷನ್ಸ್ ಲಾಂಛನದಲ್ಲಿ ಗೀತಾ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಚಿತ್ರದ ನಾಯಕ ವಿವೇಕ್‌ಗೆ ಹಿಮ ಜೋಡಿಯಾಗಿದ್ದಾರೆ. ಪೂಜಾ ದುರ್ಗಣ್ಣ, ದಿನೇಶ್ ಮಂಗಳೂರು, ರಾಜೇಶ್ ನಟರಂಗ ಮುಂತಾದವರು ತಾರಾಬಳಗದಲ್ಲಿದ್ದಾರೆ. ಮಂಜುನಾಥ್ ಛಾಯಾಚಿತ್ರಗ್ರಹಣ ಹಾಗೂ ಜಗದೀಶ್ ಸಂಕಲನವಿದೆ. ❖

'ಚೌಕಿದಾರ್'ಗೆ ಪ್ರವೇಶಿಸಿದ ಶ್ವೇತಾ

'ಚೈತ್ರದ ಪ್ರೇಮಾಂಜಲಿ', 'ಕರ್ಪೂರದ ಗೊಂಬೆ', 'ಲಕ್ಷ್ಮಿ ಮಹಾಲಕ್ಷ್ಮಿ' ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದ ನಟಿ ಶ್ವೇತಾ ಇಪ್ಪತ್ತು ವರ್ಷಗಳ ನಂತರ ಮತ್ತೆ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಟ್ಟಿದ್ದಾರೆ. ನಟ ಪೃಥ್ವಿ ಅಂಬಾರ್ ನಟನೆಯ 'ಚೌಕಿದಾರ್' ಸಿನಿಮಾದಲ್ಲಿ ಶ್ವೇತಾ ನಟಿಸುತ್ತಿದ್ದಾರೆ. ತಮಿಳು ಮತ್ತು ಮಲಯಾಳ ಚಿತ್ರರಂಗದಲ್ಲಿ ವಿನೋದಿನಿ ಎಂದೂ ಖ್ಯಾತಿ ಪಡೆದಿರುವ ಶ್ವೇತಾ 'ಲಕ್ಷ್ಮಿ ನಿವಾಸ' ಎಂಬ ಧಾರಾವಾಹಿ ಮೂಲಕ ನಟನೆಗೆ ಮರಳಿದ್ದರು. ಸುಮಾರು 75 ಚಲನಚಿತ್ರಗಳಲ್ಲಿ ನಟಿಸಿರುವ ಶ್ವೇತಾ 2003ರಲ್ಲಿ ತೆರೆಕಂಡ 'ಕುಟುಂಬ' ಸಿನಿಮಾ ಬಳಿಕ ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿರಲಿಲ್ಲ. ಲವ್ ಸ್ಟೋರಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಪೃಥ್ವಿ ಅಂಬಾರ್ 'ಚೌಕಿದಾರ್' ಮೂಲಕ ರಗಡ್ ಅವತಾರ ತಾಳಿದ್ದಾರೆ. ಚಂದ್ರಶೇಖರ್ ಬಂಡಿಯಪ್ಪ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಧನ್ಯರಾಮ್ ಕುಮಾರ್ ನಾಯಕಿಯಾಗಿ ನಟಿಸಿದ್ದು, ಸಾಯಿ ಕುಮಾರ್ ವಿಶೇಷ ಪಾತ್ರದಲ್ಲಿದ್ದಾರೆ.

ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ನಿರ್ದೇಶನ, ಸಿದ್ದು ಕಂಚನಹಳ್ಳಿ ಛಾಯಾಚಿತ್ರಗ್ರಹಣ, ಪ್ರಮೋದ್ ಮರವಂತೆ, ಸಂತೋಷ್ ನಾಯಕ್, ವಿ.ನಾಗೇಂದ್ರ ಪ್ರಸಾದ್ ಗೀತರಚನೆಯಿದೆ. ಬಹು ಭಾಷೆಯಲ್ಲಿ ಈ ಸಿನಿಮಾ ಮೂಡಿಬರುತ್ತಿದ್ದು, ಚಂದ್ರಶೇಖರ್ ತಮ್ಮ ವಿ.ಎಸ್. ಎಂಟರ್‌ಟೈನ್ಮೆಂಟ್ ಮೂಲಕ ನಿರ್ಮಾಣ ಮಾಡುತ್ತಿದ್ದಾರೆ. ❖



ಶ್ವೇತಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮಾತು ನೋವು ತರಬಾರದು

ನುಡಿ ಬೆಳಗು 56



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಮಾತು ಇನ್ನೊಬ್ಬರಿಗೆ ನೋವು ತರಬಾರದು. ನಾವು ಒಬ್ಬರಿಗೆ ಚುಚ್ಚು ಮಾತನ್ನು ಆಡಿರ್ತೀವಿ. ನಿಂದನೆ ನುಡಿಯನ್ನಾಡಿರ್ತೀವಿ. ಒಬ್ಬರ ಬಗ್ಗೆ ಚಾಡಿ ಹೇಳಿರ್ತೀವಿ. ಮನುಷ್ಯ ಒಂದನ್ನು ತಿಳಕೋಬೇಕು, ಯಾವ ಪಶು ಪಕ್ಷಿ ಪ್ರಾಣಿಗಳಿಗೆ ಇರಲಾರದ ಮಾತಿನ ಶಕ್ತಿಯನ್ನು ನಿಸರ್ಗ ನಮಗೆ ಕರುಣಿಸಿದೆ. ನೋಡಿ, ಕಾಗೆ ಐತಲ್ಲ, ಅದಕ್ಕೆ 'ಕ' ಎಂಬ ಒಂದೇ ಅಕ್ಷರ ಗೊತ್ತೈತಿ. ಒಂದೇ ಅಕ್ಷರ ಗೊತ್ತಿರುವ ಕಾಗೆ ಕಾ ಕಾ ಎಂದೇ ತನ್ನ ಬಳಗವನ್ನೆಲ್ಲಾ ಕರೆಯುತ್ತದೆ. ಕೋಗಿಲೆಗೆ ಕೂ ಕೂ ಅಷ್ಟೇ ಗೊತ್ತು. ಆದರೂ ಅದಕ್ಕೆ ಎಂತಹ ಮಾನ್ಯತೆ. ನಮ್ಮಲ್ಲಿ ಯಾರಾದರೂ ಚೆನ್ನಾಗಿ ಹಾಡಿದರೆ ಗಾನ ಕೋಗಿಲೆ ಅಂತಾರ. ನಮ್ಮ ಮನೆಯಲ್ಲಿ ಸಣ್ಣ ಕರು ಐತಿ. ಆ ಕರು ಅಂಬಾ ಎಂದು ಕರೆದರೆ ತಾಯಿ ಹಸು ಹಗ್ಗ ಹರಕೊಂಡಾದರೂ ಬರತೈತಿ. ಕಾಗೆಗೆ ಕ, ಕೋಗಿಲೆಗೆ ಕೂ, ಕರುವಿಗೆ ಅಂಬಾ ಅಷ್ಟೇ ಐತಿ. ಆದರೆ ನಮಗೆ 49 ಮೂಲಾಕ್ಷರ ಇದ್ದರೂ ನಾವು ದೇಶಕ್ಕೇ ಮೂಲಾಗೀವಿ. ಬರೇ ಬೆಂಕಿ ಹಚ್ಚುವ ಕೆಲಸ ಮಾಡ್ತೀವಿ. ನಮ್ಮ ಬಾಯಿಯಿಂದ ಚಂದ ಮಾತು ಬರಬೇಕು.

ಗಾಂಧೀಜಿ ಎರಡೇ ಎರಡು ಶಬ್ದ ಹೇಳಿದರು. ಕ್ವಿಟ್ ಇಂಡಿಯಾ ಅಥವಾ ಚಲೋಜಾವ್. ಅಂದರ ಬ್ರಿಟಿಷ್ ಸಾಮ್ರಾಜ್ಯ ಭಾರತದಿಂದ ಓಡಿರಬೇಕಾದರೆ ಗಾಂಧಿಯ ಎರಡು ಮಾತಿನಲ್ಲಿ ಎಂತಹ ಶಕ್ತಿ ಇತ್ತು!

ಒಬ್ಬ ಹೆಣ್ಣುಮಗಳು ಇದ್ದಳು. ಆಕಿ ಗಂಡ ಊಟಕ್ಕೆ ಕುಳಿತಿದ್ದ. ಮಜ್ಜಿಗೆ ನೀಡು ಅಂದ. ಆದರೆ, ಮನೆಯಲ್ಲಿ ಮಜ್ಜಿಗೆ ಇರಲಿಲ್ಲ. ಆಕಿ, ಪಕ್ಕದ ಮನಿಗೆ ಹೋಗಿ ಮಜ್ಜಿಗೆ ಕೇಳಿದಳು. ಪಕ್ಕದ ಮನೆಯವಳು 'ಹಾಂಗೇ ಕೊಡೋದಿಲ್ಲ. ನೀನು ರಾಮಾಯಣ ಹೇಳು' ಅಂದಳು. ಅದಕ್ಕೆ ಇವಳು 'ಅಯ್ಯೋ ರಾಮಾಯಣ ಹೇಳಲು ಒಂದು ವರ್ಷ ಬೇಕಾಗುತ್ತದೆ. ಈಗ ನನ್ನ ಗಂಡ ಊಟಕ್ಕೆ ಕುಳಿತಿದ್ದಾನೆ' ಎಂದಳು. ಅದಕ್ಕೆ ಪಕ್ಕದ ಮನೆಯವಳು ಒಪ್ಪಲಿಲ್ಲ. ರಾಮಾಯಣ ಕತೆ ಹೇಳಿದರೆ ಮಾತ್ರ ಮಜ್ಜಿಗೆ ಕೊಡ್ತೀನಿ ಅಂದಳು. ಆಗ ಇವಳು 'ದಶರಥನ ಕಂದ, ರಾವಣನ ಕೊಂದ, ಸೀತೆಯ ತಂದ' ಎಂದು ಹೇಳಿ 'ರಾಮಾಯಣ ಮುಗೀತು, ಮಜ್ಜಿಗೆ ಕೊಡು' ಎಂದಳು. ಅಂದರ ರಾಮಾಯಣವನ್ನೂ ಹೇಳಬೇಕು, ಗಂಡನ ಊಟವೂ ಕೆಟ್ಟಿರಬಾರದು ಹಾಗೆ ಹೇಳಿದಳು. ಮಾತನ್ನು ಚಲೋದಕ್ಕೆ ಬಳಸಬೇಕು.

ಸಾಕ್ರೆಟಿಸ್ ಹತ್ತಿರ ಒಬ್ಬ ಬಂದು, ಇನ್ನೊಬ್ಬನ ಬಗ್ಗೆ ಟೀಕೆ ಮಾಡಲು ಹತ್ತಿದ. ತಕ್ಷಣ ಅದನ್ನು ತಡೆದ ಸಾಕ್ರೆಟಿಸ್, 'ಅವನ ಬಗ್ಗೆ ನಿಂದನೆಯ ಮಾತುಗಳನ್ನು ಹೇಳುತ್ತಿದ್ದೀಯಲ್ಲ. ಅದರಿಂದ ನಿನಗೇನಾದರೂ ಲಾಭ ಇದೆಯಾ' ಎಂದು ಕೇಳಿದ. ಅದಕ್ಕೆ ಅವ 'ಇಲ್ಲ' ಎಂದ. 'ನನಗೇನಾದರೂ ಲಾಭ ಇದೆಯಾ' ಎಂದು ಕೇಳಿದ. 'ಇಲ್ಲ' ಎಂದ. 'ನೀನು ಯಾರ ಬಗ್ಗೆ ನಿಂದನೆಯ ಮಾತನ್ನು ಆಡುತ್ತಿದ್ದೀಯಲ್ಲ ಅವನಿಗಾದರೂ ಏನಾದರೂ ಪ್ರಯೋಜನ ಇದೆಯಾ' ಎಂದು ಕೇಳಿದ. 'ಇಲ್ಲ ಅವನಿಗೂ ಪ್ರಯೋಜನ ಇಲ್ಲ' ಎಂದ. 'ನಿನಗೂ ಪ್ರಯೋಜನ ಇಲ್ಲ, ನನಗೂ ಪ್ರಯೋಜನ ಇಲ್ಲ. ಅವನಿಗೂ ಪ್ರಯೋಜನ ಇಲ್ಲ. ಅಂದ ಮೇಲೆ ಅಂತಹ ಮಾತುಗಳನ್ನು ಆಡಿ ನಿನ್ನ ಬಾಯಿ, ನನ್ನ ಕಿವಿ ಯಾಕೆ ಹೊಲಸು ಮಾಡುತ್ತಿ ನಡೀ ಅತ್ಲಾಗೆ' ಎಂದು ಕಳಿಸಿದ.

ಮಾತು ನೋವು ತರಬಾರದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಅಕ್ಟೋಬರ್ 31, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣ ಚತುರ್ದಶಿ ಗಂ. 15-53 ನಕ್ಷತ್ರ: ಚಿತ್ತಾ ಗಂ. 24-45 ಯೋಗ: ವಿಷ್ಕಂಭ ಗಂ. 09-51 ಕರಣ: ಶಕುನಿ ಗಂ. 15-53, ತುಲಾ ಮಾಸದ 14 ನೇ ದಿನ, ಮಳೆನಕ್ಷತ್ರ: ಸ್ವಾತಿ 3.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-28 ಸೂರ್ಯಾಸ್ತ : 06-01
ಮುಸ್ಲಿಂ ದಿನಾಂಕ : 27 ರಬಿಯುಸ್ಸಾನಿ , ದಿನ ವಿಶೇಷ : ನರಕ ಚತುರ್ದಶಿ (ಪೂರ್ವರುಣೋದಯ), ಕಲಿ ಪೂಜಾ, ಲಕ್ಷ್ಮಿ ಪೂಜಾ, ದೀಪಾವಳಿ, ಅದೃಷ್ಟ ಸಂಖ್ಯೆ : 7, 4

ಮೇಷ: ಭೂ ಸಂಬಂಧಿತ ವ್ಯವಹಾರ ನಡೆಸುವವರಿಗೆ ಕಾರ್ಯಗಳು ಚುರುಕು ಗತಿಯಲ್ಲಿ ಸಾಗಲಿವೆ. ರಾಜಕಾರಣದಲ್ಲಿ ಹೆಚ್ಚಿನ ಸಮಯ ಕಳೆಯಬೇಕಾದ ಅನಿವಾರ್ಯತೆ ಉಂಟಾಗುವುದು. ಟ್ರಾವೆಲ್ ಏಜೆಂಟರಿಗೆ ಶುಭ ದಿನ.

ವೃಷಭ: ಅಪ್ಪ ಮಗನ ಮಧ್ಯದಲ್ಲಿರುವ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವುದರಿಂದ ನೆಮ್ಮದಿ ಮೂಡುವುದು. ಸಾಲದ ರೂಪದಲ್ಲಿ ಹಣವನ್ನು ನೀಡಬೇಡಿ. ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಯ್ಕೆಗೊಳ್ಳುವಿರಿ.

ಮಿಥುನ: ಹಿರಿಯರು ಮತ್ತು ಹಿತೈಷಿಗಳಿಂದ ಆಶೀರ್ವಾದ ಪಡೆಯುವುದು ಶುಭ ಸಮಾರಂಭಗಳಿಗೆ ನಾಂದಿಯಾಗುತ್ತದೆ. ಒದಗಿಬರುವ ಅವಕಾಶಗಳು ಮುಂದಿನ ಭವಿಷ್ಯಕ್ಕೆ ಅನುಕೂಲ.

ಕರ್ಕಾಟಕ: ಅಪರಾಧಿ ಸ್ಥಾನದಲ್ಲಿರುವ ನಿಮಗೆ ನಿರಪರಾಧಿ ಎನ್ನುವುದು ಸಾಬೀತಾಗಿ ನ್ಯಾಯಾಲಯದಲ್ಲಿ ಜಯ ಸಿಗುವುದು. ಯಶಸ್ಸಿನ ಹೊಸ ಮಾರ್ಗಗಳು ನಿಮಗಿಂದು ಅರಿವಾಗುತ್ತದೆ. ಬದುಕಿನಲ್ಲಿ ಸ್ಥಿರ ಭಾವ ಇರುವುದು.

ಸಿಂಹ: ದಾಂಪತ್ಯದಲ್ಲಿ ಮುಖಾಮುಖಿಯಾಗಿ ಎಲ್ಲಾ ವಿಚಾರಗಳನ್ನು ಹಂಚಿಕೊಳ್ಳುವುದು ಸಮಸ್ಯೆ ಬಾರದಂತೆ ಕಾಪಾಡುತ್ತದೆ. ವಿದ್ಯುತ್ ಇಲಾಖೆ ಸಿಬ್ಬಂದಿಗೆ ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ. ದೇವರಲ್ಲಿ ಶ್ರದ್ಧೆ ಹೆಚ್ಚುವುದು.

ಕನ್ಯಾ: ವ್ಯಾಪಾರದ ವಿಚಾರದಲ್ಲಿ ಕೈಗೊಂಡಿರುವ ಕಾರ್ಯಗಳನ್ನು ದೇವರ ಪ್ರಾರ್ಥನೆಯ ಮೂಲಕ ಮುಂದುವರಿಸಿರಿ. ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಮಾರ್ಗದರ್ಶನದ ಕೊರತೆ ಇದೆ.

ತುಲಾ: ಜನರನ್ನು ಆಕರ್ಷಿಸುವ ಕಲೆ ಹೊಂದಿರುವ ನಿಮಗೆ ವ್ಯವಹಾರ ಕಷ್ಟವಲ್ಲ. ದೇವಿ ಕೃಪಾಕಟಾಕ್ಷಕ್ಕೆ ಪಾತ್ರರಾದ ಕಾರಣದಿಂದ ಬರಬೇಕಿದ್ದ ಹಣ ಮೊತ್ತ ಕೈ ಸೇರುವುದು. ಅತಿಥಿಗಳ ಆಗಮನ ಸಂತಸ ತಂದೀತು.

ವೃಶ್ಚಿಕ: ಆಕಸ್ಮಿಕ ಪ್ರಯಾಣದಿಂದ ದಿನಚರಿಯ ಕಾರ್ಯಗಳು, ಅನಿವಾರ್ಯದ ಕೆಲಸಗಳೆಲ್ಲ ವಿಳಂಬವಾಗಲಿವೆ. ಕೈಗಾರಿಕೆ ಹಾಗೂ ವಾಣಿಜ್ಯ ಉದ್ಯಮದ ಸುಧಾರಣೆಗೆ ಸಾಕಷ್ಟು ಅವಕಾಶಗಳು ಒದಗಿ ಬರುವುವು.

ಧನು: ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ, ಸಾಂಸ್ಕೃತಿಕ ಕಲಾವಿದರಿಗೆ ವೃತ್ತಿಯಲ್ಲಿ ಬಡ್ತಿ ಅಥವಾ ಸನ್ಮಾನಗಳು ದೊರಕಲಿವೆ. ವಿವಾಹ ಸಂಬಂಧ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವುದು ಸರಿಯಲ್ಲ.

ಮಕರ: ವ್ಯವಹಾರಗಳನ್ನು ನೇರ ನುಡಿ ಹೊಂದಿದವರೊಂದಿಗೆ ಮಾತ್ರ ಮುಂದುವರಿಸಿಕೊಂಡು ಹೋಗುವ ತೀರ್ಮಾನ ಒಳ್ಳೆಯದು. ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು. ಅತಿಥಿ ಸತ್ಕಾರ ಕೈಗೊಳ್ಳಬಹುದು.

ಕುಂಭ: ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟರಿಗೆ ನಿರೀಕ್ಷೆಗೂ ಮೀರಿದ ಆದಾಯವಿದೆ. ನೂತನವಾಗಿ ಪರಿಚಯವಾದ ರಾಜಕೀಯ ವ್ಯಕ್ತಿಯೊಂದಿಗೆ ನಿಮ್ಮ ಸಂಬಂಧವು ಉತ್ತಮಗೊಳ್ಳುವುದು.


ಮೀನ: ಸದ್ಯದ ಪರಿಸ್ಥಿತಿಯಲ್ಲಿ ವಿಜಯ ನಿಮ್ಮದೇ ಆದ್ದರಿಂದ ನೂತನ ಚರ ಅಥವಾ ಸ್ಥಿರ ಆಸ್ತಿ ಸಂಪಾದಿಸುವ ಬಗ್ಗೆ ಆದಷ್ಟು ಪ್ರಯತ್ನವಿರಲಿ. ಮಿತ್ರರೊಡನೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಿರಿ.

ಪದಬಂಧ 5848

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3. ಸರಕುಗಳನ್ನು ಸಾಗಿಸುವುದು (3)
4. ಹೂಗಳಿಂದ ಭಟ್ಟಿಯಿಳಿಸಿ ತೆಗೆದ ಸುಗಂಧದ್ರವ್ಯ (3)
5. ರೋಮಾಂಚವನ್ನು ಹೀಗೂ ಹೇಳುವರು (3)
7. ಹೆಚ್ಚಳಕ್ಕೊಂದು ಪರ್ಯಾಯ ಪದ (3)
8. ಇದು ಕನ್ನಡದ ನ್ಯೂಸ್ ಪೇಪರ್! (7)
10. ತಮ್ಮ ಇಲ್ಲಿದ್ದಾನೆ (3)
12. ಒಳ್ಳೆಯ ಅಥವಾ ಕೆಟ್ಟ ನಾತ (3)
14. ತಲೆಯಲ್ಲಿರುವ ಅನ್ನದ ಪಾತ್ರೆ (3)
15. ತುಂಬಾ ಹದಗೆಟ್ಟ ಸ್ಥಿತಿ (3)

ಮೇಲಿಂದ ಕೆಳಕ್ಕೆ
1. ಸ್ವಂತ ಸ್ಥಳ (3)
2. ಗುರುತುಳ್ಳವನು ತೋರಿಸಿದ ನಖ (3)
3. ಕಟ್ಟಡ ಮುಂತಾದವುಗಳನ್ನು ಹತ್ತಲು ಮಾಡಿದ ಸಾಧನ (3)
4. ಮೈಯಲ್ಲಾ ಹಳದಿ ಬಣ್ಣವಾಗುವ ಒಂದು ರೋಗ (7)
6. ಎರಡನೆಯ ಹಿಂದೂ ಸಂವತ್ಸರ (3)
9. ಕೆಲವರು ಮಾಡುವ ಕಾರ್ಯ (3)
11. ಜನರಲ್ಲಿ ಜೋಪಾನ! (3)
12. ಮುಪ್ಪು ಹೀಗೆ ಬಂದಿದೆ (3)
13. ನರಳುತ್ತಿರುವವನ ಛಾಯೆ! (3)



5847ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಪಕ್ವಾನ್ನ 3.ಭವಿಷ್ಯ
5.ಕ್ಷೇತ್ರ 6.ಅಧಮ
7.ಮಹಾರಾಜ 8.ಸರೀಸೃಪ
10.ತವಂಬಜಾಂ
11.ಚಾಡಿಕೋರ 13.ತವರ
14.ಸ್ವರ 15.ಅಗಸೆ
17.ಗಭಸ್ತಿ

ಮೇಲಿಂದ ಕೆಳಕ್ಕೆ:
1.ಲಾಭ 2.ಪತ್ರ
4.ವಿರಹಾ 5.ಕ್ಷೇಮಸಮಾಚಾರ
6.ಅಜಗಜಾಂತರ 7.ಮಥಿತ
9.ಪದರ 12.ಕೋಡಗ
14.ಸ್ವಸ್ತಿ 16.ಸೆಲೆ

ಸುಡೊಕು 6233

4			9		1		3	2
	9	2		8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6232 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಮೈಸೂರಿನಲ್ಲಿ ಇ.ಡಿ. ಕಾರ್ಯಾಚರಣೆ ಮುಕ್ತಾಯ

3 ದಿನ ದಾಖಲೆಗಳ ಶೋಧ

ಪ್ರಜಾವಾಣಿ ವಾರ್ತೆ


ಜಯರಾಮು

ಮೈಸೂರು: ರಿಯಲ್ ಎಸ್ಟೇಟ್ ಉದ್ಯಮಿ ಜಯರಾಮು ಅವರಿಗೆ ಸೇರಿದ ಕಚೇರಿ ಹಾಗೂ ಮನೆಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸೋಮವಾರದಿಂದ ಬುಧವಾರದವರೆಗೆ ಶೋಧ ನಡೆಸಿದ್ದು, ವ್ಯವಹಾರಗಳಿಗೆ ಸಂಬಂಧಿಸಿದ ನೂರಾರು ಪುಟಗಳ ದಾಖಲೆಗಳನ್ನು ತಮ್ಮೊಂದಿಗೆ ಒಯ್ದಿದ್ದಾರೆ.

ಇಲ್ಲಿನ ಕುವೆಂಪು ನಗರದಲ್ಲಿರುವ ಎಂಎಂಜಿ ಕನ್‌ಸ್ಟ್ರಕ್ಷನ್ಸ್ ಕಚೇರಿ ಹಾಗೂ ಶ್ರೀರಾಂಪುರದಲ್ಲಿರುವ ಜಯರಾಮು ಅವರ ನಿವಾಸಕ್ಕೆ ಸೋಮವಾರ ಬೆಳಿಗ್ಗೆಯಿಂದ ಇ.ಡಿ. ಅಧಿಕಾರಿಗಳ ತಂಡ ದಾಳಿ ಕಾರ್ಯಾಚರಣೆ ನಡೆಸಿತ್ತು. ಬುಧವಾರ ಬೆಳಿಗ್ಗೆ ಕಾರ್ಯಾಚರಣೆ ಮುಕ್ತಾಯಗೊಂಡಿತು.

ಅವರ ರಿಯಲ್ ಎಸ್ಟೇಟ್ ವ್ಯವಹಾರಗಳು, 50:50 ಅನುಪಾತದಲ್ಲಿ ಪಡೆದ ನಿವೇಶನಗಳು, ಮುಡಾದ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಸೇರಿದಂತೆ ಅಧಿಕಾರಿಗಳೊಂದಿಗೆ ಹೊಂದಿರುವ ನಂಟಿನ ಕುರಿತು ಇ.ಡಿ. ಪ್ರಶ್ನಿಸಿದೆ. ಕಂಪನಿಯ ಎಲ್ಲ ವ್ಯವಹಾರಗಳ ದಾಖಲೆಗಳ ನಕಲು ಪ್ರತಿಗಳು, ಎಂಎಂಜಿ ಕನ್‌ಸ್ಟ್ರಕ್ಷನ್ಸ್ ಹಾಗೂ ವಕ್ರತುಂಡ ಸೊಸೈಟಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳ ವಿವರಗಳನ್ನು ಸಂಗ್ರಹಿಸಿದೆ.

ಮೈಸೂರು ಜಿಲ್ಲೆಯ ಎಚ್‌.ಡಿ. ಕೋಟೆ ತಾಲ್ಲೂಕಿನವರಾದ ಜಯರಾಮು ಮೊದಲು ಕಟ್ಟಡ ಕಾರ್ಮಿಕರಾಗಿದ್ದು, ಅಲ್ಪ ಅವಧಿಯಲ್ಲಿ ದೊಡ್ಡ ಪ್ರಮಾಣದ ವ್ಯವಹಾರಗಳನ್ನು ನಡೆಸುತ್ತಿರುವ ಹಾಗೂ ಆಸ್ತಿ ಹೊಂದಿರುವ ಕುರಿತೂ ಇ.ಡಿ. ಪ್ರಶ್ನಿಸಿತು. ಮುಡಾ ಅಧಿಕಾರಿಗಳು ಹಾಗೂ ಅವರ ಕುಟುಂಬದೊಂದಿಗಿನ ನಂಟಿನ ಕುರಿತೂ ವಿಚಾರಣೆ ನಡೆಸಿತು ಎನ್ನಲಾಗಿದೆ.

ಮಾಹಿತಿ ನೀಡಿದ್ದೇನೆ: ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಜಯರಾಮು, '13 ವರ್ಷದಿಂದ ಈ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದು, ಸಾವಿರಾರು ಮನೆ ಹಾಗೂ ನಿವೇಶನಗಳನ್ನು ನಿರ್ಮಿಸಿದ್ದೇನೆ. ಅದಕ್ಕೆ ಸಂಬಂಧಿಸಿ ಅಧಿಕಾರಿಗಳು ಕೇಳಿದ ಎಲ್ಲ ಮಾಹಿತಿಗಳನ್ನೂ ನೀಡಿದ್ದೇನೆ. ಮತ್ತೆ ವಿಚಾರಣೆಗೆ ಕರೆಯುವುದಾಗಿ ತಿಳಿಸಿದ್ದಾರೆ' ಎಂದರು.

'ಕ್ಯಾಥೊಲಿಕ್ ಸೊಸೈಟಿಗೆ ಮುಡಾದಿಂದ 50:50 ಅನುಪಾತದ ಅಡಿ ನೀಡಲಾಗಿದ್ದ ನಿವೇಶನಗಳ ಪೈಕಿ 5 ನಿವೇಶನಗಳನ್ನು ಖರೀದಿಸಿದ್ದು, ಅದರ ಮಾಹಿತಿ ನೀಡಿದ್ದೇನೆ. ವಕ್ರತುಂಡ ಸಹಕಾರ ಸಂಘವು ಸಾರ್ವಜನಿಕರ ಸೊಸೈಟಿಯಾಗಿದ್ದು, ನಾನು ನಿರ್ದೇಶಕ ನಷ್ಟೇ. ಮುಡಾ ಆಯುಕ್ತ ದಿನೇಶ್ ಅವರನ್ನು ಬಡಾವಣೆಗಳ ಕೆಲಸಕ್ಕೆ ಸಂಬಂಧಿಸಿ ಕಚೇರಿಯಲ್ಲಿ ಭೇಟಿ ಮಾಡಿದ್ದೆ. ಅವರು ಹಾಗೂ ಅವರ ಬಾಮೈದ ತೇಜಸ್ ಗೌಡ ಜೊತೆಗೂ ವ್ಯಾವಹಾರಿಕ ಸಂಬಂಧವಿಲ್ಲ. ಯಾರ ಹೆಸರಿನಲ್ಲೂ ಬೇನಾಮಿ ಆಸ್ತಿ ಹೊಂದಿಲ್ಲ' ಎಂದು ಹೇಳಿದರು.

ದಾಖಲೆಗಳ ಕಳ್ಳತನ: ಎಚ್‌.ಡಿ.ಕೆ

ಚನ್ನಪಟ್ಟಣ (ರಾಮನಗರ): 'ಜಾರಿ ನಿರ್ದೇಶನಾಲಯವು(ಇ.ಡಿ.) ಮುಡಾ ಹಗರಣದಲ್ಲಿ ನಾಲ್ಕೈದು ವಾರಗಳಿಂದ ಹಲವು ವ್ಯಕ್ತಿಗಳ ಮೇಲೆ ದಾಳಿ ನಡೆದಿದೆ. ಸಾಕಷ್ಟು ವಿಚಾರ ಹೊರಗಡೆ ಬರುತ್ತಿದೆ. ದಾಖಲೆಗಳು ಕಳ್ಳತನವಾಗಿವೆ ಎಂಬ ಮಾತು ಕೇಳಿ ಬರುತ್ತಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸತ್ಯ ಮೇವ ಜಯತೆ ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಈಗ ಸತ್ಯ ಮೇವ ಜಯತೆಯ ಸತ್ಯ ಹೊರಗಡೆ ಬರುತ್ತಿದೆ' ಎಂದು ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಇಲ್ಲಿ ವ್ಯಂಗ್ಯವಾಡಿದರು.

ಹೊರ ರಾಜ್ಯದಲ್ಲಿ ದಿನೇಶ್?

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಬುಧವಾರವೂ ಜಾರಿ ನಿರ್ದೇಶನಾಲಯದ (ಇ.ಡಿ.) ವಿಚಾರಣೆಗೆ ಹಾಜರಾಗಿಲ್ಲ. ಸೋಮವಾರದಿಂದ ನಾಪತ್ತೆಯಾಗಿರುವ ಅವರು, ಹೊರ ರಾಜ್ಯಕ್ಕೆ ತೆರಳಿರುವ ಶಂಕೆ ವ್ಯಕ್ತವಾಗಿದೆ.

ನಗರದ ಬಾಣಸವಾಡಿಯಲ್ಲಿರುವ ದಿನೇಶ್ ಕುಮಾರ್ ಅವರ ಮನೆಯಲ್ಲಿ ಶೋಧ ನಡೆಸಲು ಇ.ಡಿ. ಅಧಿಕಾರಿಗಳು ಹೋಗಿದ್ದರು. ಆದರೆ, ದಿನೇಶ್ ಅವರು ಮನೆಯಲ್ಲಿರಲಿಲ್ಲ. ಶೋಧ ಕಾರ್ಯ ಮುಗಿಸಿ ವಾಪಸಾಗಿದ್ದ ತನಿಖಾ ತಂಡದ ಅಧಿಕಾರಿಗಳು, ಮಂಗಳವಾರ ಪುನಃ ಅವರ ಮನೆಗೆ ಹೋಗಿ ಪರಿಶೀಲಿಸಿದ್ದರು. ಆಗಲೂ ದಿನೇಶ್ ಮನೆಗೆ ಬಂದಿರಲಿಲ್ಲ.

'ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಇ.ಡಿ. ಅಧಿಕಾರಿಗಳು ದಿನೇಶ್ ಅವರ ಮನೆಯ ಗೋಡೆಗೆ ನೋಟಿಸ್ ಅಂಟಿಸಿ ಬಂದಿದ್ದರು. ಬುಧವಾರ ಕೂಡ ಅವರು ಇ.ಡಿ. ಅಧಿಕಾರಿಗಳ ಎದುರು ಹಾಜರಾಗಿಲ್ಲ. ಸೋಮವಾರದಿಂದಲೇ ಅವರು ನಾಪತ್ತೆ ಆಗಿದ್ದು, ನೆರೆಯ ರಾಜ್ಯಕ್ಕೆ ತೆರಳಿರುವ ಅನುಮಾನ ಇದೆ' ಎಂದು ಮೂಲಗಳು ತಿಳಿಸಿವೆ.

ಪಟಾಕಿ ಸ್ಫೋಟ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ನೀಲೇಶ್ವರ (ಕಾಸರಗೋಡು): ಪಟ್ಟಣದ ಹೆದ್ದಾರಿ ಬಳಿಯ ಅಂಜೂಟ್ಟಂಬಲಂ ವೀರರ್‌ಕಾವ್ (ದೈವನರ್ತಕರ ದೇಗುಲ) ದೈವಸ್ಥಾನದಲ್ಲಿ ಸಂಭವಿಸಿದ ಪಟಾಕಿ ಸ್ಫೋಟಕ್ಕೆ ಸಂಬಂಧಿಸಿ ದೈವಸ್ಥಾನ ಸಮಿತಿಯ ಮೂವರನ್ನು ಬಂಧಿಸಲಾಗಿದ್ದು, ಅವರಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಸಮಿತಿಯ ಅಧ್ಯಕ್ಷ ಪಡನ್ನಕ್ಕಾಡ್ ಚಂದ್ರಶೇಖರನ್, ಕಾರ್ಯದರ್ಶಿ ಮಂದಂಪುರಂ ನಿವಾಸಿ ಕೆ.ಟಿ. ಭರತನ್, ಸದಸ್ಯ ಕೊಟ್ರಚ್ಚಾಲ್ ನಿವಾಸಿ ಪಳ್ಳಿಕ್ಕರೆ ರತೀಶ್ ಬಂಧಿತರು. ಕೊಟ್ರಚ್ಚಾಲ್‌ನ ವಿಜಯನ್ ತಲೆಮರೆಸಿಕೊಂಡಿದ್ದಾರೆ. ಸಮಿತಿಯ ಒಟ್ಟು 8 ಪದಾಧಿಕಾರಿಗಳನ್ನು ಆರೋಪಿಗಳೆಂದು ಪಟ್ಟಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವೀರರ್‌ಕಾವ್‌ನಲ್ಲಿ ಮೂವಾಳಂಕುಳಿ ಚಾಮುಂಡಿಯ ವಾರ್ಷಿಕ ಕಳಿಯಾಟ್ಟಂ ಮಹೋತ್ಸವದ ಭಾಗವಾಗಿ ಮಂಗಳವಾರ ನಸುಕಿನ 2.15ಕ್ಕೆ ವೆಳ್ಳಾಟಂ ಆರಂಭಗೊಂಡ ಸಂದರ್ಭದಲ್ಲಿ ಸಿಡಿಸಿದ ಪಟಾಕಿಯೊಂದರ ಕಿಡಿ ಪಟಾಕಿ ಸಂಗ್ರಹಿಸಿಟ್ಟಿದ್ದ ಶೆಡ್ ಒಳಗೆ ಬಿದ್ದು ಭಾರಿ ಸ್ಫೋಟ ಆಗಿತ್ತು.

ಸರ್ಕಾರದಿಂದ ಚಿಕಿತ್ಸಾ ವೆಚ್ಚ: ಪಟಾಕಿ ಸ್ಫೋಟದಲ್ಲಿ ಗಾಯಗೊಂಡ 154 ಮಂದಿಯ ಚಿಕಿತ್ಸಾ ವೆಚ್ಚ ಭರಿಸಲು ಕೇರಳ ಸರ್ಕಾರ ಬುಧವಾರ ನಿರ್ಧರಿಸಿದೆ. ಈ ಕುರಿತ ನಿರ್ಧಾರವನ್ನು ಬುಧವಾರ ನಡೆದ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಯಿತು ಎಂದು ಮುಖ್ಯಮಂತ್ರಿ ಕಚೇರಿಯ ಪ್ರಕಟಣೆ ತಿಳಿಸಿದೆ.

ಈ ಅವಘಡ ಕುರಿತ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ. ಅಲ್ಲದೆ ಪ್ರತ್ಯೇಕ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಹೆಚ್ಚುವರಿ ವಿಭಾಗೀಯ ಮ್ಯಾಜಿಸ್ಟ್ರೇಟ್‌ಗೂ ಸರ್ಕಾರ ಸೂಚಿಸಿದೆ.

'3 ತಿಂಗಳ ನಂತರ ಒಳಮೀಸಲಾತಿ'

ಮನಸ್ಸಿಗೆ ಬಂದಂತೆ ಟೀಕೆ ಬೇಡ– ಎಚ್ ಆಂಜನೇಯ

ಪ್ರಜಾವಾಣಿ ವಾರ್ತೆ


ಎಚ್‌.ಆಂಜನೇಯ

ಬೆಂಗಳೂರು: 'ಒಳ ಮೀಸಲಾತಿ ವಿಚಾರದಲ್ಲಿ ಹೋರಾಟಗಾರರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರದ ಸ್ವಾತಂತ್ರ್ಯ ಎಂದುಕೊಂಡು ಮನಸ್ಸಿಗೆ ಬಂದಂತೆ ಟೀಕೆ ಮಾಡಬಾರದು. ಒಬ್ಬರ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಟೀಕೆ ಮಾಡಬಾರದು. ಸಮಾಜದ ಜನತೆಗೆ ಧಕ್ಕೆ ತರುವಂಥ ಕೆಲಸವನ್ನು ಯಾರೂ ಮಾಡಬಾರದು' ಎಂದು ತಮ್ಮ ಸಮುದಾಯದವರಿಗೆ ಮಾಜಿ ಸಚಿವ ಎಚ್. ಆಂಜನೇಯ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೂರು ತಿಂಗಳ ನಂತರ ಒಳ ಮೀಸಲಾತಿ ಜಾರಿಗೆ ಕೆಲವರು ವಾಟ್ಸ್ ಆ್ಯಪ್‌ನಲ್ಲಿ ಸರ್ಕಾರದ ವಿರುದ್ಧ ನಿಂದನೆಯ ಮಾತುಗಳನ್ನು ಆಡುತ್ತಿದ್ದಾರೆ. ಯಾವುದೇ ಆತಂಕ ಬೇಡ ಮೂರು ತಿಂಗಳ ನಂತರ ಒಳ ಮೀಸಲಾತಿ ಜಾರಿಗೆ ಬಂದೇ ಬರುತ್ತದೆ. 30 ವರ್ಷ ಕಾಲ ಕಾದಿರುವ ನಾವು ಇನ್ನು ಕೇವಲ ಮೂರು ತಿಂಗಳ ಕಾಲ ಕಾಯಬೇಕು. ಸ್ವಲ್ಪ ತಾಳ್ಮೆಯನ್ನು ವಹಿಸಿದರೆ ಸಿಹಿ ಖಂಡಿತ' ಎಂದರು.

'ಒಳ ಮೀಸಲಾತಿ ಪರವಾಗಿ ನಿಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಉಪ ಚುನಾವಣೆ ನಂತರ ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ಆಯೋಜಿಸಿ ಅಭಿನಂದನೆ ಸಲ್ಲಿಸುತ್ತೇವೆ' ಎಂದರು.

'ಮಾದಿಗ ಸಮುದಾಯಕ್ಕೆ ತನ್ನ ಜನಸಂಖ್ಯೆಗೆ ಅನುಗುಣವಾಗಿ ಸೌಲಭ್ಯ ಸಿಗುತ್ತಿಲ್ಲ. ಒಳ ಮೀಸಲಾತಿ ಸಿಗುತ್ತಿಲ್ಲ. ಮುಖ್ಯ ಮೀಸಲಾತಿ ಇದ್ದರೂ ನಮಗೆ ನ್ಯಾಯ ಸಿಕ್ಕಿಲ್ಲ. ಉನ್ನತ ಶಿಕ್ಷಣ ಸೇರಿದಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸರಿಯಾದ ಸ್ಥಾನ ಸಿಗುತ್ತಿಲ್ಲ ಎನ್ನುವ ಕಾರಣಕ್ಕೆ 30 ವರ್ಷಗಳಿಂದ ನಾನು ಸೇರಿದಂತೆ ಅನೇಕ ಮುಖಂಡರು ಹೋರಾಟ ಮಾಡುತ್ತಾ ಇದ್ದೇವೆ. ಒಳ ಮೀಸಲಾತಿ ಜಾರಿಗೆ ಸಿದ್ದರಾಮಯ್ಯ ಅವರ ಸರ್ಕಾರ ಮುಂದಾಗಿದೆ' ಎಂದರು.

'ಹಳೆ ಮೈಸೂರು ಭಾಗದಲ್ಲಿ ಒಂದೇ ಜಾತಿಯವರು ಎರಡು ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ಪಡೆಯುತ್ತಿದ್ದಾರೆ. ಮಾದಿಗ ಸಮುದಾಯದಲ್ಲಿ ಆದಿ ಕರ್ನಾಟಕ ಎಂದು ಪ್ರಮಾಣಪತ್ರ ಪಡೆಯುತ್ತಿದ್ದಾರೆ. ಹೊಲೆಯರಲ್ಲಿ ಚಲವಾದಿ ಸಮುದಾಯದವರು ಕೂಡಾ ಆದಿ ಕರ್ನಾಟಕ ಎಂದು ಪ್ರಮಾಣಪತ್ರ ಪಡೆಯುತ್ತಿದ್ದಾರೆ. ಹೀಗಾಗಿ, ಜನಸಂಖ್ಯೆಯನ್ನು ನಿಖರವಾಗಿ ಬೇರ್ಪಡಿಸಲು ಆಗಿಲ್ಲ. ಈ ಕಾರಣಕ್ಕಾಗಿ ದತ್ತಾಂಶ ವಿಂಗಡಣೆಗೆ ಆಯೋಗ ರಚಿಸಲಾಗಿದೆ' ಎಂದೂ ವಿವರಿಸಿದರು.

ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಕೆಪಿಸಿಸಿ ಸಂಯೋಜಕರಾದ ಮಂಜೇಶ್ ಇದ್ದರು.

'ಜಾತಿ ಜನಗಣತಿ ವರದಿ ಬಿಡುಗಡೆಗೆ ಒತ್ತಾಯಿಸಿ ಸಿ.ಎಂ.ಗೆ ನೋಟಿಸ್'

ದಾವಣಗೆರೆ: 'ರಾಜ್ಯದಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರವು 15 ದಿನಗಳ ಒಳಗಾಗಿ ಜಾತಿ ಜನಗಣತಿ ವರದಿಯನ್ನು ಅಂಗೀಕರಿಸಿ ಬಿಡುಗಡೆ ಮಾಡಬೇಕು. ಇಲ್ಲವಾದರೆ ಹೈಕೋರ್ಟ್‌ನಲ್ಲಿ ಈ ಕುರಿತು ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೋಟಿಸ್ ಕಳಿಸಲಾಗಿದೆ' ಎಂದು ಪೀಪಲ್ಸ್ ಲಾಯರ್ಸ್ ಗಿಲ್ಡ್ ಸಂಘಟನೆಯ ರಾಜ್ಯ ಸಂಚಾಲಕ ಅನೀಸ್ ಪಾಷ ತಿಳಿಸಿದರು.

'ಜಾತಿ ಜನಗಣತಿ ವರದಿ ತಯಾರಿಸಲು ₹ 169 ಕೋಟಿ ವೆಚ್ಚ ಮಾಡಲಾಗಿದೆ. ಕೆಲವು ಸಮುದಾಯದವರು ಈ ವರದಿಯು ಅವೈಜ್ಞಾನಿಕವಾಗಿದ್ದು, ಅಂಗೀಕರಿಬಾರದು ಎಂದು ಒತ್ತಡ ಹೇರುತ್ತಿದ್ದಾರೆ. ಈ ರೀತಿಯ ಒತ್ತಡ ನ್ಯಾಯಸಮ್ಮತವಲ್ಲ' ಎಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

'ಎಚ್.ಕಾಂತರಾಜ್ ಆಯೋಗದ ವರದಿಯು ರಾಜ್ಯದ ಎಲ್ಲ ಸಮುದಾಯಗಳ ಜಾತಿಗಣತಿ ವರದಿ ಮಾತ್ರ ಆಗಿರದೇ, ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳ ಬಗೆಗಿನ ವರದಿಯಾಗಿದೆ. ಅದರಲ್ಲಿನ ಅಂಶಗಳನ್ನು ತಿಳಿದುಕೊಳ್ಳುವ ಹಕ್ಕನ್ನು ಸಂವಿಧಾನವು ಪ್ರತಿಯೊಬ್ಬರಿಗೂ ನೀಡಿದೆ' ಎಂದರು.

ವಿಜಯಪುರ ಜಿಲ್ಲೆಯಲ್ಲಿ ರೈತರಿಂದ ಅನಿರ್ದಿಷ್ಟಾವಧಿ ಧರಣಿ ● ಹಾವೇರಿ,ಗದಗ, ಧಾರವಾಡದಲ್ಲೂ ಪ್ರತಿಭಟನೆ

ಹಿಂದೂ ಸ್ಮಶಾನವೂ ಪಹಣಿಯಲ್ಲಿ 'ವಕ್ಫ್ ಆಸ್ತಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪಹಣಿ ಪತ್ರದಲ್ಲಿ 'ವಕ್ಫ್ ಆಸ್ತಿ' ಎಂಬುದಾಗಿ ನಮೂದು ಆದ ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರವಾಡ, ವಿಜಯಪುರ, ಗದಗ, ಹಾವೇರಿ ಜಿಲ್ಲೆಗಳ ಹಲವೆಡೆ ಬುಧವಾರ ರೈತರು ಪ್ರತಿಭಟನೆ ನಡೆಸಿದರು. ವಕ್ಫ್ ಆಸ್ತಿ ವಿವಾದ ಸಂಬಂಧಿಸಿದಂತೆ ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ರೈತರ ಅನಿರ್ದಿಷ್ಟಾವಧಿ ಧರಣಿ ಮುಂದುವರಿದಿದೆ.

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ತಡಸ ಗ್ರಾಮದ ಹಿಂದೂ ಸ್ಮಶಾನದ (ಮಸಣಗಟ್ಟಿ) ಪಹಣಿ ಪತ್ರದಲ್ಲಿ ಸರ್ವೆ ನಂಬರ್ 403ರಲ್ಲಿ 19 ಎಕರೆ 33 ಗುಂಟೆ ಜಾಗವನ್ನು 'ವಕ್ಫ್ ಆಸ್ತಿ' ಎಂದು ನಮೂದು ಮಾಡಲಾಗಿದ್ದು, ಈ ಕ್ರಮಕ್ಕೆ ಸ್ಥಳೀಯರಿಂದ ಆಕ್ರೋಶ ವ್ಯಕ್ತವಾಗಿದೆ.

'ದುಂಡಶಿ ಹೋಬಳಿ ವ್ಯಾಪ್ತಿಯಲ್ಲಿರುವ ತಡಸದಲ್ಲಿ ಹಿಂದೂ ಸಮುದಾಯಕ್ಕೆ ಒಂದೇ ಸ್ಮಶಾನವಿದೆ. ಮುಸ್ಲಿಮರಿಗೆ ಎರಡು ಖಬರಸ್ತಾನ ಇವೆ. ಈಗ, ಹಿಂದೂಗಳ ಸ್ಮಶಾನ ಸಹ ವಕ್ಫ್ ಆಸ್ತಿ ಎಂಬುದಾಗಿ ಕಂದಾಯ ದಾಖಲೆಗಳು ಬದಲಾವಣೆ ಆಗಿವೆ. ಇದನ್ನು ಸರಿಪಡಿಸದಿದ್ದರೆ, ಪ್ರತಿಭಟಿಸುತ್ತೇವೆ' ಎಂದು ತಡಸ ಗ್ರಾಮದ ಮುಖಂಡರು ಎಚ್ಚರಿಕೆ ನೀಡಿದರು.

'ಗದಗ ಜಿಲ್ಲೆಯ ಲಕ್ಷ್ಮೇಶ್ವರ ಹಾಗೂ ಮುಂಡರಗಿ ತಾಲ್ಲೂಕಿನ ಕೆಲ ರೈತರ ಜಮೀನಿನ ಉತಾರದಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದ್ದು, ಅವರಲ್ಲಿ ಆತಂಕ ಮೂಡಿಸಿದೆ. ಉತಾರದಲ್ಲಿ ನಮೂದಾದ ವಕ್ಫ್ ಮಂಡಳಿ ಹೆಸರನ್ನು ತೆಗೆದು ಹಾಕಬೇಕು' ಎಂದು ರೈತರು ತಹಶೀಲ್ದಾರ್ ಕಚೇರಿಗಳ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

'ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ 2019ರಿಂದ 2023ರ ನಡುವಿನ ಅವಧಿಯಲ್ಲಿ ಗದಗ ಜಿಲ್ಲೆಯ ಯಾವ ರೈತರಿಗೂ ನೋಟಿಸ್ ಕೊಟ್ಟಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಸ್ಪಷ್ಟಪಡಿಸಿದರು.

ವಕ್ಫ್ ಆಸ್ತಿ ಅತಿಕ್ರಮಣ/ ಪರಭಾರೆ ಮಾಡಿದ ಆರೋಪದ ಮೇರೆಗೆ ವಿಜಯ ನಗರದ ಬಳ್ಳಾರಿ ರಸ್ತೆಯ ಕಂಚಗಾರ್ ಪೇಟೆಯಲ್ಲಿ ಐವರಿಗೆ ವಕ್ಫ್ ಬೋರ್ಡ್‌ನಿಂದ ನೋಟಿಸ್ ಜಾರಿ ಆಗಿದ್ದು, ನ.8ರಂದು ಬೆಂಗಳೂರಿನಲ್ಲಿ ವಿಚಾರಣೆಗೆ ಹಾಜರಾಗಲು ಸೂಚಿಸಲಾಗಿದೆ.

ಅನಿರ್ದಿಷ್ಟಾವಧಿ ಧರಣಿ: ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ರೈತರ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಬುಧವಾರ ಭೇಟಿ ನೀಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ಮುಂದಿನ ಅಧಿವೇಶನದಲ್ಲಿ ವಕ್ಫ್ ಕಾಯ್ದೆಗೆ ತಿದ್ದುಪಡಿ ತರುಲು ಕೇಂದ್ರ ಸರ್ಕಾರ ಮುಂದಾಗಿದ್ದು, ರಾಜ್ಯ ಕಾಂಗ್ರೆಸ್ ಸರ್ಕಾರ ವಕ್ಫ್ ಮಂಡಳಿ ಮೂಲಕ ರೈತರ ಭೂಮಿ ವಶಪಡಿಸಿಕೊಳ್ಳಲು ಷಡ್ಯಂತ್ರ ರೂಪಿಸಿದೆ' ಎಂದರು.

'ಸಚಿವ ಜಮೀರ್ ಅಹಮದ್ ಅವರು ಮುಖ್ಯಮಂತ್ರಿ ಸೂಚನೆ ಮೇರೆಗೆ ವಕ್ಫ್ ಅದಾಲತ್ ಮಾಡಿದ್ದೇನೆ ಎನ್ನುತ್ತಾರೆ. ವಕ್ಫ್ ಆದಾಲತ್ ಮಾಡಲು ಸಿದ್ದರಾಮಯ್ಯ ಅವರ ಕುಮ್ಮಕ್ಕು, ಸೂಚನೆ ಇದೆಯಾ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದರು.

ಸಂಸದರಾದ ರಮೇಶ ಜಿಗಜಿಣಗಿ, ಗೋವಿಂದ ಕಾರಜೋಳ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ಮಾಜಿ ಶಾಸಕ ಎಸ್.ಕೆ.ಬೆಳ್ಳುಬ್ಬಿ, ರಮೇಶ ಭೂಸನೂರ, ಬಿಜೆಪಿ ಮುಖಂಡ ಉಮೇಶ ಕಾರಜೋಳ, ವಿಜುಗೌಡ ಪಾಟೀಲ ಇದ್ದರು.



ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಡೆದಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳದಲ್ಲಿ ಬುಧವಾರ ಮಾತನಾಡಿದರು ಪ್ರಜಾವಾಣಿ ಚಿತ್ರ

> **ರಾಜ್ಯದಲ್ಲಿ ಸರ್ಕಾರವಲ್ಲ, ಮಸೀದಿಗಳು ಆಡಳಿತ ಮಾಡುತ್ತಿವೆ. ಇದಕ್ಕೆ ಕಾಂಗ್ರೆಸ್ ಎಂಬ ಖಬರಸ್ತಾನ ಪಕ್ಷದ ಬೆಂಬಲವಿದೆ**
> **ಛಲವಾದಿ ನಾರಾಯಣಸ್ವಾಮಿ** ವಿರೋಧ ಪಕ್ಷದ ನಾಯಕ, ವಿಧಾನ ಪರಿಷತ್ತು

> **ವಿರೋಧ ಪಕ್ಷದವರು ಚುನಾವಣೆ ಸಂದರ್ಭದಲ್ಲಿ ಜನರ ಗಮನ ಸೆಳೆಯಲು ವಕ್ಫ್ ವಿಷಯ ಮುನ್ನಲೆಗೆ ತಂದಿದ್ದಾರೆ**
> **ಎಚ್.ಕೆ.ಪಾಟೀಲ** ಪ್ರವಾಸೋದ್ಯಮ ಸಚಿವ

> **ನೋಟಿಸ್ ಕೊಡುವುದನ್ನು ಸಹಿಸಲಾಗುವುದಿಲ್ಲ. ರಾಜ್ಯ ಸರ್ಕಾರದ ವಿರುದ್ಧ ಪಂಜಾಬ್ ಮಾದರಿ ಹೋರಾಟ ಮಾಡಬೇಕಾಗುತ್ತದೆ**
> **ಕುರುಬೂರು ಶಾಂತಕುಮಾರ್** ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ

ಜೋಶಿ–ಜಮೀರ್ ಜಟಾಪಟಿ

'ಕೋಮು ದ್ವೇಷ ಹರಡುವುದರ ಜೊತೆಗೆ ರಾಜ್ಯವನ್ನು ಇಸ್ಲಾಮೀಕರಣ ಮಾಡಲು ಮುಂದಾಗಿರುವ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸಂಪುಟದಿಂದ ಕಿತ್ತೊಗೆಯಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು. ನಗರದಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್‌ನ ಡೋಂಗಿ ಜಾತ್ಯತೀತತೆ ಮತ್ತು ಮುಸ್ಲಿಮರ ತುಷ್ಟೀಕರಣ ನೀತಿಯಿಂದ ದೇವಸ್ಥಾನಗಳ ಒಂದು ಇಂಚು ಜಾಗವೂ ಹೆಚ್ಚಾಗಿಲ್ಲ. ಆದರೆ, ಎಲ್ಲ ಪ್ರಮುಖ ಮತ್ತು ಹೆಚ್ಚು ಆದಾಯ ಇರುವ ದೇವಸ್ಥಾನಗಳನ್ನು ಸರ್ಕಾರ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ' ಎಂದು ಆರೋಪಿಸಿದರು.

> **ದೇಶದಲ್ಲಿ ವಕ್ಫ್ ಕಾಯ್ದೆಗೆ ಇರುವ ನಿರಂಕುಶ, ಅಪರಿಮಿತ ಅಧಿಕಾರವನ್ನು ಕೇಂದ್ರ ಸರ್ಕಾರ ಶೀಘ್ರವೇ ರದ್ದು ಮಾಡಲಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

'ನನ್ನನ್ನು ಕಿತ್ತೊಗೆಯಲು ಸಾಧ್ಯವಿಲ್ಲ'

ಪ್ರಲ್ಹಾದ ಜೋಶಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಜಮೀರ್ ಅಹಮದ್ ಖಾನ್, 'ಪ್ರಲ್ಹಾದ ಜೋಶಿ ಅವರಿಗೆ ಹಿಂದೂ, ಮುಸ್ಲಿಮರ ಬಗ್ಗೆ ಮಾತನಾಡುವುದು ಬಿಟ್ಟು ಬೇರೇನೂ ಗೊತ್ತಿಲ್ಲ. ನನ್ನನ್ನು ಸಂಪುಟದಿಂದ ಕಿತ್ತು ಹಾಕಲು ಸಾಧ್ಯವಿಲ್ಲ' ಎಂದರು.

'ನಾನು ಭಾರತೀಯ. 24 ಕ್ಯಾರೆಟ್ ಚಿನ್ನ. ಕೋಮು ದ್ವೇಷ ಹರಡುವ ಕೆಲಸ ಎಂದೂ ಮಾಡಿಲ್ಲ. ಮುಸ್ಲಿಮರು ಬಿಜೆಪಿಗೆ ಮತ ಹಾಕುವುದಿಲ್ಲ ಎಂಬ ಕಾರಣಕ್ಕೆ ನಮ್ಮನ್ನು ವಿರೋಧಿಸುತ್ತಾರೆ. ಮತ ಹಾಕಿದರೆ ಮಾತ್ರ ನಾವು ಒಳ್ಳೆಯವರು. ಇಲ್ಲದಿದ್ದರೆ ಈ ರೀತಿ ಮಾತನಾಡುತ್ತಾರೆ' ಎಂದರು.

ನ. 4ಕ್ಕೆ ರಾಜ್ಯಾದ್ಯಂತ ಬಿಜೆಪಿ ಹೋರಾಟ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಜಮೀನನ್ನು ವಕ್ಫ್‌ಗೆ ಹಸ್ತಾಂತರಿಸಬೇಕು ಮುಂದಾಗಿರುವ ವಕ್ಫ್ ಮಂಡಳಿ ಮತ್ತು ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ನ.4ರಂದು ರಾಜ್ಯದಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

'ಅಮಾಯಕ ರೈತರ ಪಹಣಿಗಳಲ್ಲಿ 'ವಕ್ಫ್ ಆಸ್ತಿ, ಪರಭಾರೆ ನಿಷೇಧಿಸಿದೆ' ಎಂದು ನಮೂದಿಸುವ ಮೂಲಕ ರೈತರ ಜಮೀನು ಕಬಳಿಸುವ ಪ್ರಯತ್ನ ನಡೆದಿದೆ. ಸಚಿವ ಜಮೀರ್ ಅಹ್ಮದ್ ಖಾನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಎಲ್ಲ ಜಿಲ್ಲಾಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ' ಎಂದು ಅವರು ಪ್ರಕಟಣೆಯಲ್ಲಿ ದೂರಿದ್ದಾರೆ.

'ಹಲವಾರು ಜಿಲ್ಲೆಗಳಲ್ಲಿ ರೈತರ ಜಮೀನಿಗೆ ಸಂಚಕಾರ ಬಂದಿದೆ. ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಈ ಸಂದರ್ಭದಲ್ಲಿ ರಚನಾತ್ಮಕ ವಿರೋಧಪಕ್ಷವಾಗಿ ರೈತರ ಪರವಾಗಿ ಸರ್ಕಾರವನ್ನು ಎಚ್ಚರಿಸುವ ಹೋರಾಟ ನಡೆಸಬೇಕಾಗಿದೆ' ಎಂದು ಹೇಳಿದ್ದಾರೆ.

ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿ ಮತ್ತು ತಾಲ್ಲೂಕು ಕಚೇರಿಗಳ ಮುಂದೆ ರೈತರನ್ನು ಒಳಗೊಂಡಂತೆ ಬೃಹತ್ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದ್ದಾರೆ.

ಬಿಜೆಪಿಯಿಂದ ನಾಟಕ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ವಿಜಯಪುರ ಜಿಲ್ಲೆಯಲ್ಲಿ ವಕ್ಫ್ ಆಸ್ತಿ ನೋಟಿಸ್ ನೀಡಿಕೆಗೆ ಸಂಬಂಧಿಸಿದಂತೆ ಸಿಂದಗಿ ಮಠ, ಯರೇಗಲ್, ಇಂಡಿ ತಾಲ್ಲೂಕಿನ ಪ್ರಕರಣಗಳಲ್ಲಿ ಆಗಿರುವ ಲೋಪಗಳನ್ನು ಪತ್ತೆ ಹಚ್ಚಿದ್ದೇ ನಾನು. ಆದರೆ, ಬಿಜೆಪಿಯವರು ಸತ್ಯಶೋಧನೆಯ ನೆಪದಲ್ಲಿ ವಿರಕ್ತ ಮಠ, ಹೊನವಾಡ ಗ್ರಾಮಗಳಿಗೆ ತೆರಳಿ ಭಾಷಣ ಬಿಗಿಯುವ ನಾಟಕ ಮಾಡುತ್ತಿದ್ದಾರೆ' ಎಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಇಂಡಿ ತಾಲ್ಲೂಕಿನ 41 ಪ್ರಕರಣಗಳಿಗೆ ಸಂಬಂಧಿಸಿದಂತೆ ಪಹಣಿಯ 11ನೇ ಕಾಲಂನಲ್ಲಿ ವಕ್ಫ್ ಎಂದು ನಮೂದಾಗಿರುವುದನ್ನು ತೆಗೆಯುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಯವರು ಕ್ರಮ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದರು.


'ಬಿಜೆಪಿ ಸರ್ಕಾರ ನಡೆಸುತ್ತಿದ್ದಾಗಲೂ ಬಹಳಷ್ಟು ರೈತರಿಗೆ ನೋಟಿಸ್‌ಗಳು ಜಾರಿಯಾಗಿದ್ದು, ಅವುಗಳಲ್ಲಿ ಕೆಲವು ಮಾಹಿತಿ ಬಿಡುಗಡೆಗೊಳಿಸಿದ್ದೇನೆ. ಅವರ ಅವಧಿಯ ಇನ್ನೂ ಹಲವು ಪ್ರಕರಣಗಳಿವೆ. ಅವೆಲ್ಲವನ್ನೂ ಜನರ ಮುಂದಿಡುತ್ತೇನೆ. ಅವರ ಅವಧಿಯಲ್ಲಿ ಆಗಿರುವ ಲೋಪಗಳನ್ನು ಒಪ್ಪಿಕೊಳ್ಳುವುದು ಬಿಟ್ಟು ಜನರ ದಿಕ್ಕುತಪ್ಪಿಸುತ್ತಿದ್ದಾರೆ' ಎಂದು ದೂರಿದರು.

'ಚುನಾವಣೆ ಕಾರಣಕ್ಕೆ ವಿವಾದ ಸೃಷ್ಟಿ'

ವಕ್ಫ್ ವಿಷಯವಾಗಿ ಬಿಜೆಪಿಯವರು ರಾಜಕೀಯ ಮಾಡಲು ಹೊರಟಿದ್ದಾರೆ. ಚುನಾವಣೆ ಕಾರಣಕ್ಕೆ ವಿವಾದವನ್ನು ಸೃಷ್ಟಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ವಕ್ಫ್ ವಿಚಾರವಾಗಿ ಬಿಜೆಪಿ ರಾಜ್ಯ ವ್ಯಾಪಿ ಪ್ರತಿಭಟನೆ ನಡೆಸುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, ರೈತರನ್ನು ಒಕ್ಕಲೆಬ್ಬಿಸುವುದಿಲ್ಲ. ರೈತರಿಗೆ ನೀಡಿರುವ ನೋಟಿಸ್‌ಗಳನ್ನು ವಾಪಸ್ ಪಡೆಯಲಾಗುವುದು ಎಂದು ತಿಳಿಸಿದರು.

'ಜಮೀರ್ ಪಾಕಿಸ್ತಾನಕ್ಕೆ ಹೋಗಲಿ'



ಕೆ.ಎಸ್‌ಈಶ್ವರಪ್ಪ

ಶಿವಮೊಗ್ಗ: 'ರೈತರ ಮತ್ತು ಮಠಗಳ ಆಸ್ತಿಯನ್ನು ವಕ್ಫ್ ಬೋರ್ಡ್‌ಗೆ ಸೇರಿಸಲು ಯತ್ನಿಸುತ್ತಿರುವ ಸಚಿವ ಜಮೀರ್ ಅಹ್ಮದ್ ಖಾನ್ ಅವರು ರಾಷ್ಟ್ರದ್ರೋಹಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇಲ್ಲಿ ಇರಲು ಇಷ್ಟವಿಲ್ಲದಿದ್ದರೆ ಪಾಕಿಸ್ತಾನಕ್ಕೆ ಹೋಗಲಿ' ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಚಿವ ಜಮೀರ್‌ಗೆ ಭಾರತವನ್ನು ಪಾಕಿಸ್ತಾನ ಮಾಡುವ ಆಸೆಯಿದೆ. ದೇಶದ ಅನ್ನ, ನೀರು, ಗಾಳಿ ಸೇವಿಸಿ ಮೋಸ ಮಾಡುತ್ತಿದ್ದಾರೆ. ಕರ್ನಾಟಕವನ್ನು ಮುಸ್ಲಿಂ ರಾಜ್ಯವನ್ನಾಗಿ ಮಾಡಲು ಹೊರಟಿದ್ದಾರೆ' ಎಂದು ಆರೋಪಿಸಿದರು.

'ಸಿದ್ದರಾಮಯ್ಯ ಅವರೇ, ರೈತರಿಗೆ ಮತ್ತು ಮಠಗಳಿಗೆ ನೀಡಿರುವ ನೋಟಿಸ್ ವಾಪಸ್ ಪಡೆಯಿರಿ. ಇಲ್ಲದಿದ್ದರೆ ರೈತರ ಮತ್ತು ಸ್ವಾಮೀಜಿಗಳ ಶಾಪ ತಟ್ಟಿ ನೀವು ಮತ್ತು ಸಚಿವ ಜಮೀರ್ ನರಕಕ್ಕೆ ಹೋಗಬೇಕಾಗುತ್ತದೆ' ಎಂದರು.

'ಸಿಂದಗಿಯ ವಿರಕ್ತಮಠ, ಸಿದ್ದ ಶಂಕರಾನಂದ ಮಠ, ಬೀರದೇವರ ಗುಡಿ ಆಸ್ತಿ ನಮ್ಮದು ಎಂದು ವಕ್ಫ್ ನೋಟಿಸ್ ನೀಡಿದೆ. ನಮ್ಮ ಉಸಿರು ಇರುವರೆಗೂ ಆಸ್ತಿ ಬಿಟ್ಟುಕೊಡುವುದಿಲ್ಲ. ಸಿದ್ದರಾಮಯ್ಯ ಕೂಡಲೇ ಅವರನ್ನು ಸಚಿವ ಸ್ಥಾನದಿಂದ ಕಿತ್ತುಹಾಕಬೇಕು. ಎರಡು ವಾರದೊಳಗೆ ಸರ್ಕಾರ ಸಮಸ್ಯೆ ನಿವಾರಿಸಬೇಕು' ಎಂದರು.

'ಜಮೀರ್ ಷಡ್ಯಂತ್ರ'

ಬೆಂಗಳೂರು: ರೈತರ ಜಮೀನು ವಕ್ಫ್ ಆಸ್ತಿ ಎಂದು ಪಹಣಿ ಬದಲಿಸಿ, ನೋಟಿಸ್ ಜಾರಿ ಮಾಡಲು ಅಲ್ಪಸಂಖ್ಯಾತರ ಇಲಾಖೆ ಸಚಿವ ಜಮೀರ್ ಅಹ್ಮದ್ ಮತ್ತು ಅವರ ಚೇಲಾಗಳ ಷಡ್ಯಂತ್ರವೇ ಕಾರಣ ಎಂದು ಬಿಜೆಪಿ ಶಾಸಕ ಹರೀಶ್ ಪೂಂಜ ಹೇಳಿದ್ದಾರೆ.

ಸಂಸದ ಗೋವಿಂದ ಕಾರಜೋಳ ನೇತೃತ್ವದ ನಿಯೋಗ ವಿಜಯಪುರ ಜಿಲ್ಲೆಗೆ ಭೇಟಿ ಕೊಟ್ಟು ವಿಷಯದ ಅಧ್ಯಯನ ಮಾಡಿದಾಗ ಈ ಸಮಸ್ಯೆ ಸೃಷ್ಟಿಯಾಗಲು ಜಮೀರ್ ಅವರೇ ಕಾರಣ ಎಂಬುದು ಗೊತ್ತಾಯಿತು ಎಂದು ತಿಳಿಸಿದರು.

ಉಪ ಚುನಾವಣೆ: ಹಣಾಹಣಿಗೆ ಕಣ ಸಜ್ಜು

ಒಂದನೇ ಪುಟದಿಂದ...

ಸಂಡೂರಿನಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಎನ್. ವೆಂಕಣ್ಣ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಕಾಂಗ್ರೆಸ್ ನಾಯಕರ ಮನವಿಗೆ ಮಣಿಯದ ಅವರು, ನಾಮಪತ್ರ ಹಿಂಪಡೆಯದೇ ಕಣದಲ್ಲಿ ಉಳಿದಿದ್ದಾರೆ. ಚನ್ನಪಟ್ಟಣದಲ್ಲಿ ಏಳು ಪಕ್ಷೇತರ ಅಭ್ಯರ್ಥಿಗಳು ಬುಧವಾರ ನಾಮಪತ್ರ ಹಿಂಪಡೆದಿದ್ದಾರೆ.

ಶಿಗ್ಗಾವಿಯಲ್ಲಿ ಕಾಂಗ್ರೆಸ್‌ನ ಯಾಸೀರ್ ಅಹ್ಮದ್ ಖಾನ್ ಪಠಾಣ, ಮೈತ್ರಿ ಕೂಟದ ಅಭ್ಯರ್ಥಿ ಭರತ್ ಬೊಮ್ಮಾಯಿ ಪರಸ್ಪರ ಸ್ಪರ್ಧೆಗೆ ಇಳಿದಿದ್ದಾರೆ. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ರವಿಕೃಷ್ಣಾ ರೆಡ್ಡಿ ಕಣದಲ್ಲಿದ್ದಾರೆ. ಚನ್ನಪಟ್ಟಣದಲ್ಲಿ ಕಾಂಗ್ರೆಸ್‌ನಿಂದ ಸಿ.ಪಿ. ಯೋಗೇಶ್ವರ್ ಹಾಗೂ ಜೆಡಿಎಸ್ ಅಭ್ಯರ್ಥಿ ನಿಖಿಲ್, ಸಂಡೂರಿನಲ್ಲಿ ಕಾಂಗ್ರೆಸ್‌ನ ಅನ್ನಪೂರ್ಣಾ ತುಕಾರಾಂ ಹಾಗೂ ಬಿಜೆಪಿಯ ಬಂಗಾರು ಹನುಮಂತು ಮಧ್ಯೆ ನೇರ ಹಣಾಹಣಿ ಏರ್ಪಟ್ಟಿದೆ.

ಚನ್ನಪಟ್ಟಣ ಉಪಚುನಾವಣೆ: ಸಿ.ಪಿ. ಯೋಗೇಶ್ವರ್ ನಡೆ ಹಳ್ಳಿ ಕಡೆ

ಅಲ್ಪಸಂಖ್ಯಾತರತ್ತ ಎಚ್‌ಡಿಕೆ ಚಿತ್ತ

• ಓದೇಶ ಸಕಲೇಶಪುರ

ಚನ್ನಪಟ್ಟಣ (ರಾಮನಗರ): ಉಪ ಚುನಾವಣೆ ಪ್ರಚಾರ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಜೆಡಿಎಸ್‌ನಿಂದ ಕಣಕ್ಕಿಳಿದಿರುವ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಪರ ನಿರಂತರ ಪ್ರಚಾರ ಕೈಗೊಂಡಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬುಧವಾರ ಪಟ್ಟಣದ ಅಲ್ಪಸಂಖ್ಯಾತರ ಮತಗಳತ್ತ ಚಿತ್ತ ಹರಿಸಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಅವರು ಹಳ್ಳಿಗಳತ್ತ ದೃಷ್ಟಿ ನೆಟ್ಟು ಮತ ಯಾಚಿಸುತ್ತಿದ್ದಾರೆ.

ಪಟ್ಟಣದಲ್ಲಿ ಅಲ್ಪಸಂಖ್ಯಾತ ಸಮುದಾಯದವರು ಹೆಚ್ಚಾಗಿರುವ ಸಯ್ಯದ್‌ವಾಡಿ ದರ್ಗಾ, ಟಿಪ್ಪುನಗರ, ಶೇರು ಹೋಟೆಲ್ ವೃತ್ತ ಸೇರಿದಂತೆ ವಿವಿಧೆಡೆ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿ ಮತ ಯಾಚಿಸಿದರು. ನಂತರ, ಬಡಾಮಕಾನ್‌ನ ಹಜರತ್ ಸೈಯದ್ ಮಹಮ್ಮದ್ ಅಖಿಲ್ ಷಾ ಖಾದ್ರಿ ಅವರ ದರ್ಗಾಕ್ಕೆ ಭೇಟಿ ನೀಡಿ ಚಾದರ್ ಅರ್ಪಿಸಿದರು.

ನನಗೆ ಜಾತಿ–ಧರ್ಮವಿಲ್ಲ: ರೋಡ್ ಶೋನಲ್ಲಿ ಮಾತನಾಡಿದ ಎಚ್‌ಡಿಕೆ, 'ನನಗೆ ಜಾತಿ–ಧರ್ಮವಿಲ್ಲ. ಎಲ್ಲರನ್ನೂ ಪ್ರೀತಿಸುವ ನಾನು, ಸರ್ವ ಜನಾಂಗದ ಶಾಂತಿ ತೋಟ ಎಂಬ ತತ್ವ ಅಳವಡಿಸಿಕೊಂಡಿದ್ದೇನೆ. ಅಲ್ಪಸಂಖ್ಯಾತರಿಗೆ ದ್ರೋಹ ಮಾಡುವ ಮಾತೇ ಇಲ್ಲ. ನಾಗಮಂಗಲದಲ್ಲಿ ಗಲಭೆಯಾದಾಗ ಅಂಗಡಿ ಕಳೆದುಕೊಂಡ ಹಿಂದೂ–ಮುಸ್ಲಿಮರಿಗೆ ವೈಯಕ್ತಿಕವಾಗಿ ನಾನೇ ಪರಿಹಾರ ಕೊಟ್ಟಿದ್ದೇನೆ. ಜೈಲು ಸೇರಿದ್ದ 54 ಮಂದಿಯನ್ನು ನಮ್ಮ ವಕೀಲರ ಮೂಲಕ ಬಿಡುಗಡೆಗೊಳಿಸಿದೆ. ಅದರಲ್ಲಿ 27 ಮುಸ್ಲಿಮರು ಸಹ ಇದ್ದರು' ಎಂದರು.

'ಹಿಂದೆ ಡಿ.ಜೆ.ಹಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ 900 ಮುಸ್ಲಿಮರು ಇನ್ನೂ ಜೈಲಿನಲ್ಲಿದ್ದಾರೆ. ನಾವು ಮುಸ್ಲಿಮರ ಪರ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ಒಬ್ಬರೂ ಬಿಡುಗಡೆಯಾಗಿಲ್ಲ. ಇದೇ ನಮಗೂ ಅವರಿಗೂ ವ್ಯತ್ಯಾಸ' ಎಂದರು.

ಕೆಂಗಲ್‌ನಲ್ಲಿ ಸಿಪಿವೈ ಪೂಜೆ: ಕೆಂಗಲ್‌ನ ಆಂಜನೇಯ ದೇವಸ್ಥಾನದಲ್ಲಿ ಬೆಳಿಗ್ಗೆ ಪೂಜೆ ಸಲ್ಲಿಸಿದ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್, ಹೊಂಗನೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ತೆರೆದ ವಾಹನದಲ್ಲಿ ಪ್ರಚಾರ ಮಾಡಿದರು. ಮಾಜಿ ಸಂಸದ ಡಿ.ಕೆ.ಸುರೇಶ್, ನೆಲಮಂಗಲ ಶಾಸಕ ಶ್ರೀನಿವಾಸ್, ಮಾಜಿ ಶಾಸಕ ಎಂ.ಸಿ.ಅಶ್ವತ್ಥ್ ಸೇರಿದಂತೆ ಸ್ಥಳೀಯ ಮುಖಂಡರು ಅವರಿಗೆ ಸಾಥ್ ನೀಡಿದರು.

'ಕಾಂಗ್ರೆಸ್ ಟಾರ್ಗೆಟ್ ಮುಸ್ಲಿಮರು'



ಕುಮಾರಸ್ವಾಮಿ

'ಶಿಗ್ಗಾವಿ ಕಾಂಗ್ರೆಸ್ ಮುಖಂಡ ಸೈಯದ್ ಅಜೀಂಪೀರ್ ಖಾದ್ರಿ ಅವರನ್ನು ಅಪಹರಿಸಿ ಒಂದು ವಾರದಿಂದ ಕೂಡಿ ಹಾಕಿದ್ದಾರೆ. ಅಧಿಕಾರ ದುರ್ಬಳಕೆ ಮಾಡಿಕೊಂಡು ನಾಮಪತ್ರ ವಾಪಸ್ ತೆಗೆಸಿದ್ದಾರೆ. ಒಬ್ಬ ಸಚಿವ ಖಾದ್ರಿ ಅವರನ್ನು ಗೃಹ ಬಂಧನದಲ್ಲಿರಿಸಿ ಏನೆಲ್ಲ ಮಾಡಿಸಿದ್ದಾರೆ. ಅವರಲ್ಲಿ ಗೆಲುವಿನ ವಿಶ್ವಾಸದ ಕೊರತೆ ಎಷ್ಟಿದೆ ಎಂಬುದು ಇದರಲ್ಲೇ ಗೊತ್ತಾಗುತ್ತಿದೆ' ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ವಾಮಮಾರ್ಗದಲ್ಲಿ ಚುನಾವಣೆ ಗೆಲ್ಲುವ ಚಾಳಿಯ ಕಾಂಗ್ರೆಸ್, ಚನ್ನಪಟ್ಟಣದಲ್ಲೂ ಕೂಡಾ ಷಡ್ಯಂತ್ರ ಮಾಡಲು ಹೊರಟಿದೆ. ಈ ಕುತಂತ್ರಕ್ಕೆ ಮತದಾರರು ಮರುಳಾಗಬಾರದು ಎಂದರು.

> ಯೋಗೇಶ್ವರ್ ಪಕ್ಷಾಂತರ ಮಾಡಿರುವುದು ನಮಗೆ ಹಿನ್ನಡೆಯಾಗಿದೆ. ಇದರಿಂದ ತೊಂದರೆ ಇಲ್ಲ. ಪಕ್ಷದ ಕಾರ್ಯಕರ್ತರು, ಮುಖಂಡರು ನಮ್ಮ ಜತೆಗಿದ್ದಾರೆ
> **ಅಶ್ವತ್ಥನಾರಾಯಣ,** ಬಿಜೆಪಿ ಶಾಸಕ

> ಎರಡು ಸಲ ಗೆದ್ದರೂ ಕುಮಾರಸ್ವಾಮಿ ನಿಮ್ಮ ಬಳಿಗೆ ಬಂದು ಸಮಸ್ಯೆ ಆಲಿಸಿಲ್ಲ. ಈಗ, ನಾನು ತಪ್ಪು ಮಾಡಿದ್ದೇನೆ. ಮಗನಿಗೆ ಮತ ಹಾಕಿ ಎಂದು ಕಣ್ಣೀರು ಹಾಕುತ್ತಾರೆ. ಅದರ ಕಣ್ಣೀರಿಗೆ ನೀವು ಮರುಳಾಗಬೇಡಿ
> **ಡಿ.ಕೆ.ಸುರೇಶ್,** ಮಾಜಿ ಸಂಸದ

'ಎಲ್ಲಿ ಕಳೆದುಕೊಂಡಿದ್ದೇವೊ, ಅಲ್ಲೇ ಹುಡುಕಬೇಕು'



'ನಾನು ಎರಡು ಸಲ ಸೋತಿದ್ದೇನೆ ಎಂದು ನಿಖಿಲ್ ಭಾವನಾತ್ಮಕವಾಗಿ ಪ್ರಚಾರ ಮಾಡುತ್ತಿದ್ದಾರೆ. ನಾವು ಎಲ್ಲಿ ಕಳೆದುಕೊಂಡಿದ್ದೇವೊ, ಅಲ್ಲೇ ಹುಡುಕಬೇಕು. ನಿಖಿಲ್ ಮಂಡ್ಯ ಮತ್ತು ರಾಮನಗರದಲ್ಲಿ ಕಳೆದುಕೊಂಡಿದ್ದಾರೆ ಮತ್ತೆ ಅಲ್ಲೇ ಹೋಗಿ ಹುಡುಕಬೇಕು. ಅಲ್ಲೇ ಇದ್ದು ಅಭಿವೃದ್ಧಿ ಕೆಲಸ ಮಾಡಿ ಬೆಂಬಲ ಕೇಳಬೇಕು. ಎರಡು ಬಾರಿ ಸೋತಿರುವ ನಾನು ಸಹ ಈ ಬಾರಿ ಗೆಲ್ಲಬೇಕಲ್ಲವೆ' ಎಂದು ಸಿ.ಪಿ. ಯೋಗೇಶ್ವರ್ ಹೇಳಿದರು.

ತಾಲ್ಲೂಕಿನ ಚಂದ್ರಗಿರಿದೊಡ್ಡಿ ಗ್ರಾಮದಲ್ಲಿ ಪ್ರಚಾರ ನಡೆಸಿ ಮಾತನಾಡಿದ ಅವರು, 'ಕುಮಾರಸ್ವಾಮಿ ಅವರು ಗಿಮಿಕ್ ಮಾಡಿ ತಮ್ಮ ಮಗನನ್ನು ತಂದು ನಿಲ್ಲಿಸಿ ಗೆಲ್ಲಿಸಲು ಪ್ರಯತ್ನಿಸುತ್ತಿದ್ದಾರೆ. ಸ್ವತಃ ಅವರಿಗೆ ತಾಲ್ಲೂಕಿನ ಪರಿಚಯವಿಲ್ಲ. ಹೀಗಿರುವಾಗ ಅವರ ಮಗನಿಗೇನು ಗೊತ್ತು? ಇದು ನನ್ನ ತಾಲ್ಲೂಕು. ಇಲ್ಲೇ ಹುಟ್ಟಿರುವ ನನಗೆ ಕ್ಷೇತ್ರದ ಸಮಸ್ಯೆ ಹಾಗೂ ಜನರ ಭಾವನೆ ಏನೆಂದು ಗೊತ್ತಿದೆ. ಮತದಾರರು ಈ ಸಲ ಸ್ಥಳೀಯ ಸ್ವಾಭಿಮಾನ ಬಿಡದೆ ಗೆಲ್ಲಿಸುವ ಭರವಸೆ ಇದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ನನಗೆ ಕಣ್ಣೀರು ಹಾಕುತ್ತಾ ಅಳುವುದಕ್ಕೆ ಬರೋದಿಲ್ಲ. ನಾನು ಕಣ್ಣೀರು ಹಾಕಲು ಕ್ಷೇತ್ರದ ಜನರು ಬಿಡುವುದಿಲ್ಲ. ಊರು ಮನೆಯವನಾದ ನನಗೆ ಮತ ಹಾಕಿ ಸೇವೆಗೆ ಅವಕಾಶ ಮಾಡಿ ಕೊಡುತ್ತಾರೆ
> **ಯೋಗೇಶ್ವರ್,** ಕಾಂಗ್ರೆಸ್ ಅಭ್ಯರ್ಥಿ

ಶಿಗ್ಗಾವಿ ಉಪಚುನಾವಣೆ: ದೀಪಾವಳಿ ನೆಪದಲ್ಲಿ ವಾಹನ ವ್ಯವಸ್ಥೆ

ಊರು ಬಿಟ್ಟವರ ಕರೆತರಲು ಪೈಪೋಟಿ

• ಸಂತೋಷ ಜಿಗಳಿಕೊಪ್ಪ

ಶಿಗ್ಗಾವಿ (ಹಾವೇರಿ ಜಿಲ್ಲೆ)ಳ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್, ಬಿಜೆಪಿ ನಡುವೆ ಜಿದ್ದಾಜಿದ್ದಿ ಸ್ಪರ್ಧೆಯಿದ್ದು, ಕೆಲಸ ಅರಸಿ ಊರು ಬಿಟ್ಟಿರುವ ಮತದಾರರನ್ನು ಕ್ಷೇತ್ರಕ್ಕೆ ವಾಪಸು ಕರೆತರಲು ತೀವ್ರ ಪೈಪೋಟಿ ಏರ್ಪಟ್ಟಿದೆ.

ಶಿಗ್ಗಾವಿ ಮತ್ತು ಸವಣೂರು ತಾಲ್ಲೂಕಿನಲ್ಲಿ ಆರ್ಥಿಕವಾಗಿ ಹಿಂದುಳಿದವರ ಸಂಖ್ಯೆ ಹೆಚ್ಚಿದೆ. ಕೃಷಿ ಚಟುವಟಿಕೆ ಕೈಗೊಳ್ಳಲು ಹಲವರಿಗೆ ಜಮೀನಿಲ್ಲ. ಕ್ಷೇತ್ರದಲ್ಲಿ ಉದ್ಯೋಗಗಳ ಸಂಖ್ಯೆಯೂ ಕಡಿಮೆಯಿದೆ. ಇದೇ ಕಾರಣಕ್ಕೆ, ಕ್ಷೇತ್ರದ ಜನರು ಕೆಲಸ ಅರಸಿ ಮಂಗಳೂರು, ಗೋವಾ, ಬೆಂಗಳೂರು, ಮುಂಬೈಗಳಿಗೆ ವಲಸೆ ಹೋಗಿದ್ದಾರೆ.

ಈಗಿನ ಉಪಚುನಾವಣೆಯಲ್ಲಿ ಪ್ರತಿಯೊಂದು ಮತವೂ ಮಹತ್ವದ್ದೆಂದು ಅಭ್ಯರ್ಥಿಗಳಿಗೆ ಹೇಳುತ್ತಿರುವ ಪಕ್ಷಗಳ ನಾಯಕರು, ಎಲ್ಲ ಮತದಾರರನ್ನು ಖುದ್ದಾಗಿ ಭೇಟಿಯಾಗಿ ಮತಯಾಚನೆ ಮಾಡುವಂತೆ ಸೂಚಿಸುತ್ತಿದ್ದಾರೆ. ಇದೇ ಕಾರಣಕ್ಕೆ, ಗ್ರಾಮೀಣ ಪ್ರದೇಶದಲ್ಲೂ ಪ್ರಚಾರ ಈಗಾಗಲೇ ಶುರುವಾಗಿದೆ.



ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಸೈಯದ್ ಅಜ್ಜಂಪೀರ ಖಾದ್ರಿ ಅವರು ಬುಧವಾರ ನಾಮಪತ್ರ ಹಿಂಪಡೆದ ನಂತರ ಕಾಂಗ್ರೆಸ್ ಮುಖಂಡರು ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು. ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ, ಸಚಿವ ಜಮೀರ್ ಅಹ್ಮದ್ ಖಾನ್ ಇದ್ದಾರೆ

ಕ್ಷೇತ್ರದಲ್ಲಿರುವ ಮತಗಟ್ಟೆವಾರು ಮತದಾರರ ಪಟ್ಟಿ ಪರಿಶೀಲನೆ ನಡೆಸಿರುವ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರು, ವಲಸೆ ಹೋಗಿರುವ ಮತದಾರರ ಪ್ರತ್ಯೇಕ ಪಟ್ಟಿ ಸಿದ್ಧಪಡಿಸಿದ್ದಾರೆ. ಯಾವ ಊರಿನಲ್ಲಿ ಎಷ್ಟು ಜನರಿದ್ದಾರೆ ? ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತಿದ್ದಾರೆ. ವಲಸೆ ಮತದಾರರನ್ನು ಸಂಪರ್ಕಿಸಿ ಕ್ಷೇತ್ರಕ್ಕೆ ವಾಪಸು ಕರೆತಂದು ಮತ ಹಾಕಿಸುವ ಜವಾಬ್ದಾರಿಯನ್ನು ಬೂತ್ ಮಟ್ಟದ ಕಾರ್ಯಕರ್ತರಿಗೆ ನೀಡಲಾಗಿದೆ.

'ನಮ್ಮ ಮತಗಟ್ಟೆ ವ್ಯಾಪ್ತಿಯ 54 ಮಂದಿ ಗೋವಾಗೆ ದುಡಿಯಲು ಹೋಗಿದ್ದಾರೆ. ಅವರ ಹೆಸರು ನಮ್ಮ ಮತಗಟ್ಟೆಯ ಮತದಾರರ ಪಟ್ಟಿಯಲ್ಲಿದೆ. 54 ಜನರ ಪೈಕಿ 48 ಮಂದಿಯನ್ನು ಈಗಾಗಲೇ ಸಂಪರ್ಕಿಸಲಾಗಿದೆ. ಅವರನ್ನು ಕ್ಷೇತ್ರಕ್ಕೆ ವಾಪಸು ಕರೆತರುವ ಕೆಲಸವೂ ಪ್ರಗತಿಯಲ್ಲಿದೆ' ಎಂದು ಪಕ್ಷದ ಕಾರ್ಯಕರ್ತರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ದೀಪಾವಳಿ ಹಬ್ಬದ ನೆಪ: 'ದೀಪಾವಳಿ ಹಬ್ಬಕ್ಕೆ ಬರಲು ನಿಮಗೆ ವಾಹನದ ವ್ಯವಸ್ಥೆ ಮಾಡಲಾಗಿದೆ. ವಾಹನ ಬೇಡವೆಂದರೆ, ಬಸ್ ಪ್ರಯಾಣ ಶುಲ್ಕವನ್ನು ನೀಡಲಾಗುವುದು. ಎಲ್ಲರೂ ಸುರಕ್ಷಿತವಾಗಿ ಕ್ಷೇತ್ರಕ್ಕೆ ಬರಬೇಕು. ಜೊತೆಗೆ, ಕ್ಷೇತ್ರಕ್ಕೆ ಬಂದ ನಂತರ ಮತ್ತಷ್ಟು ಅನುಕೂಲ ಮಾಡಿಕೊಡಲಾಗುವುದು' ಎಂದು ಪಕ್ಷಗಳ ಕಾರ್ಯಕರ್ತರು ವಲಸೆ ಮತದಾರರಿಗೆ ಭರವಸೆ ನೀಡಿದ್ದಾರೆ.

ದೀಪಾವಳಿ ಹಬ್ಬದ ಮುನ್ನಾದಿನವಾದ ಬುಧವಾರ, ವಲಸೆ ಕಾರ್ಮಿಕರನ್ನು ಕರೆತರಲು ಬೆಂಗಳೂರು, ಮಂಗಳೂರಿನಿಂದ ವಾಹನ ವ್ಯವಸ್ಥೆ ಮಾಡಿದ ಮಾಹಿತಿ ಇದೆ. ಗೋವಾದಿಂದ ಬರಲು ಕೆಲ ಮತದಾರರಿಗೆ, ವ್ಯವಸ್ಥೆ ಮಾಡಲಾಗಿದೆ.

ಜೆಡಿಎಸ್ ಸ್ಟಾರ್ ಪ್ರಚಾರಕರ ಪಟ್ಟಿ: ಜಿಟಿಡಿ ಹೆಸರಿಲ್ಲ

ಬೆಂಗಳೂರು: ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಜೆಡಿಎಸ್ ತನ್ನ ಸ್ಟಾರ್ ಪ್ರಚಾರಕರ ಪಟ್ಟಿ ಬಿಡುಗಡೆ ಮಾಡಿದ್ದು, ದಸರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಗಳಿದ್ದ ಪಕ್ಷದ ಪ್ರಮುಖರ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ. ದೇವೇಗೌಡ ಅವರನ್ನು ಪಟ್ಟಿಯಿಂದ ಹೊರಗಿಡಲಾಗಿದೆ.

ಪಟ್ಟಿಯಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಂಸದ ಮಲ್ಲೇಶ್ ಬಾಬು, ಪಕ್ಷದ ಮಾಜಿ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ, ಶಾಸಕರಾದ ಎ. ಮಂಜು, ಶಾರದಾ ಪೂರ್ಯಾ ನಾಯ್ಕ್, ಶರವಣ, ಭೋಜೇಗೌಡ ಸೇರಿದಂತೆ ಹಾಲಿ, ಮಾಜಿಗಳನ್ನು ಒಳಗೊಂಡ 40 ಪ್ರಚಾರಕರು ಇದ್ದಾರೆ.

ದಸರಾ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ್ದ ಜಿ.ಟಿ. ದೇವೇಗೌಡ, 'ಮುಡಾ' ನಿವೇಶನ ಹಂಚಿಕೆ ಪ್ರಕರಣದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ದನಿ ಎತ್ತಿದ್ದರು. 'ಯಾರೆಲ್ಲರ ವಿರುದ್ಧ ಎಫ್‌ಐಆರ್ ದಾಖಲಾಗಿದೆಯೋ ಅವರೆಲ್ಲರೂ ತಾಕತ್ತಿದ್ದರೆ, ವಿಧಾನಸೌಧದ ಮುಂದೆ ಬಂದು ರಾಜೀನಾಮೆ ಕೊಡಲಿ. ಅವರೆಲ್ಲರಿಗೂ ದೇವಿ ಚಾಮುಂಡೇಶ್ವರಿ ಒಳ್ಳೆ ಬುದ್ಧಿ ಕೊಡಲಿ' ಎಂದಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸುತ್ತಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಬಿಜೆಪಿ-ಜೆಡಿಎಸ್ ಮುಖಂಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಅವರ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಚರ್ಚೆಗೂ ಕಾರಣವಾಗಿತ್ತು.

ಪ್ರಚಾರದಲ್ಲಿ ಜನಾರ್ದನ ರೆಡ್ಡಿಗೆ ಜನರ ತರಾಟೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಸಂಡೂರು ವಿಧಾನಸಭಾ ಕ್ಷೇತ್ರದ ಕುಡುತಿನಿ ಪಟ್ಟಣದಲ್ಲಿ ಬುಧವಾರ ಸಂಜೆ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರ ಪ್ರಚಾರ ನಡೆಸುತ್ತಿದ್ದ ಜನಾರ್ದನ ರೆಡ್ಡಿ ಅವರನ್ನು ಸ್ಥಳೀಯರು ತೀವ್ರ ತರಾಟೆಗೆ ತೆಗೆದುಕೊಂಡರು.

'ನಿಮ್ಮ ಅವಧಿಯಲ್ಲಿ ಕೈಗಾರಿಕೆ ಉದ್ದೇಶಕ್ಕೆ ನಮ್ಮ ಭೂಮಿ ವಶಕ್ಕೆ ಪಡೆಯಲಾಯಿತು. ಆದರೆ, ನಮಗೆ ಪರಿಹಾರ ಮತ್ತು ಉದ್ಯೋಗವೂ ಇಲ್ಲ' ಎಂಬಂತಾಗಿದೆ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜನಾರ್ದನ ರೆಡ್ಡಿ 'ಮಾತು ಪೂರ್ಣಗೊಳಿಸಲು ಬಿಡಿ. ಈ ಬಾರಿ ಬಿಜೆಪಿಯನ್ನು ಗೆಲ್ಲಿಸಿ. ನಿಮ್ಮ ಮನೆಯಲ್ಲಿ ನನ್ನ ಫೋಟೊ ಇಟ್ಟು ಪೂಜಿಸುವಂತೆ ಮಾಡುತ್ತೇನೆ' ಎಂದರು.

ಜನಾರ್ದನ ರೆಡ್ಡಿ ಮಾತಿಗೆ ಸಮಾಧಾನಗೊಳ್ಳದ ಗ್ರಾಮಸ್ಥರು ತಮ್ಮ ನೋವು ಹೇಳಿಕೊಳ್ಳಲಾರಂಭಿಸಿದರು. ಆಗ ಜನಾರ್ದನ ರೆಡ್ಡಿ, ಪೊಲೀಸರನ್ನು ಉದ್ದೇಶಿಸಿ 'ಕುಡಿದಿರುವವರನ್ನು ಹೊರಗೆ ಕರೆದುಕೊಂಡು ಹೋಗಿ' ಎಂದರು. ಆಗ ಜನ ಮತ್ತಷ್ಟು ಆಕ್ರೋಶಗೊಂಡರು.



ಜನಾರ್ದನ ರೆಡ್ಡಿ

ಮತ್ತೆ ಪೊಲೀಸರ ಮೇಲೆ ರೇಗಾಡಿದ ರೆಡ್ಡಿ, 'ನೀವು ಕಾಂಗ್ರೆಸ್ ಏಜೆಂಟರಂತೆ ವರ್ತಿಸುತ್ತಿದ್ದೀರಿ' ಎಂದರು. ಅಲ್ಲಿಂದ ನಿರ್ಗಮಿಸಿದ ರೆಡ್ಡಿ, ಸ್ಥಳೀಯ ಬಿಜೆಪಿ ಮುಖಂಡರ ಮನೆಗಳಿಗೆ ಭೇಟಿ ಕೊಟ್ಟರು.

ವಾಂತಿ ಭೇದಿ ಬಾಲಕಿ ಸಾವು

ಸೇಡಂ(ಕಲಬುರಗಿ ಜಿಲ್ಲೆ): ಸೇಡಂ ತಾಲ್ಲೂಕಿನ ಹೂಡಾ(ಬಿ) ಗ್ರಾಮದಲ್ಲಿ ವಾಂತಿ ಭೇದಿ ಕಾಣಿಸಿಕೊಂಡಿದ್ದು, ಬಾಲಕಿ ಮೃತಪಟ್ಟಿದ್ದಾಳೆ.

ಗ್ರಾಮದ ಮಮತಾ ಹಣಮಂತ ಜೋಗುರ (5) ಮೃತಪಟ್ಟಿದ್ದಾಳೆ. ಗ್ರಾಮದಲ್ಲಿ ಪೂರೈಕೆಯಾಗುವ ಕಲುಷಿತ ನೀರು ಕುಡಿದು ಬಾಲಕಿ ಮೃತಪಟ್ಟಿದ್ದಾಳೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

'ಆಸ್ಪತ್ರೆಗೆ ದಾಖಲಾಗುವ ಮುನ್ನವೇ ಬಾಲಕಿ ಮೃತಪಟ್ಟಿದ್ದಾಳೆ. ಹೀಗಾಗಿ ಸಾವಿಗೆ ನಿಖರವಾದ ಕಾರಣ ಹೇಳಲು ಸಾಧ್ಯವಿಲ್ಲ' ಎಂದು ವೈದ್ಯರು ಪ್ರತಿಕ್ರಿಯಿಸಿದ್ದಾರೆ.

ಗ್ರಾಮಸ್ಥರಲ್ಲಿ ಬುಧವಾರ ನಸುಕಿನ ಜಾವ ಕರುಳು ಬೇನೆ ಸೇರಿ ವಾಂತಿ–ಭೇದಿ ಕಾಣಿಸಿಕೊಂಡಿದೆ. ಮಳಖೇಡ ಸಮುದಾಯ ಆರೋಗ್ಯ ಕೇಂದ್ರಕ್ಕೆ ತೆರಳಿ ಪ್ರಾಥಮಿಕ ಚಿಕಿತ್ಸೆ ಪಡೆದಿದ್ದಾರೆ. ಮಕ್ಕಳನ್ನು ಸೇಡಂನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಲಾಗಿದೆ. ಮಳಖೇಡ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಬಸಣ್ಣ ಜಮಾದರ ಸೇರಿ 7 ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಟಿಟಿಡಿ ಮಂಡಳಿ: ಬಿ.ಆರ್.ನಾಯ್ಡು ಅಧ್ಯಕ್ಷ

ಅಮರಾವತಿ (ಪಿಟಿಐ): ತಿರುಮಲ ತಿರುಪತಿ ದೇವಸ್ಥಾನಂಗೆ (ಟಿಟಿಡಿ) 24 ಸದಸ್ಯರನ್ನು ಒಳಗೊಂಡ ಹೊಸ ಮಂಡಳಿಯನ್ನು ಆಂಧ್ರ ಪ್ರದೇಶ ಸರ್ಕಾರ ಬುಧವಾರ ರಚನೆ ಮಾಡಿದೆ.

ಟಿವಿ5 ತೆಲುಗು ಸುದ್ದಿ ವಾಹಿನಿಯ ಮುಖ್ಯಸ್ಥರಾಗಿರುವ ಬಿ.ಆರ್.ನಾಯ್ಡು ಅವರನ್ನು ಟಿಟಿಡಿ ಮಂಡಳಿಯ ನೂತನ ಅಧ್ಯಕ್ಷರನ್ನಾಗಿ ಸರ್ಕಾರ ನೇಮಕ ಮಾಡಿದೆ.

ಎಚ್.ಎಂ.ಟಿ ಜಾಗಕ್ಕೆ ಸಚಿವ ಖಂಡ್ರೆ ಅತಿಕ್ರಮ ಪ್ರವೇಶ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಎಚ್.ಎಂ.ಟಿ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದಾರೆ. ಅವರಿಗೆ ಮಾಹಿತಿ ಮತ್ತು ಜ್ಞಾನದ ಕೊರತೆ ಇದೆ. ಆ ಜಾಗ ವನ್ನು 2002ರಲ್ಲೇ ಕೆನರಾ ಬ್ಯಾಂಕಿಗೆ ನೀಡಲಾಗಿದೆ. ಈ ಬಗ್ಗೆ ನಾಳೆ ಅಥವಾ ನಾಡಿದ್ದು ದಾಖಲೆ ಸಮೇತ ಮಾಧ್ಯಮದವರ ಮುಂದೆ ಮಾತನಾಡುವೆ' ಎಂದು ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಎಚ್.ಎಂ.ಟಿ ಜಾಗಕ್ಕೆ ಸಚಿವ ಖಂಡ್ರೆ ಭೇಟಿ ನೀಡಿ ಕುರಿತು ಬುಧವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಎಚ್.ಎಂ.ಟಿ ಜಾಗ ಕುರಿತು ನ್ಯಾಯಾಲಯದಲ್ಲಿ ತಕರಾರು ಅರ್ಜಿ ಇದ್ದು, ತೀರ್ಪಿಗಾಗಿ ಕಾಯುತ್ತಿದ್ದೇವೆ. ನಾವು ಕಾನೂನು ಮೂಲಕ ಹೋರಾಟ ಮಾಡುತ್ತೇವೆಯೇ ಹೊರತು, ಪ್ರಚಾರಕ್ಕಾಗಿ ಯಾವುದೇ ವಿಚಾರ ತೆಗೆದುಕೊಳ್ಳುವುದಿಲ್ಲ' ಎಂದರು.

'ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ಮಾಜಿ ಸ್ಪೀಕರ್ ಒಬ್ಬರು ಒತ್ತುವರಿ ಮಾಡಿರುವ ಅರಣ್ಯ ಭೂಮಿ ತೆರವುಗೊಳಿಸುವ ಧೈರ್ಯವನ್ನು ಸಚಿವರು ತೋರಿಸಲಿ. ಒತ್ತುವರಿ ತೆರವಿಗೆ ಆದೇಶಿಸಿರುವ ಕೋರ್ಟ್, ಅರಣ್ಯ ಇಲಾಖೆ ಮತ್ತು ಕೋಲಾರ ಜಿಲ್ಲಾಧಿಕಾರಿಗೆ ನೋಟಿಸ್ ಕೊಟ್ಟಿದೆ. ಆದರೂ, ಯಾಕೆ ತೆರವುಗೊಳಿಸಿಲ್ಲ' ಎಂದು ಪ್ರಶ್ನಿಸಿದರು.

ಅನಧಿಕೃತ ಶಾಲೆ: ಪರೀಕ್ಷೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನ್ಯತೆ ಪಡೆಯದ, ನವೀಕರಣ ಹೊಂದದ ಅನಧಿಕೃತ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸೂಚಿಸಿದೆ.

ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆಯಾ ಜಿಲ್ಲೆಯ ಉಪ ನಿರ್ದೇಶಕರು ಮಾನ್ಯತೆ ಪಡೆಯದ, ನವೀಕರಣ ಹೊಂದದ ಅನಧಿಕೃತ ಶಾಲೆಗಳ ಮಾಹಿತಿಯನ್ನು ಮಂಡಳಿಗೆ ಸಲ್ಲಿಸಬೇಕು. ಅನಧಿಕೃತ ಶಾಲೆಗಳ ಕಾರಣಕ್ಕೆ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತೊಂದರೆಯಾದರೆ ಬಿಇಒ, ಡಿಡಿಪಿಐಗಳನ್ನೇ ಹೊಣೆ ಮಾಡಲಾಗುವುದು. ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಮಂಡಳಿಯ ನಿರ್ದೇಶಕರು ಎಚ್ಚರಿಸಿದ್ದಾರೆ. ಅನಧಿಕೃತ ಶಾಲೆಗಳನ್ನು ಮುಚ್ಚಲು ಆದೇಶ ನೀಡಿದ್ದರೆ ಅಥವಾ ವಿದ್ಯಾರ್ಥಿಗಳ ಕೊರತೆಯಿಂದ ಶಾಲೆಗಳು ಮುಚ್ಚಿದ್ದರೆ ಅಂತಹ ಶಾಲೆಗಳ ಸಂಕೇತ ಸಂಖ್ಯೆಯನ್ನು ಮಂಡಳಿಗೆ ಸಲ್ಲಿಸಬೇಕು. ಸಿಬಿಎಸ್‌ಇ, ಐಸಿಎಸ್‌ಇಯಿಂದ ರಾಜ್ಯಪಠ್ಯಕ್ರಮಕ್ಕೆ ಬದಲಾದ ವಿದ್ಯಾರ್ಥಿಗಳ ಮಾಹಿತಿಯನ್ನು ತಕ್ಷಣ ಒದಗಿಸಬೇಕು ಎಂದು ಹೇಳಿದ್ದಾರೆ.

ಮಹಾರಾಷ್ಟ್ರ: ಬಂಡಾಯದ ಬಿಸಿ

ವಿಧಾನಸಭಾ ಚುನಾವಣೆ: ಎಂವಿಎ, ಮಹಾಯುತಿ ಮೈತ್ರಿಕೂಟಗಳಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಬಂಡಾಯ ಅಭ್ಯರ್ಥಿಗಳು ಕಣದಲ್ಲಿ ಇರುವ ಕಾರಣ, ಆಡಳಿತಾರೂಢ ಮಹಾಯುತಿ ಮೈತ್ರಿಕೂಟ ಹಾಗೂ ವಿರೋಧ ಪಕ್ಷಗಳ ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟದ ನಾಯಕರು ಆಗಬಹುದಾದ ಹಾನಿಯನ್ನು ತಡೆಯಲು ಮುಂದಾಗಿದ್ದಾರೆ.

ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ನವೆಂಬರ್ 4ರವರೆಗೆ ಅವಕಾಶ ಇದೆ. ಅದಾದ ನಂತರವೇ ವಿಧಾನಸಭಾ ಚುನಾವಣೆಯ ಕಣದ ಬಗ್ಗೆ ಇನ್ನಷ್ಟು ಸ್ಪಷ್ಟವಾದ ಚಿತ್ರಣವೊಂದು ಸಿಗಲಿದೆ. ನವೆಂಬರ್ 20ರಂದು ನಡೆಯಲಿರುವ ಚುನಾವಣೆಗೆ ಒಟ್ಟು 7,955 ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ. ಇಷ್ಟು ಮಂದಿ ಅಭ್ಯರ್ಥಿಗಳಿಂದ 10,905 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಚುನಾವಣಾ ಆಯೋಗ ಮಾಹಿತಿ ಒದಗಿಸಿದೆ.

ಬಿಜೆಪಿ, ಶಿವಸೇನಾ, ಎನ್‌ಸಿಪಿ ಪಕ್ಷಗಳ ಮಹಾಯುತಿ ಮೈತ್ರಿಕೂಟದ ನಾಯಕರು ಹಾಗೂ ಕಾಂಗ್ರೆಸ್, ಶಿವಸೇನಾ (ಯುಬಿಟಿ), ಎನ್‌ಸಿಪಿ (ಎಸ್‌ಪಿ) ಮೈತ್ರಿಕೂಟವಾದ ಎಂವಿಎ ನಾಯಕರು ಬಂಡಾಯ ಅಭ್ಯರ್ಥಿಗಳನ್ನು ಸಮಾಧಾನಪಡಿಸಲು ಮುಂದಾಗಿದ್ದಾರೆ. ಈ ನಾಯಕರು ಸರಣಿ ಸಭೆಗಳನ್ನು ಕೂಡ ನಡೆಸಿದ್ದಾರೆ.

ಕಾಂಗ್ರೆಸ್ ನಾಯಕರು ಹಾಗೂ ಎಂವಿಎ ಮೈತ್ರಿಕೂಟದ ನಾಯಕರು ಬಂಡಾಯ ಅಭ್ಯರ್ಥಿಗಳ ಜೊತೆ ಮಾತನಾಡಿದ್ದಾರೆ. ನಾಮಪತ್ರ ಹಿಂದಕ್ಕೆ ಪಡೆಯುವಂತೆ ಅವರಿಗೆ ಮನವಿ ಮಾಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಮೇಶ್ ಚೆನ್ನಿತ್ತಲ ಹೇಳಿದ್ದಾರೆ.

'ಬಂಡಾಯ ಅಭ್ಯರ್ಥಿಗಳೆಲ್ಲರೂ ನಾಮಪತ್ರ ಹಿಂಪಡೆಯಲಿದ್ದಾರೆ. ನಮ್ಮ ಮೈತ್ರಿಕೂಟಕ್ಕೆ ಸೇರಿದವರ ನಡುವೆ ಹಣಾಹಣಿ ಇರುವುದಿಲ್ಲ. ನಮ್ಮ ನಾಯಕರಾದ ಬಾಳಾಸಾಹೇಬ್ ಥೋರಟ್, ನಾನಾ ಪಟೋಲೆ ಮತ್ತು ವಿಜಯ್ ವಡೆಟ್ಟೀವಾರ್ ಅವರು ಬಂಡಾಯ ಅಭ್ಯರ್ಥಿಗಳ ಜೊತೆ ಮಾತನಾಡುವರು' ಎಂದು ಚೆನ್ನಿತ್ತಲ ಹೇಳಿದ್ದಾರೆ.

ಮಹಾಯುತಿ ನಾಯಕರಾದ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಮತ್ತು ಅಜಿತ್ ಪವಾರ್ ಅವರು ಸಭೆ ನಡೆಸಿ, ಬಂಡಾಯ ಅಭ್ಯರ್ಥಿಗಳ ವಿಚಾರವಾಗಿ ಚರ್ಚಿಸಿದ್ದಾರೆ.

ಬಿಜೆಪಿಯಿಂದ ಹೆಚ್ಚು ಅಭ್ಯರ್ಥಿಗಳು

ಬಿಜೆಪಿಯ ಅಭ್ಯರ್ಥಿಗಳು 148 ಸ್ಥಾನಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಮಹಾರಾಷ್ಟ್ರದ ಆಡಳಿತಾರೂಢ ಮೈತ್ರಿಕೂಟ ಹಾಗೂ ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿ ಇರುವ ವಿವಿಧ ಪಕ್ಷಗಳ ಪೈಕಿ ಈ ಬಾರಿ ಅತಿಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿರುವ ಪಕ್ಷ ಬಿಜೆಪಿ.

ಬಿಜೆಪಿಯ ನಂತರದ ಸ್ಥಾನದಲ್ಲಿ ಕಾಂಗ್ರೆಸ್ ಇದೆ. ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಗಳು 103 ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಶಿವಸೇನಾ ಅಭ್ಯರ್ಥಿಗಳು 80 ಸ್ಥಾನಗಳಲ್ಲಿ, ಎನ್‌ಸಿಪಿ ಅಭ್ಯರ್ಥಿಗಳು 53 ಸ್ಥಾನಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ಮಹಾಯುತಿ ಮೈತ್ರಿಕೂಟದ ಇತರ ಪಕ್ಷಗಳಿಗೆ ಐದು ಸ್ಥಾನ ನೀಡಲಾಗಿದೆ. ಎರಡು ಸ್ಥಾನಗಳ ವಿಚಾರವಾಗಿ ಯಾವ ತೀರ್ಮಾನವನ್ನೂ ತೆಗೆದುಕೊಳ್ಳಲಾಗಿಲ್ಲ. ಶಿವಸೇನಾ (ಯುಬಿಟಿ) ಅಭ್ಯರ್ಥಿಗಳು 89 ಕ್ಷೇತ್ರಗಳಲ್ಲಿ, ಎನ್‌ಸಿಪಿ (ಎಸ್‌ಪಿ) 87 ಸ್ಥಾನಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ವಿರೋಧ ಪಕ್ಷಗಳ ಮೈತ್ರಿಕೂಟದ ಇತರ ಪಕ್ಷಗಳಿಗೆ ಆರು ಸ್ಥಾನ ಬಿಟ್ಟು ಕೊಡಲಾಗಿದೆ. ಮೂರು ಕ್ಷೇತ್ರಗಳ ವಿಚಾರವಾಗಿ ಸ್ಪಷ್ಟ ಚಿತ್ರಣ ಸಿಕ್ಕಿಲ್ಲ. ನಾಮಪತ್ರ ಹಿಂಪಡೆಯಲು ನವೆಂಬರ್ 4ರವರೆಗೆ ಅವಕಾಶ ಇದೆ.

ಇಬ್ರಾಹಿಂ ಮಲಿಕ್‌ಗೆ ಬಿಜೆಪಿ ಬೆಂಬಲವಿಲ್ಲ

ಮಿತ್ರಪಕ್ಷವಾಗಿರುವ ಎನ್‌ಸಿಪಿಯ ಮಾನಖುರ್ದ್–ಶಿವಾಜಿ ನಗರ ಕ್ಷೇತ್ರದ ಅಭ್ಯರ್ಥಿ ನವಾಬ್ ಮಲಿಕ್ ಅವರ ಪರವಾಗಿ ತಾನು ಚುನಾವಣಾ ಪ್ರಚಾರ ನಡೆಸುವುದಿಲ್ಲ ಎಂಬುದನ್ನು ಬಿಜೆಪಿ ಸ್ಪಷ್ಟಪಡಿಸಿದೆ.

ಪಾತಕಿ ದಾವೂದ್ ಇಬ್ರಾಹಿಂ ಜೊತೆ ಮಲಿಕ್ ಅವರಿಗೆ ನಂಟು ಇದೆ ಎಂಬ ಆರೋಪವಿರುವ ಕಾರಣಕ್ಕೆ ಅವರ ಪರವಾಗಿ ಪ್ರಚಾರ ನಡೆಸಲು ತನ್ನಿಂದಾಗದು ಎಂದು ಬಿಜೆಪಿ ಹೇಳಿದೆ.

ಆದರೆ, ಮಲಿಕ್ ಅವರ ಪುತ್ರಿ, ಅನುಶಕ್ತಿ ನಗರ ಕ್ಷೇತ್ರದ ಎನ್‌ಸಿಪಿ ಅಭ್ಯರ್ಥಿ ಸನಾ ಮಲಿಕ್ ಪರವಾಗಿ ಪ್ರಚಾರ ನಡೆಸಲು ತಾನು ಸಿದ್ಧ ಎಂದು ಬಿಜೆಪಿ ಹೇಳಿದೆ.

'ಬಂಡಾಯ ಶಮನ': ಬಂಡಾಯ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿದಿರುವ ಶೇಕಡ 90ರಷ್ಟು ಮಂದಿಯನ್ನು ಸಮಾಧಾನಪಡಿಸುವಲ್ಲಿ ಎಂವಿಎ ಯಶಸ್ವಿಯಾಗಿದೆ ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಎಂಎನ್‌ಎಸ್ ಭಾಗಿ: ರಾಜ್ ಠಾಕ್ರೆ

'ಮುಂದೆ ಬಿಜೆಪಿ ನೇತೃತ್ವದಲ್ಲಿ, ಬಿಜೆಪಿಯ ಮುಖ್ಯಮಂತ್ರಿ ನೇತೃತ್ವದ ರಚನೆ ಆಗಲಿರುವ ಸರ್ಕಾರದಲ್ಲಿ ಎಂಎನ್‌ಎಸ್ ಭಾಗಿಯಾಗಲಿದೆ' ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಮುಖ್ಯಸ್ಥ ರಾಜ್ ಠಾಕ್ರೆ ಹೇಳಿದ್ದಾರೆ.

ರಾಜ್ ಠಾಕ್ರೆ ಅವರು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎನ್‌ಡಿಎ ಮೈತ್ರಿಕೂಟವನ್ನು ಬೆಂಬಲಿಸಿದ್ದ ಕಾರಣಕ್ಕೆ, ಮುಂಬೈನ ಮಾಹಿಂ ವಿಧಾನಸಭಾ ಕ್ಷೇತ್ರದಲ್ಲಿ ರಾಜ್ ಅವರ ಮಗ ಅಮಿತ್ ಠಾಕ್ರೆ ಅವರಿಗೆ ಬಿಜೆಪಿ ಬೆಂಬಲ ನೀಡುವುದು ಖಚಿತ ಎಂದು ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಅವರು ಹೇಳಿದ್ದರು.

ಇದಾದ ಕೆಲವೇ ಕ್ಷಣಗಳ ನಂತರ, ರಾಜ್ ಠಾಕ್ರೆ ಅವರು ಸರ್ಕಾರದ ಭಾಗವಾಗುವ ಮಾತು ಆಡಿದ್ದಾರೆ. ಫಡಣವೀಸ್ ಅವರು ಕಳೆದ ಐದು ವರ್ಷಗಳಿಂದಲೂ ರಾಜ್ ಠಾಕ್ರೆ ಜೊತೆ ಉತ್ತಮ ಸಂಬಂಧ ಹೊಂದಿದ್ದಾರೆ.

'ಟ್ರಂಪ್ ಒಬ್ಬ ಅಸ್ಥಿರ ವ್ಯಕ್ತಿ'



ಕಮಲಾ ಹ್ಯಾರಿಸ್

ವಾಷಿಂಗ್ಟನ್ (ಪಿಟಿಐ): 'ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಒಬ್ಬ ಅಸ್ಥಿರ ವ್ಯಕ್ತಿಯಾಗಿದ್ದು, ಸೇಡು ತೀರಿಸಿಕೊಳ್ಳುವ ಗೀಳು ಹೊಂದಿದ್ದಾರೆ' ಎಂದು ತೀವ್ರ ವಾಗ್ದಾಳಿ ನಡೆಸಿದ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್, 'ಅವ್ಯವಸ್ಥೆ ಸೃಷ್ಟಿಸುವ ಮತ್ತು ವಿಭಜನೆ ಮಾಡುವವರನ್ನು ತಿರಸ್ಕರಿಸಿ' ಎಂದು ಕರೆ ನೀಡಿದರು.

ನವೆಂಬರ್ 5ರಂದು ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ 60 ವರ್ಷದ ಕಮಲಾ ಅವರು 78 ವರ್ಷದ ಟ್ರಂಪ್ ಅವರನ್ನು ಎದುರಿಸಲಿದ್ದಾರೆ.

ಚುನಾವಣಾ ಅಭಿಯಾನದ ಕೊನೆಯ ಪ್ರಮುಖ ಭಾಷಣ ಮಾಡಿದ ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ತಮ್ಮನ್ನು ನವ ಪೀಳಿಗೆಯ ನಾಯಕತ್ವದ ಹೋರಾಟಗಾರ್ತಿ ಎಂದು ಪರಿಚಯಿಸಿಕೊಂಡರು.

'ತನ್ನ ಧೋರಣೆಯನ್ನು ಒಪ್ಪದ ಅಮೆರಿಕದ ನಾಗರಿಕರ ವಿರುದ್ಧ ಮಾಜಿ ಅಧ್ಯಕ್ಷ ಟ್ರಂಪ್ ಸೇನೆ ಬಳಸಲು ಉದ್ದೇಶಿಸಿದ್ದಾರೆ. ಅಂತಹವರನ್ನು ಒಳಗಿನ ಶತ್ರುಗಳು ಎಂದೇ ಟ್ರಂಪ್ ಭಾವಿಸಿದ್ದಾರೆ. ಸಂಘರ್ಷ, ಭಯ ಸೃಷ್ಟಿಸುವ ಮತ್ತು ವಿಭಜಿಸುವವರನ್ನು ಬದಲಿಸುವ ಸಮಯ ಬಂದಿದೆ' ಎಂದ ಅವರು, ಅಮೆರಿಕದಲ್ಲಿ ಹೊಸ ಪೀಳಿಗೆಯ ನಾಯಕತ್ವದ ಸಮಯ ಬಂದಿದೆ ಎಂದು ಹೇಳಿದರು.

ಟ್ರಂಪ್ ಬೆಂಬಲಿಗರು ಕಸ ಎಂದ ಬೈಡನ್

ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಬೆಂಬಲಿಗರನ್ನು ಕಸಕ್ಕೆ ಹೋಲಿಸಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಮಂಗಳವಾರ ಜರಿದಿದ್ದಾರೆ.

ಈ ಸಂಬಂಧ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ಸ್ಪಷ್ಟೀಕರಣ ನೀಡಿರುವ ಶ್ವೇತ ಭವನ, 'ಅಧ್ಯಕ್ಷರು, ಟ್ರಂಪ್ ಬೆಂಬಲಿಗರೊಬ್ಬರು ಬಳಸಿದ್ದ ಜನಾಂಗೀಯ ಭಾಷೆಯನ್ನು ಖಂಡಿಸಿದ್ದಾರೆಯೇ ಹೊರತು, ಟ್ರಂಪ್ ಅವರ ಬೆಂಬಲಿಗರನ್ನು ಅವಮಾನಿಸಿಲ್ಲ' ಎಂದು ಹೇಳಿದೆ.

ಕಮಲಾ ಪರ ಭಾರತೀಯ–ಅಮೆರಿಕನ್ನರ ಒಲವು

ಅಟ್ಲಾಂಟಾ/ನ್ಯೂಯಾರ್ಕ್ (ಪಿಟಿಐ/ಎಪಿ): ಅಮೆರಿಕ ಅಧ್ಯಕ್ಷೀಯ ಚುನಾವಣೆಯು ಮುಕ್ತಾಯದ ಹಂತ ತಲುಪಿದೆ. ಫಲಿತಾಂಶಕ್ಕೆ ಇನ್ನೇನು ಕೆಲವೇ ದಿನಗಳು ಉಳಿದಿವೆ. ಡೆಮಾಕ್ರಟಿಕ್ ಪಕ್ಷದಿಂದ ಭಾರತ ಮೂಲದ ಕಮಲಾ ಹ್ಯಾರಿಸ್ ಅವರು ಸ್ಪರ್ಧಿಸುತ್ತಿದ್ದಾರೆ. ಕಮಲಾ ಅವರ ತಾಯಿ ಭಾರತೀಯರಾಗಿದ್ದು ತಂದೆ ಜಮೈಕಾದವರಾಗಿದ್ದಾರೆ. ಭಾರತೀಯ ಅಮೆರಿಕನ್ನರು ಈ ಬಾರಿ ಯಾರ ಪರ ಇದ್ದಾರೆ ಎನ್ನುವ ಕುರಿತು ಹಲವು ಸಮೀಕ್ಷೆಗಳು ನಡೆದಿವೆ. ಈ ಎಲ್ಲ ಸಮೀಕ್ಷೆಗಳಲ್ಲೂ ಭಾರತೀಯ ಅಮೆರಿಕನ್ನರ ಆಯ್ಕೆ ಕಮಲಾ ಅವರೇ ಆಗಿದ್ದಾರೆ. ತೀವ್ರ ಹಣಾಹಣಿ ಇರುವ ಹಲವು ಕ್ಷೇತ್ರಗಳಲ್ಲಿ ಈ ಸಮುದಾಯದ ಮತದಾರರೇ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.

55 ಲಕ್ಷ ಭಾರತೀಯ–ಅಮೆರಿಕನ್ನರ ಸಂಖ್ಯೆ

23 ಲಕ್ಷ ಮತದಾನಕ್ಕೆ ಅರ್ಹರಾಗಿರುವ ಭಾರತೀಯ–ಅಮೆರಿಕನ್ನರ ಸಂಖ್ಯೆ

55% ಡೆಮಾಕ್ರಟಿಕ್ ಪಕ್ಷದ ಪರ ಇರುವ ಅರ್ಹ ಭಾರತೀಯ–ಅಮೆರಿಕ ಮತದಾರರ ಸಂಖ್ಯೆ

26% ರಿಪಬ್ಲಿಕನ್ ಪಕ್ಷದ ಪರ ಇರುವ ಅರ್ಹ ಭಾರತೀಯ–ಅಮೆರಿಕ ಮತದಾರರ ಸಂಖ್ಯೆ

(ಜೋ ಬೈಡನ್ ಅವರು ಅಧ್ಯಕ್ಷೀಯ ಚುನಾವಣಾ ಸ್ಪರ್ಧೆಯಿಂದ ಹಿಂದೆ ಸರಿಯುವ ಮೊದಲು ನಡೆಸಿದ ಸಮೀಕ್ಷೆ)

ಕಾರ್ನೇಜ್ ಎಂಡೊಮೆಂಟ್ ಸಮೀಕ್ಷೆ

61% ಕಮಲಾ ಪರ ಇರುವ ಭಾರತೀಯ–ಅಮೆರಿಕ ಮಹಿಳೆಯರ ಸಂಖ್ಯೆ

22% ಟ್ರಂಪ್ ಪರ ಇರುವ ಭಾರತೀಯ–ಅಮೆರಿಕ ಮಹಿಳೆಯರ ಸಂಖ್ಯೆ

53% ಕಮಲಾ ಪರ ಇರುವ ಭಾರತೀಯ–ಅಮೆರಿಕ ಪುರುಷರ ಸಂಖ್ಯೆ

22% ಟ್ರಂಪ್ ಪರ ಇರುವ ಭಾರತೀಯ–ಅಮೆರಿಕ ಪುರುಷರ ಸಂಖ್ಯೆ

(ಅಕ್ಟೋಬರ್ 3ರಂದು ನಡೆಸಿದ ಸಮೀಕ್ಷೆ)

'ಟ್ರುತ್ ಸೋಷಿಯಲ್' ಮೌಲ್ಯ ಏರಿಕೆ

ನ್ಯೂಯಾರ್ಕ್ (ಎಪಿ): ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ 'ಟ್ರುತ್ ಸೋಷಿಯಲ್' ಎಂಬ ಸಾಮಾಜಿಕ ಜಾಲತಾಣ ಕಂಪನಿಯು ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡಿದ್ದು, 10 ಬಿಲಿಯನ್ ಡಾಲರ್‌ನಷ್ಟಾಗಿದೆ (ಸುಮಾರು ₹8.40 ಸಾವಿರ ಕೋಟಿ). ಎಲಾನ್ ಮಸ್ಕ್ ಅವರ 'ಎಕ್ಸ್' ಮಾಧ್ಯಮದ ಮೌಲ್ಯಕ್ಕಿಂತಲೂ (9.4 ಬಿಲಿಯನ್ ಡಾಲರ್– ಸುಮಾರು ₹7.90 ಸಾವಿರ ಕೋಟಿ) 'ಟ್ರುತ್ ಸೋಷಿಯಲ್' ಕಂಪನಿಯ ಮೌಲ್ಯ ಅಧಿಕವಾಗಿದೆ.

ಟ್ರಂಪ್ ಚುನಾವಣೆಯಲ್ಲಿ ಸ್ಪರ್ಧಿಸಿದ ಬಳಿಕ ಈ ಏರಿಕೆ ಕಂಡು ಬಂದಿದೆ. 2021ರಲ್ಲಿ ಚುನಾವಣೆಯ ಫಲಿತಾಂಶದ ಬಳಿಕ ಅಮೆರಿಕದ 'ಕ್ಯಾಪಿಟಲ್' ಮೇಲೆ ಟ್ರಂಪ್ ಬೆಂಬಲಿಗರು ದಾಳಿ ನಡೆಸಿದ್ದರು. ಈ ದಾಳಿಗೆ ಟ್ರಂಪ್ ಅವರು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚೋದಿಸಿದ್ದರು. ಈ ಕಾರಣ ದಿಂದ ಟ್ರಂಪ್ ಅವರನ್ನು ಟ್ವಿಟ್ಟರ್ ಹಾಗೂ ಫೇಸ್‌ಬುಕ್‌ನಿಂದ ನಿಷೇಧಿಸಲಾಗಿತ್ತು. ಆ ಬಳಿಕ ಟ್ರಂಪ್ ಅವರು 'ಟ್ರುತ್ ಸೋಷಿಯಲ್'ಅನ್ನು ಆರಂಭಿಸಿದ್ದರು. ಈ ಕಂಪನಿಯ ಶೇ 57ರಷ್ಟು ಷೇರನ್ನು ಟ್ರಂಪ್ ಹೊಂದಿದ್ದಾರೆ.

'ಅಫ್ಗಾನ್ ಮಹಿಳೆಯರು ಜೋರಾಗಿ ಪ್ರಾರ್ಥನೆ ಮಾಡುವಂತಿಲ್ಲ'

ಇಸ್ಲಾಮಾಬಾದ್ (ಎಪಿ): ಅಫ್ಗಾನಿಸ್ತಾನ ಮಹಿಳೆಯರು ಜೋರಾಗಿ ಪ್ರಾರ್ಥನೆ ಮಾಡುವುದು ಮತ್ತು ಇತರ ಮಹಿಳೆಯರ ಮುಂದೆ ಕುರಾನ್ ಪಠಣ ಮಾಡುವುದನ್ನು ನಿರ್ಬಂಧಿಸಲಾಗಿದೆ ಎಂದು ತಾಲಿಬಾನ್‌ನ ಸಚಿವರೊಬ್ಬರು ಹೇಳಿದ್ದಾರೆ.

ಪೂರ್ವ ಲೋಗರ್ ಪ್ರಾಂತ್ಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಚಿವ ಖಾಲಿದ್ ಹನಾಫಿ ಅವರು, 'ವಯಸ್ಕ ಮಹಿಳೆಯು ಕುರಾನ್ ಪಠಿಸುವುದನ್ನು ನಿರ್ಬಂಧಿಸಲಾಗಿದೆ' ಎಂದು ಹೇಳಿದ್ದಾರೆ. 'ಅಲ್ಲಾಹು ಅಕ್ಬರ್', 'ಸುಬ್‌ಹಾನುಅಲ್ಲಾಹ್' ಎಂದು ಹೇಳುವುದು ಕೂಡಾ ಅಪರಾಧ ಎಂದು ಸಚಿವ ಖಾಲಿದ್ ತಿಳಿಸಿದ್ದಾರೆ.

ನಾಲ್ಕು ದಶಕಗಳ ಹಿಂದಿನ ಭೂ ವಿವಾದ

ಟೇಕ್ವಾಂಡೊ ಆಟಗಾರನ ಶಿರಚ್ಛೇದ

ಪ್ರಜಾವಾಣಿ ವಾರ್ತೆ

ಲಖನೌ: ನಾಲ್ಕು ದಶಕಗಳ ಹಿಂದಿನ ಭೂವಿವಾದಕ್ಕೆ ಸಂಬಂಧಿಸಿದಂತೆ, ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯಲ್ಲಿ ಬುಧವಾರ 17 ವರ್ಷದ ಟೇಕ್ವಾಂಡೊ ಆಟಗಾರನ ಶಿರಚ್ಛೇದ ಮಾಡಲಾಗಿದೆ.

ಕಬೀರುದ್ದೀನ್ ಗ್ರಾಮದ ಅನುರಾಗ್ ಯಾದವ್ ಹತ್ಯೆಯಾದವ. ಈತನ ತಾಯಿಯು, ಕೊಲೆಯ ಬಳಿಕ ಮಗನ ಕತ್ತರಿಸಿದ ತಲೆಯನ್ನು ತಾಸುಗಟ್ಟಲೆ ತನ್ನ ಮಡಿಲಲ್ಲಿಟ್ಟುಕೊಂಡು ರೋದಿಸಿದ ದೃಶ್ಯ ನೆರೆದಿದ್ದವರ ಮನಕಲುಕಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕೊಲೆಯಾದ ಅನುರಾಗ್ ದ್ವಿತೀಯ ಪಿಯುಸಿ ವಿದ್ಯಾರ್ಥಿ. ಟೇಕ್ವಾಂಡೊ ಆಟಗಾರನಾಗಿದ್ದ ಈತ ರಾಜ್ಯ–ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಪದಕ ಗೆದ್ದಿದ್ದಾನೆ.

ಹಲ್ಲುಜ್ಜುವಾಗ ಹತ್ಯೆ: ಗೌರಾಬಾದ್ ಶಾಹಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕುಬಿರುದ್ದೀನ್ ಗ್ರಾಮದಲ್ಲಿ ಎರಡು ಕುಟುಂಬಗಳ ನಡುವೆ ದಶಕಗಳಿಂದಲೂ ಭೂ ವಿವಾದವಿದೆ. ಬುಧವಾರ ಬೆಳಿಗ್ಗೆ ಅನುರಾಗ್ ತನ್ನ ಮನೆಯ ಮುಂಭಾಗ ಹಲ್ಲುಜ್ಜುತ್ತಿದ್ದಾಗ, ಲಾಲ್ಟಾ ಯಾದವ್ ಏಕಾಏಕಿ ಕತ್ತಿಯಿಂದ ಬಲವಾಗಿ ಬೀಸಿದ್ದಾನೆ. ಈ ಹೊಡೆತಕ್ಕೆ ಅನುರಾಗನ ರುಂಡ–ಮುಂಡ ಬೇರ್ಪಡೆಯಾಗಿವೆ. ಹತ್ಯೆಯ ನಂತರ ಲಾಲ್ಟಾ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲಾಲ್ಟಾನನ್ನು ಬಂಧಿಸುವಂತೆ ಆಗ್ರಹಿಸಿ ಸ್ಥಳೀಯರು ರಸ್ತೆ ತಡೆ ನಡೆಸಿದರು. ಪ್ರತಿಭಟನೆಯ ತೀವ್ರತೆ ಹೆಚ್ಚುತ್ತಿದ್ದಂತೆ ಹೆಚ್ಚುವರಿ ಪೊಲೀಸರು ಜಮಾಯಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದರು. ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಯೂ ಸ್ಥಳಕ್ಕೆ ಭೇಟಿ ನೀಡಿದ್ದರು.

'ಎರಡು ಕುಟುಂಬಗಳ ನಡುವಿನ ತುಂಡು ಭೂಮಿಯ ವಿವಾದವಿದು. ಜಿಲ್ಲಾ ನ್ಯಾಯಾಲಯದಲ್ಲಿ ಈ ಪ್ರಕರಣ ಬಾಕಿ ಉಳಿದಿದೆ. ಹತ್ಯೆಯ ಬಗ್ಗೆ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಲಾಗಿದೆ. ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರನ್ನು ತನಿಖೆಗೆ ನಿಯೋಜಿಸಲಾಗಿದ್ದು, ಮೂರು ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ' ಎಂದು ಜೌನ್‌ಪುರ ಜಿಲ್ಲಾಡಳಿತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಆರೋಪಿಯ ತಂದೆ ರಮೇಶ್ ಯಾದವ್‌ನನ್ನು ವಶಕ್ಕೆ ಪಡೆಯಲಾಗಿದೆ. ಲಾಲ್ಟಾ ಯಾದವ್ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ರಾಜ್ಯದಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಆಡಳಿತಾರೂಢ ಬಿಜೆಪಿ ನೇತೃತ್ವದ ಸರ್ಕಾರವು ದುರ್ಬಲವಾಗಿದೆ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ತೆಲಂಗಾಣ: 6ರಿಂದ ಜಾತಿಗಣತಿ

ಹೈದರಾಬಾದ್: ತೆಲಂಗಾಣದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವು ನ. 6 ರಿಂದ ಸಮಗ್ರ ಸಾಮಾಜಿಕ- ಆರ್ಥಿಕ ಮತ್ತು ಜಾತಿ ಸಮೀಕ್ಷೆಯನ್ನು ನಡೆಸಲು ಸಜ್ಜಾಗಿದೆ. ನವೆಂಬರ್ 30ರೊಳಗೆ ಸಮೀಕ್ಷೆಯನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಿದೆ.



ಕಳೆದ ವರ್ಷದ ಡಿಸೆಂಬರ್‌ನಲ್ಲಿ ನಡೆದ ವಿಧಾನ ಸಭಾ ಚುನಾವಣೆಯ ವೇಳೆ ನೀಡಿದ್ದ ಭರವಸೆಯನ್ನು ಈಡೇರಿಸಲು ಸರ್ಕಾರ ಮುಂದಾಗಿದೆ. 80 ಸಾವಿರ ಗಣತಿದಾರರು ತೆಲಂಗಾಣದ ಪ್ರತಿ ಮನೆಗೆ ಭೇಟಿ ನೀಡಿ ನಾಗರಿಕರ ಜಾತಿ ಮತ್ತು ಇತರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಬಗ್ಗೆ ದತ್ತಾಂಶ ಸಂಗ್ರಹಿಸಲಿದ್ದಾರೆ.

ಉಪಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ ಅವರು ಸಚಿವರಾದ ದುದಿಲ್ಲ ಶ್ರೀಧರ್ ಬಾಬು ಮತ್ತು ಪೊನ್ನಂ ಪ್ರಭಾಕರ್ ಅವರೊಂದಿಗೆ ಬುಧವಾರ ಶಿಕ್ಷಕರ ಸಂಘಗಳ ಜತೆಗೆ ಸಭೆ ನಡೆಸಿ ಅಭಿಪ್ರಾಯಗಳನ್ನು ಸಂಗ್ರಹಿಸಿದರು.

ಸಂಪುಟಕ್ಕೆ ಪ್ರಸ್ತಾವ ಸಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

‘ಕಬ್ಬಿಣ ಅದಿರು ಅರಣ್ಯ ಉತ್ಪನ್ನವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಲವು ರಾಜ್ಯಗಳಲ್ಲಿ ಕಬ್ಬಿಣದ ಅದಿರನ್ನು ಅರಣ್ಯ ಉತ್ಪನ್ನವೆಂದು ಪರಿಗಣಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಅರಣ್ಯ ಉತ್ಪನ್ನ ಎಂದು ಪರಿಗಣಿಸಲಾಗುತ್ತಿದೆ. ಈ ವ್ಯವಸ್ಥೆ ಬದಲಿಸಲು ಪ್ರಸ್ತಾವ ಸಲ್ಲಿಸಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಈ ಸಂಬಂಧ ಪ್ರಸ್ತಾವ ಮಂಡಿಸುವಂತೆ ಬುಧವಾರ ನಡೆದ ಗಣಿ, ಭೂವಿಜ್ಞಾನ ಹಾಗೂ ಅರಣ್ಯ ಇಲಾಖೆ ಸಭೆಯಲ್ಲಿ ಅವರು ಗಣಿ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

‘ನಮ್ಮ ರಾಜ್ಯದಲ್ಲಿ ಮಾತ್ರ ಅರಣ್ಯ ಉತ್ಪನ್ನ ಎಂದು ಪರಿಗಣಿಸುತ್ತಿರುವುದರಿಂದ [illegible] ಚೆಕ್‌ಪೋಸ್ಟ್‌ಗಳಲ್ಲಿ ಸಮಸ್ಯೆ ಆಗುತ್ತಿದೆ’ ಎಂದು ಸಭೆಯಲ್ಲಿ ಗಣಿ ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿಯವರ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಯವರು, ‘ಈ ಕುರಿತು ಬೇರೆ ರಾಜ್ಯಗಳಲ್ಲಿರುವ ಮಾಹಿತಿ ತರಿಸಿ, ಅಧ್ಯಯನ ನಡೆಸಿ, ಸಂಪುಟಕ್ಕೆ ಪ್ರಸ್ತಾವ ಮಂಡಿಸಿ’ ಎಂದು ಹೇಳಿದರು.

‘ಅರಣ್ಯ ಇಲಾಖೆ ಅಧಿಕಾರಿಗಳು ರಾಜ್ಯದ ಹಿತಾಸಕ್ತಿ ಮತ್ತು ಅಭಿವೃದ್ಧಿಗೆ ಧಕ್ಕೆ ಮಾಡಿದರೆ ಸಹಿಸುವುದಿಲ್ಲ. ನಿಯಮ ಉಲ್ಲಂಘಿಸದೇ ಕ್ರಿಯಾಶೀಲತೆ ತೋರಬೇಕು’ ಎಂದು ಅವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಗಣಿ ಇಲಾಖೆಯು ಅರಣ್ಯ ಇಲಾಖೆಯೊಂದಿಗಿನ ಗೊಂದಲಗಳನ್ನು ನಿವಾರಿಸಿಕೊಂಡು ರಾಜಸ್ವ ಸಂಗ್ರಹಣೆಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಗಣಿ ಇಲಾಖೆ ರಾಜಸ್ವ ಸಂಗ್ರಹದ ಪ್ರಗತಿಯು ಕಳೆದ ವರ್ಷ ಇದೇ ಅವಧಿಯಲ್ಲಿ ಶೇ 54 ರಷ್ಟು ಇತ್ತು. ಪ್ರಸಕ್ತ ಸಾಲಿನಲ್ಲಿ ಶೇ 46 ರಷ್ಟು ಮಾತ್ರ ಇದೆ. ರಾಜಸ್ವ ಸಂಗ್ರಹಣೆಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರು.

ಈ ಸಾಲಿನಲ್ಲಿ ರಾಜಸ್ವ ಸಂಗ್ರಹಣೆ ಗುರಿ ₹9,000 ಕೋಟಿ ಇದ್ದು, ಅಕ್ಟೋಬರ್ ವರೆಗಿನ ರಾಜಸ್ವ ಸಂಗ್ರಹ ₹4,070.22 ಕೋಟಿ ಆಗಿದೆ. ಗಣಿಗಾರಿಕೆಗೆ ಸಂಬಂಧಿಸಿದಂತೆ ಗಣಿ ಇಲಾಖೆ ಗುರುತಿಸಿರುವ ಬ್ಲಾಕ್‌ಗಳ ಮಾಹಿತಿ ಪಡೆದು ರಾಜಸ್ವ ಸಂಗ್ರಹ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದೂ ಸಿದ್ದರಾಮಯ್ಯ ಹೇಳಿದರು.

ಸಭೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಗಣಿ ಇಲಾಖೆ ಕಾರ್ಯದರ್ಶಿ ವಿಪುಲ್ ಬನ್ಸಾಲ್ ಪಾಲ್ಗೊಂಡಿದ್ದರು.

ನರಕದ ಕತ್ತಲಿಗೆ ಬೆಳಕಿನ ಸ್ವರ್ಗ

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಸಂಸ್ಕೃತಿಯಲ್ಲಿ ಪ್ರತಿದಿನವೂ ಹಬ್ಬವೇ. ‘ಇಡಿಯ ಜೀವನವೇ ಹಬ್ಬ’ ಎಂಬ ಆಶಯ ಈ ಉಮೇದಿನಲ್ಲಿದೆ. ಹಬ್ಬಗಳ ಮೂಲದಲ್ಲಿರುವ ತಾತ್ವಿಕತೆ ನಮಗೆ ಅರ್ಥವಾದರೆ ಆಗ ನಮ್ಮ ಬದುಕಿನಲ್ಲೂ ಅರ್ಥವನ್ನು ತುಂಬಿಕೊಂಡಂತೆ; ಮಾತ್ರವಲ್ಲ, ಹಬ್ಬಗಳ ಆಚರಣೆಗಳೂ ಸಾರ್ಥಕತೆ ಒದಗೀತು. ಹಬ್ಬಗಳ ಕಲ್ಪನೆ ಮತ್ತು ಕಲಾಪಗಳಲ್ಲಿ ನಮ್ಮ ನೆಲದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಂಕೇತಗಳು ಅಡಗಿಕೊಂಡಿರುತ್ತವೆ; ಅವನ್ನು ಪುನಃ ಸಾಕ್ಷಾತ್ಕರಿಸಿಕೊಳ್ಳುವ ಸಂಭ್ರಮವೇ ಹಬ್ಬಗಳ ದಿಟವಾದ ಉದ್ದೇಶ.

ಹಬ್ಬಗಳು ಹೇಳಲು ಹೊರಟಿರುವುದೇ ಜೀವನದ ಅರ್ಥವಂತಿಕೆಯನ್ನು. ಆದರೆ ಸತ್ಯ, ಶಿವ, ಸುಂದರಗಳ ಸ್ವರೂಪವಾಗಿರುವ ಜೀವನಪಥವೇ ನಮ್ಮ ಇಂದಿನ ಮಂದಾಕ್ಷಿಗಳಿಗೆ ಕಾಣದಂತಾಗಿದೆ. ದೀಪಾವಳಿಯ ಒಂದೊಂದು ದಿನದ ಆಚರಣೆಯಲ್ಲೂ ಅಡಗಿರುವುದು ನಮ್ಮ ಜೀವನವನ್ನು ಸಾರ್ಥಕವಾಗಿಸುವ ಉಲ್ಲಾಸ–ಉತ್ಸಾಹಗಳು, ಆಚಾರ–ವಿಚಾರಗಳು.



ಸಾಮಾನ್ಯ ಅರ್ಥದಲ್ಲಿ ಕತ್ತಲು-ಬೆಳಕುಗಳನ್ನು ಪರಸ್ಪರ ವಿರೋಧಿ ಎಂದು ಸಮೀಕರಿಸುತ್ತೇವೆ. ಕತ್ತಲು ಎಂದರೆ ಸುಳ್ಳು, ದುಷ್ಟತನ, ದುಃಖ, ಭಯ, ಬಡತನ; ಬೆಳಕು ಎಂದರೆ ಸತ್ಯ, ಒಳ್ಳೆಯತನ, ಸುಖ, ಧೈರ್ಯ, ಸಿರಿತನ ಎಂಬ ಬಿಂಬಗಳಿಗೆ ತೊಡಗುತ್ತೇವೆ. ಆದರೆ ಇಂಥ ವಿವರಗಳು ಸಾಪೇಕ್ಷ; ಯಾವುದು ಬೆಳಕು, ಯಾವುದು ಕತ್ತಲು – ಎಂದು ನಿರ್ಧರಿಸುವುದು ಅಷ್ಟು ಸುಲಭವಲ್ಲ. ನಮ್ಮ ಬದುಕಿನ ಬೆಳಕು-ಕತ್ತಲೆಗಳು ನಮ್ಮ ವಿವೇಕವನ್ನೇ ಅವಲಂಬಿಸಿರುತ್ತವೆ ಎಂಬ ಹೊಣೆಗಾರಿಕೆಗೆ ನಮ್ಮನ್ನು ಸಿದ್ಧಪಡಿಸುವುದೇ ದೀಪಾವಳಿಯ ಸಂದೇಶ.

ಕಾಮರೂಪ ಎಂಬ ದೇಶದಲ್ಲಿ ನರಕ ಎಂಬ ರಾಜನು ಆಳುತ್ತಿದ್ದನಂತೆ. ಇವನು ಹದಿನಾರು ಸಾವಿರ ಸುಂದರಿಯರನ್ನು ತನ್ನ ಸೆರೆಮನೆಯಲ್ಲಿ ಬಂಧಿಸಿದ್ದನಂತೆ. ಶ್ರೀಕೃಷ್ಣನು ಅವನನ್ನು ಸಂಹರಿಸಿ, ಅವರನ್ನು ಬಂಧಮುಕ್ತಗೊಳಿಸಿದ. ಈ ದಿನವೇ ನರಕಚತುರ್ದಶಿ.

‘ಕಾಮ’ ಎಂದರೆ ಬಯಕೆಗಳು. ನಾವು ‘ಕಾಮರೂಪ’ದಲ್ಲಿರುವ ‘ಕಾಮರೂಪಿ’ಗಳೇ ಆಗಿದ್ದೇವೆ. ನಾವು ಬಯಕೆಗಳನ್ನಷ್ಟೆ ನೆಚ್ಚಿಕೊಂಡರೆ ಆಗ ನಮ್ಮ ಬದುಕು ನರಕವಾಗುವುದು ಸಹಜವೇ. ನರರನ್ನು ಪೀಡಿಸುವುದೇ ನರಕ. ನರಕಾಸುರನು ಭೂದೇವಿಯ ಮಗನಂತೆ. ಭೂಮಿ ಎನ್ನುವುದು ಲೌಕಿಕ ಆಮಿಷಗಳನ್ನು ಪ್ರತಿನಿಧಿಸುತ್ತದೆ. ಸ್ವಾರ್ಥದ ಸೆಳೆತಗಳೇ ಅಲ್ಲವೆ ನಮ್ಮನ್ನು ಜೀವನದಲ್ಲಿ ಅಡ್ಡದಾರಿ ಹಿಡಿಯುವಂತೆ ಉತ್ತೇಜಿಸುವುದು? ಹೆಣ್ಣನ್ನು ಬಂಧಿಸಿ, ಅವಳನ್ನು ಬಲದ ನೆರವಿನಿಂದಲೂ, ಭಯದ ಬೆಂಬಲದಿಂದಲೂ ವಶಪಡಿಸಿಕೊಳ್ಳಲು ಹವಣಿಸುವುದು ಎಂದರೆ ನಮ್ಮ ಬಲವನ್ನು ದೌರ್ಜನ್ಯಕ್ಕೆ ಬಳಸಿಕೊಳ್ಳುವಂತೆ; ನಮ್ಮ ಬುದ್ಧಿಯನ್ನು ದುಷ್ಟತನಕ್ಕೆ ಒಪ್ಪಿಸಿದಂತೆ; ನಮ್ಮ ಜೀವನದ ಶಕ್ತಿ–ಸೌಂದರ್ಯಗಳನ್ನೇ ಭ್ರಷ್ಟಗೊಳಿಸಿಕೊಂಡಂತೆ. ಶ್ರೀಕೃಷ್ಣ ಅಂಥ ದುಷ್ಟತನಗಳ ‘ಪುರುಷಾಕಾರ’ವನ್ನು ಸಂಹರಿಸಿ, ನಮ್ಮ ಜೀವನದ ‘ಶಕ್ತಿ’ಗೆ ಸೊಗಸು, ಸಂತೋಷ, ಸ್ವಾತಂತ್ರ್ಯ, ಆಶ್ರಯ ಮತ್ತು ನೆಮ್ಮದಿಯ ಬೆಳಕನ್ನು ಕಾಣಿಸಿದ ಪರ್ವದಿನವೇ ನರಕಚತುರ್ದಶಿ.

ಜೈಲು ಶಿಕ್ಷೆ ರದ್ದು ಕೋರಿ ಹೈಕೋರ್ಟ್ ಮೊರೆಹೋದ ಖಾರದಪುಡಿ ಮಹೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಲೆಕೇರಿ ಬಂದರಿನಲ್ಲಿ ಅರಣ್ಯ ಇಲಾಖೆ ಸಂಗ್ರಹಿಸಿದ್ದ ಕಬ್ಬಿಣದ ಅದಿರು ಕಳವು ಮತ್ತು ರಫ್ತು ಮಾಡಿದ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿರುವ ‘ಮೆಸರ್ಸ್ ಶ್ರೀ ಲಕ್ಷ್ಮಿ ವೆಂಕಟೇಶ್ವರ ಮಿನರಲ್ಸ್’ ಪಾಲುದಾರ ಕೆ.ಮಹೇಶ್ ಕುಮಾರ್ ಅಲಿಯಾಸ್ ಖಾರದಪುಡಿ ಮಹೇಶ್ ತಮ್ಮನ್ನು ಪ್ರಕರಣದಿಂದ ಖುಲಾಸೆಗೊಳಿಸುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತ ಅರ್ಜಿಯು ಬುಧವಾರ ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿತ್ತು. ಅರ್ಜಿಗೆ ಸಂಬಂಧಿಸಿದಂತೆ ಕಚೇರಿಯ ಆಕ್ಷೇಪಣೆಗಳನ್ನು ಸರಿಪಡಿಸುವಂತೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಪ್ರಕರಣದಲ್ಲಿ ಮಹೇಶ್‌ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಭಾರತೀಯ ದಂಡ ಸಂಹಿತೆ–1860ರ ವಿವಿಧ ಕಲಂಗಳಡಿ ಗರಿಷ್ಠ ಏಳು ವರ್ಷಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿ ಇದೇ 26ರಂದು ತೀರ್ಪು ನೀಡಿತ್ತು.

ಕರ್ನಾಟಕ ರಾಜ್ಯ ಪೊಲೀಸ್

ಪೊಲೀಸ್ ಕಮೀಷನರ್ ರವರ ಕಛೇರಿ ಮೈಸೂರು ನಗರ

ದೂರವಾಣಿ ಸಂಖ್ಯೆ:0821–2418300, 2418304, 2418575

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮೈಸೂರು ನಗರ ಪೊಲೀಸ್ ಕಮೀಷನರೇಟ್ ಘಟಕದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಒಂದು ವರ್ಷ ಅವಧಿಗೆ ವಾರ್ಷಿಕ ನಿರ್ವಹಣೆಗೆ ಕೈಗೊಳ್ಳುವ ಸಲುವಾಗಿ ಆನ್‌ಲೈನ್ ಟೆಂಡರ್ ಅನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ.ಸಂ.1. ಟೆಂಡರ್ ಸಂಖ್ಯೆ ಮತ್ತು ದಿನಾಂಕ: KSP/2024-25/SE0044 Dt.28/10/2024 ಅಂದಾಜು ಮೌಲ್ಯ: 94,40,000/-

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.Karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಪೊಲೀಸ್ ಆಯುಕ್ತರ ಪರವಾಗಿ, ಮೈಸೂರು ನಗರ.

DIPR/DDMYS- 741/KSMCA-506/2024-25

ಪತ್ರಿಕಾ ಪ್ರಕಟಣೆ

2024–25ನೇ ಸಾಲಿನಲ್ಲಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಯಲ್ಲಿ **“ಭದ್ರ ಹುಲಿ ಸಂರಕ್ಷಣಾ ಪ್ರತಿಷ್ಠಾನ”** ನಿಧಿಯಡಿ ಮುತ್ತೋಡಿ ವನ್ಯಜೀವಿ ವಲಯದ ಸೀಗೇಖಾನ್ ಅರಣ್ಯ ವಿಶ್ರಾಂತಿ ಗೃಹ ಕಟ್ಟಡ ದುರಸ್ಥಿ ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ಮೊತ್ತ ರೂ. 12.705 ಲಕ್ಷಗಳ ಕಾಮಗಾರಿಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು 06–11–2024ರವರೆಗೆ ನಿಗಧಿಪಡಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಅರಣ್ಯ ಇಲಾಖೆಯಲ್ಲಿ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿರುವ ಅರ್ಹ ಹಾಗೂ ಪಿ.ಡಬ್ಲ್ಯೂ.ಡಿ 1ನೇ ಮತ್ತು 2ನೇ ದರ್ಜೆ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿರುವ ಅರ್ಹ ಗುತ್ತಿಗೆದಾರರು ಭಾಗವಹಿಸಿ ತಮ್ಮ ಕನಿಷ್ಠ ಟೆಂಡರ್ ದರಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲದಲ್ಲಿ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕ್ಷೇತ್ರ ನಿರ್ದೇಶಕರು
ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು

TNPL TAMILNADU NEWSPRINT AND PAPERS LIMITED

Kagithapuram - 639 136. Karur Dist. Tamil Nadu.
Ph.: 04324-277001 (10 Lines). Email: purchase.recycle@tnpl.co.in

NOTICE INVITING TENDER

Tender No.	Material Description	Due date
242513 004162	Procurement of 1000 MT ± 5% Office Waste Paper (White Records) in Bale form from Karnataka for TNPL Unit-I at Kagithapuram.	08.11.2024

Corrigendum if any will be issued in TNPL Website & NIC Portal only. Detailed Terms & conditions, tender fee, EMD etc., are available in the tender document which can be downloaded from websites : **www.tnpl.com / https://tntenders.gov.in/nicgep/app**

DIPR/4650/Tender/2024 *TNPL - Maker of bagasse based eco-friendly Paper*

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ– 11/2024–25/2497 ದಿನಾಂಕ: 29–10–2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–1&2) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08–11–2024 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 11–11–2024 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 12–11–2024 17.00 ಗಂಟೆವರೆಗೆ

ಕಾಮಗಾರಿಯ ಹೆಸರು: **H/Ac 5054 MDR Improvements (Foot Bridge) During 2024-25** ವರ್ಕ ಇಂಡೆಂಟ್: **(1) PWD/2024-25/BG/WORK_INDENT14676 (2) PWD/2024-25/BG/WORK_INDENT11977 (3) PWD/2024-25/BG/WORK_INDENT11965 (4) PWD/2024-25/BR/WORK_INDENT15442**

(ಕೆಡಬ್ಲು–1&2) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ https://kppp.karnataka.gov.in ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/ADK/KSMCA/461/24-25 dt.30.10.2024

TNPL TAMILNADU NEWSPRINT AND PAPERS LIMITED

Unit - 1 : Kagithapuram - 639 136. Karur Dist. Tamil Nadu. Ph.: 04324 - 277001 (10 Lines)
Unit - 2 : Mondipatti - 621 306, Trichy District, Tamil Nadu, Ph.: 04332 - 261600

NOTICE INVITING TENDERS

Tender No.	Scope of work	Due date
242513 004167	Procurement of Eucalyptus with bark pulpwood from open market sources of Karnataka to TNPL Unit - I at Kagithapuram.	13.11.2024
242523 002637	Procurement of Eucalyptus with bark pulpwood from open market sources of Karnataka to TNPL Unit - II at Mondipatti.	12.11.2024
Email	242513004167 ; 242523002637 - purchase.wood@tnpl.co.in	

Corrigendum if any will be issued in TNPL Website only. Detailed requirements, Period, Terms & conditions, Tender fee, EMD, etc., are available in the tender document which can be downloaded from website : **www.tnpl.com**

DIPR/4649/Tender/2024 *TNPL - Maker of bagasse based eco-friendly Paper*

ಪೊಲೀಸ್ ಅಧೀಕ್ಷಕರು, ವೈರಲೆಸ್‌ರವರ ಕಛೇರಿ

ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು, 560001
ದೂರವಾಣಿ : +91–80–22864626, ಇ–ಮೇಲ್: spwireless@ksp.gov.in

ಟೆಂಡರ್ ಸಂಖ್ಯೆ: KSP/2024-25/IND00228 ದಿನಾಂಕ: 29.10.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ರಾಜ್ಯದ ಪೊಲೀಸ್ ಇಲಾಖೆಗೆ ಅವಶ್ಯವಿರುವ ಡ್ರೋನ್ (Unmanned Aerial Vehicle) ಉಪಕರಣಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ. 400.00 ಲಕ್ಷಗಳು, ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: **13.11.2024 ಸಮಯ ಬೆಳಿಗ್ಗೆ 11.30 ಗಂಟೆ** ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **02.12.2024, ಸಂಜೆ 16.00 ಗಂಟೆ**ಗಳು. ಇತರೆ ಮಾಹಿತಿಯನ್ನು **https://eproc.karnataka.gov.in** ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಪೊಲೀಸ್ ಅಧೀಕ್ಷಕರು, ವೈರ್‌ಲೆಸ್,
ಬೆಂಗಳೂರು

ವಾಸಾಸಂಇ/ವಾ.ಪ್ರ./2848/2024–25

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ–ಮೇಲ್:zped_cta@yahoo.com ದೂರವಾಣಿ ಸಂ:08194–222372

ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2024–25/1798
ದಿನಾಂಕ: 29.10.2024

ಟೆಂಡರ್ ಪ್ರಕಟಣೆ

(Through e-Procurement Portal Only)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಜಿ–1 ನಿಬಂಧನೆಗೊಳಪಟ್ಟಂತೆ ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವ್ಯಾಪ್ತಿಯ 2023–24ನೇ ಸಾಲಿನ ಮಹಾತ್ಮಗಾಂಧಿ ನರೇಗಾ ಯೋಜನೆಯಡಿಯಲ್ಲಿ ಅನುಮೋದನೆಯಾದ 09 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ. 7.00 ಲಕ್ಷ ಗರಿಷ್ಠ ರೂ. 7.13 ಲಕ್ಷಗಳು ಒಟ್ಟು ರೂ: 63.26 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:–

(1) ಮಾಹಿತಿ ಪಡೆಯಲು ಅಂತಿಮ ದಿನಾಂಕ: 04.11.2024 ರ : ಸಮಯ 11.00
(2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 05.11.2024 ರ : ಸಮಯ 16.00
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.11.2024 ರ : ಸಮಯ 16.01
(4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.11.2024 ರ : ಸಮಯ 16.02

ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.339:DIPR/CTA/KSMCA/2024-25

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಕರ್ನಾಟಕ ಸರ್ಕಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂ. ಡಿವೈಇಎಸ್/ತಾಂಶಾ/ಕ್ರೀಯೋ/154/2024–25 ದಿನಾಂಕ : 30.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವಿಷಯ: ಉಪ–ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಮೈಸೂರಿನ ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ರಸ್ತೆಗಳಿಗೆ ಮರುಡಾಂಬರೀಕರಣ ಕಾಮಗಾರಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಮೈಸೂರಿನ ಚಾಮುಂಡಿ ವಿಹಾರ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ರಸ್ತೆಗಳಿಗೆ ಮರುಡಾಂಬರೀಕರಣ. ಟೆಂಡರ್‌ಗಿಟ್ಟ ಮೊತ್ತ : ರೂ 38,74,585/–, ಇಎಂಡಿ ಮೊತ್ತ : ರೂ.77,492.00. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 06.11.2024 ಸಮಯ : 16.00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 07.11.2024 ಸಮಯ : 16.30 ಗಂಟೆ. ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/CP/2879/Zen/2024-25

ಕರ್ನಾಟಕ ಸರ್ಕಾರ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, (ಬನಶಂಕರಿದೇವಸ್ಥಾನದ ಹತ್ತಿರ) ಬನಶಂಕರಿ ಬೆಂಗಳೂರು – 560 070

ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ-3/ಟೆಂಡರ್/28/2024-25 ದಿ: 30.10.2024

ಟೆಂಡರ್ ಪ್ರಕಟಣೆ ನೋಟೀಸ್

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ ವಿವೇಕ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 13.11.2024ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

DIPR/CP/AAPL/RO2854/24-25

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

ಶ್ರೀ ಡಿ.ದೇವರಾಜ ಅರಸು ಬಡಾವಣೆ, ‘ಎ’ ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06

ನಂ:ದಾಹನಪ್ರಾ:ಲೆಶಾ:ನಿತೇಕೊಪ್ರ:2024–25/1895 ದಿನಾಂಕ:29–10–2024.

ಕೊಟೇಷನ್ ಪ್ರಕಟಣೆ

ವಿಷಯ: ಬ್ಯಾಂಕಿನಲ್ಲಿ ಮುದ್ದತಿ ಠೇವಣಿ ಮಾಡುವ ಕುರಿತು.

ಕ್ರ ಸಂ	ಸಂಗ್ರಹಣೆ ಮಾಡಬೇಕಾದ ವಿವರ	ಕೋಟೆಷನ್ ನೀಡಲು ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಕೋಟೇಷನ್ ಸಲ್ಲಿಸಲು ಕೊನೆಯ ದಿನಾಂಕ
1	ನಿಧಿ – I	900–00	11–11–2024ರ ಸಂಜೆ 4.30 ಗಂಟೆವರೆಗೆ
2	ನಿಧಿ – II	400–00	
3	ನಿಧಿ – III	500–00	
4	ನಿಧಿ –V	2,000–00	
	ಒಟ್ಟು	3,800–00	

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ:– ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ ಪ್ರಿಬಿಡ್ ಸಭೆ ದಿನಾಂಕ ಮತ್ತು ಸಮಯ
Pre-Bid Meeting Date : 04-11-2024 @ 11.00AM DHUDA
ಸೂಚನೆ : ಪ್ರಾಧಿಕಾರವು ಯಾವುದೇ ಹಂತದಲ್ಲಿ ರದ್ದತಿ ಮಾಡುವ ಅಧಿಕಾರವಿರುತ್ತದೆ. ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಮಾತ್ರ ಅವಕಾಶವಿರುತ್ತದೆ.

ಸಹಿ/– ಆಯುಕ್ತರು, ದಾ–ಹ
ವಾಸಾಇ/ದಾವಣಗೆರೆ/456/ಕೆಎಸ್‌ಎಂಸಿಎ/2024–25 ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ),

18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012

ಸಂಖ್ಯೆ: DPUE-EST10OTH/211/2024(1560005) ದಿನಾಂಕ: 30.10.2024

ಟೆಂಡರ್ ನೋಟಿಫಿಕೇಷನ್

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇಲ್ಲಿನ ಕೆಲಸ ಕಾರ್ಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರೊಂದಿಗೆ 08 ಹವಾ ನಿಯಂತ್ರಣ ವಾಹನಗಳನ್ನು ಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲು ಆಸಕ್ತ ಸಂಸ್ಥೆಗಳಿಂದ ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್ ಸಂಖ್ಯೆ	ಮೊತ್ತ ರೂ.
01	ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇಲ್ಲಿನ ಕೆಲಸ ಕಾರ್ಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರೊಂದಿಗೆ 08 ಹವಾ ನಿಯಂತ್ರಣ ವಾಹನಗಳ ಸೇವೆ ಒದಗಿಸುವ ಬಗ್ಗೆ	PUED/2024-25/SE0012	40,32,000/-

ಪೂರ್ಣ ಟೆಂಡರ್ ವಿವರಗಳನ್ನು ಅಂತರ್ಜಾಲ **https://kppp.karnataka.gov.in** ನಲ್ಲಿ ವೀಕ್ಷಿಸಬಹುದಾಗಿದ್ದು, ಇ–ಟೆಂಡರ್ ಸಲ್ಲಿಸಲು ಪ್ರಾರಂಭ **ದಿನಾಂಕ: 29.10.2024**. ಕೊನೆಯ **ದಿನಾಂಕ: 12.11.2024 ಸಂಜೆ 5.30 ಗಂಟೆ ಆಗಿದೆ.** ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ್ನು ಹಾಗೂ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ).

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತಿಪಟೂರು ಉಪ ವಿಭಾಗ (ಪ್ರಾದೇಶಿಕ),

ವಿದ್ಯಾನಗರ, ಕಲ್ಪತರು ಕಾಲೇಜು ಎದುರ, ಬಿ.ಹೆಚ್.ರಸ್ತೆ ತಿಪಟೂರು–572201
ಇ–ಮೇಲ್: acftipaturu@gmail.com

ಸಂ: ಸ.ಅ.ಸಂ/ತಿಉವಿ/ಕೆ.ಎಂ.ಇ.ಆರ್.ಸಿ/ಇ–ಟೆಂಡರ್/ಸಿಆರ್–12/2024–25
ದಿನಾಂಕ: 29.10.2024

ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿನಲ್ಲಿ ಕೆ.ಎಂ.ಇ.ಆರ್.ಸಿ ಯೋಜನೆಯಡಿ ವಿಭಾಗದ ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ಬುಕ್ಕಾಪಟ್ಟಣ ವಲಯದಲ್ಲಿ ಮುಂಗಡ ಕಾಮಗಾರಿ, , ಸಸಿ ಬೆಳೆಸುವ ಕಾಮಗಾರಿ, ಜಾನುವಾರು ನಿರೋಧಕ ಕಂದಕ ತೆಗೆಯುವ, ಬೆಂಕಿ ಕಾವಲುಗಾರರ ನಿಯೋಜನೆ, ಪರಕ್ಯೂಲೇಷನ್ ಟ್ರಂಚ್ ತೆಗೆಯುವ ಕಾಮಗಾರಿ, ಬೆಂಕಿ ರೇಖೆಗಳ ನಿರ್ವಹಣೆ, ನೆಡುತೋಪು ನಿರ್ವಹಣಾ ಕಾಮಗಾರಿ, ಸಿಂಗ್ಲಿಂಗ್/ಫ್ರೀಯಿಂಗ್ ಆಫ್ ವಿಲ್ಡಿಂಗ್ಸ್ ಮತ್ತು ಸಾಸರ್ ಭಾರವ್ ಫಾರ್ಮೇಷನ್ ಹಾಗೂ ಇನ್ನಿತರೆ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು 2024–25ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೋಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ–ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 76 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.71,84,000/– ಗಳಿಗೆ ಇ.ಎಂ.ಡಿ ಮೊತ್ತ ರೂ.1,43,680/– ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.1,16,000/–ಗಳಿಗೆ ಇ.ಎಂ.ಡಿ. ಮೊತ್ತ ರೂ.2900/–ಗಳಾಗಿರುತ್ತದೆ. ದಿನಾಂಕ: 08–11–2024ರ ಅಪರಾಹ್ನ 3–00ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ: 11–11–2024ರಂದು ಅಪರಾಹ್ನ 3–00ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ದಿನಾಂಕ: 08–11–2024ರಂದು ಯಾವುದೇ ಕಾಮಗಾರಿಗಳಿಗೆ ಟೆಂಡರ್‌ಗಳು ಬಾರದೇ ಇದ್ದಲ್ಲಿ ಇದೇ ಷರತ್ತುಗಳಿಗೊಳಪಟ್ಟು ಎರಡನೇ ಬಾರಿಗೆ ದಿನಾಂಕ 11–11–2024ಕ್ಕೆ ನಿಗಧಿ ಪಡಿಸಿರುತ್ತದೆ. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯ ಬಹುದಾಗಿದೆ. ವೆಬ್‌ಸೈಟ್ ವಿಳಾಸ– http://www. kppp.karnataka. gov.in

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ತಿಪಟೂರು ಉಪ ವಿಭಾಗ, ತಿಪಟೂರು.

DIPR/TUM/409/KSMCA/2024-25

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ನಿರ್ದೇಶಕರ ಕಛೇರಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012.

ಸಂಖ್ಯೆ: DPUE-EST10OTRS/8/2022(718161) ದಿನಾಂಕ:30.10.2024

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಹೊರಗುತ್ತಿಗೆ ಆಧಾರದ ಮೇರೆಗೆ ಪ್ರೋಗ್ರಾಮರ್, ಡಾಟಾ ಎಂಟ್ರಿ ಆಪರೇಟರ್ಸ್, ಗ್ರೂಪ್–ಡಿ ನೌಕರರು, ಸ್ವಚ್ಛತಾ ಕೆಲಸಗಾರರು, ಸೆಕ್ಯೂರಿಟಿ ಗಾರ್ಡ್ ಹಾಗೂ ವಾಹನ ಚಾಲಕರ ಸೇವೆಯನ್ನು ಪಡೆಯಲು ಆಸಕ್ತ ಸಂಸ್ಥೆಗಳಿಂದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

(1) ವಿವರಗಳು: ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಹೊರಗುತ್ತಿಗೆ ಆಧಾರದ ಮೇರೆಗೆ ಪ್ರೋಗ್ರಾಮರ್, ಡಾಟಾ ಎಂಟ್ರಿ ಆಪರೇಟರ್ಸ್, ಗ್ರೂಪ್–ಡಿ ನೌಕರರು, ಸ್ವಚ್ಛತಾ ಕೆಲಸಗಾರರು, ಸೆಕ್ಯೂರಿಟಿ ಗಾರ್ಡ್ ಹಾಗೂ ವಾಹನ ಚಾಲಕರ ಸೇವೆಯನ್ನು ಒದಗಿಸುವ ಬಗ್ಗೆ. ಟೆಂಡರ್ ಸಂಖ್ಯೆ: **PUED/2024-25/SE0011**. ಮೊತ್ತ: **ರೂ.1,50,00,000/–**. ಪೂರ್ಣ ಟೆಂಡರ್ ವಿವರಗಳನ್ನು ಅಂತರ್ಜಾಲ:**https://kppp.karnataka.gov.in** ನಲ್ಲಿ ವೀಕ್ಷಿಸಬಹುದಾಗಿದ್ದು, ಇ–ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: **29.10.2024** ಮತ್ತು ಕೊನೆಯ **ದಿನಾಂಕ:12.11.2024 ಸಂಜೆ 5.30 ಗಂಟೆ ಆಗಿದೆ.** ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ್ನು ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ, ಮಹದೇವಪುರ ವಿಭಾಗ, ನಂ.97/2ಡಿ, 2ನೇ ಮಹಡಿ, ಕೃಷ್ಣಶೈಣೆ ಬಿಲ್ಡಿಂಗ್, ಮಾರತ್ತಹಳ್ಳಿ ಬ್ರಿಡ್ಜ್ ಹತ್ತಿರ, ಮಾರತ್ತಹಳ್ಳಿ, ಬೆಂಗಳೂರು – 560037.

ಸಂಖ್ಯೆ: ಕಾಅ/ರಮೂಸೌ–ಮಪು/ಟೆಂಡರ್/02/2024–25 ದಿನಾಂಕ: 30–10–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಮಹದೇವಪುರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಹೆಣ್ಣೂರು – ಬಾಗಲೂರು ಮುಖ್ಯರಸ್ತೆಯಿಂದ ಗೆದ್ದಲಹಳ್ಳಿ ಮೂಲಕ ಬೈರತಿ ಗ್ರಾಮಕ್ಕೆ ಬ್ಲೆಸಿಂಗ್ ಗಾರ್ಡನ್ ಮುಖ್ಯರಸ್ತೆ (24.0 ಮೀಟರ್ ರಸ್ತೆ) ವಿಸ್ತರಣೆ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 671.41 (ಜಿ.ಎಸ್.ಟಿ ಹೊರತುಪಡಿಸಿ), ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 1,00,000/– ಇ–ಪಾವತಿ ಮೂಲಕ ಮತ್ತು ರೂ. 9,07,250/– ಬಿಡ್ ಡಾಕ್ಯೂಮೆಂಟ್‌ನಂತೆ ಇ–ಬ್ಯಾಂಕ್ ಗ್ಯಾರಂಟಿ ಮೂಲಕ.**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **04–11–2024 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **15–11–2024 ರಂದು 15.30 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ರಸ್ತೆ ಮೂಲ ಸೌಕರ್ಯ)** ಇಲ್ಲಿ ನಡೆಯುವುದು. 3) ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **25–11–2024 ರಂದು 16.00 ಗಂಟೆಗೆ** ಅಥವಾ ಮುಂಚಿತವಾಗಿ. 4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **26–11–2024 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ – ಮಹದೇವಪುರ ವಿಭಾಗ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲ ಸೌಕರ್ಯ – ಮಹದೇವಪುರ ವಿಭಾಗ, ಬಿಬಿಎಂಪಿ.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಚಾಮರಾಜನಗರ ವಿಭಾಗ, ಚಾಮರಾಜನಗರ–571313

ದೂರವಾಣಿ / ಫ್ಯಾಕ್ಸ್ ಸಂಖ್ಯೆ: 08226–222027
ಇ–ಮೇಲ್: eecnr@kpwd.gov.in/pwdeechngr@gmail.com

ಸಂಖ್ಯೆ/ಕಾ.ಪಾ.ಅ/ ಚಾ.ವಿ.ಚಾ/ ಟೆಂಡರ್/ 2024–25 ದಿನಾಂಕ: 30–10–2024

(ಎರಡು ಲಕೋಟೆ) ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ 12/2024–25 ದಿನಾಂಕ: 30–10–2024 (1 ಮತ್ತು 2ನೇ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 & KW-4 (ಸ್ಟಾಂಡರ್ ಟೆಂಡರ್ ಡಾಂಕುಮೆಂಟ್) ಹಾಗೂ KTTP Act 1999 and KTTP rule 2000 ರಲ್ಲಿ (ಸಿವಿಲ್) ಗುತ್ತಿಗೆದಾರರುಗಳಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಲೆ.ಶಿ: 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ಮಳೆಹಾನಿ ಕಾಮಗಾರಿ ಅಡಿಯಲ್ಲಿ ಗರಿಷ್ಠ ಅಂದಾಜು ಮೊತ್ತ ರೂ. 50.00 ಲಕ್ಷಗಳ 1 ಕಾಮಗಾರಿಗೆ, ಲೆ.ಶಿ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಅಡಿಯಲ್ಲಿ ಗರಿಷ್ಠ ಅಂದಾಜು ಮೊತ್ತ ರೂ. 230.00 ಲಕ್ಷಗಳ 1 ಕಾಮಗಾರಿಗೆ ಮತ್ತು ಲೆ.ಶಿ : 8443 ಠೇವಣಿವಂತಿಕೆ ಅಡಿಯಲ್ಲಿ ಗರಿಷ್ಠ ಅಂದಾಜು ಮೊತ್ತ ರೂ. 780.00 ಲಕ್ಷಗಳ 1 ಕಾಮಗಾರಿಕೆ, ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಬಹುದಾದ ದಿನಾಂಕ 30–10–2024 ರಿಂದ 13–11–2024 ಸಂಜೆ 16.00 ಗಂಟೆವರೆಗೆ, ಟೆಂಡರ್ ಪೂರ್ವಭಾವಿ ಸಭೆ ಕಾರ್ಯಪಾಲಕ ಇಂಜನಿಯರ್ ರವರ ಕಛೇರಿಯ ಸಭಾಂಗಣದಲ್ಲಿ ದಿನಾಂಕ 04–11–2024 ರಂದು ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 13–11–2024 ಸಂಜೆ 16.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15–11–2024 ಸಂಜೆ 16.00 ಗಂಟೆಯ ನಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–11–2024 ಹಾಗೂ ಇನ್ನೂ ಮುಂದೆ ಈ ನೋಟಿಫಿಕೇಷನ್‌ಗೆ ಸಂಬಂಧಪಟ್ಟ ಬದಲಾವಣೆಗಳನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿ/ವಿವರಗಳನ್ನು https://www.kppp.karnataka.gov.in ಜಾಲದಲ್ಲಿ ಹಾಗೂ ಕೆಳಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ವಿಭಾಗ,
ಚಾಮರಾಜನಗರ, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:367:2024–25

ಕರ್ನಾಟಕ ಸರ್ಕಾರದ ಸಚಿವಾಲಯ,

ಬಹುಮಹಡಿ ಕಟ್ಟಡ, ಬೆಂಗಳೂರು.

ಸಂ: ಬಾಭಸೊ/ಕೌಂಟರ್/ವಾನಿಕು/ಟೆಂಡರ್/2024–25 ದಿನಾಂಕ: 24.10.2024

ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ,
1ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಟೆಂಡರ್ ಪ್ರಕಟಣೆ

ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿನ ಆವರಣದಲ್ಲಿರುವ ವಿವಿಧ ಚಟುವಟಿಕೆಗಳಿಗಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ಪುಟಾಣಿ ರೈಲು, ದೋಣಿ ವಿಹಾರ ಮತ್ತು ಪ್ರವೇಶ ಶುಲ್ಕಗಳಿಗೆ ಟಿಕೆಟ್ ಕೌಂಟರ್ ತೆರೆಯಲಾಗಿದ್ದು, ಟಿಕೆಟ್ ಕೌಂಟರ್‌ನ ಸಮರ್ಪಕ ನಿರ್ವಹಣೆಗಾಗಿ ಮತ್ತು ವಾರ್ಷಿಕ ನಿರ್ವಹಣೆ ಗಳನ್ನೊಳಗೊಂಡಂತೆ ಗುತ್ತಿಗೆ ಆಧಾರದ ಮೇರೆಗೆ ಪಡೆಯಲು ಆಸಕ್ತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ಅರ್ಹ ಬಿಡ್ಡುದಾರರಿಂದ ಟೆಕ್ನಿಕಲ್ ಮತ್ತು ಆರ್ಥಿಕ ಬಿಡ್ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ಪ್ರಕಾರ e-Procurement ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ: https://kppp.karnataka.gov.in ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: **19.11.2024 ಸಂಜೆ 5.00 ಗಂಟೆಗೆ**. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **20.11.2024 ಮಧ್ಯಾಹ್ನ 03.00 ಗಂಟೆಗೆ**. ಹಣಕಾಸಿನ ಲಕೋಟೆಯನ್ನು ದಿನಾಂಕ: **22.11.2024 ರಂದು ಮಧ್ಯಾಹ್ನ 03.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು **ಬಾಲ ಭವನ ಸೊಸೈಟಿ, ಕಬ್ಬನ್‌ಪಾರ್ಕ್, ಬೆಂಗಳೂರು** ಈ ಕಛೇರಿಯಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿಗಳು
ಹಾಗೂ ಟೆಂಡರ್ ಬುಲೆಟಿನ್ ಅಧಿಕಾರಿಗಳು
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಹಾಗೂ ವಿಕಲಚೇತನರ ಮತ್ತು ಹಿರಿಯನಾಗರೀಕರ
ಸಬಲೀಕರಣ ಇಲಾಖಾ ಸಚಿವಾಲಯ, ಬೆಂಗಳೂರು

ವಾಸಾಸಂಇ/ವಾ.ಪ್ರ/2825/ಐಎಎ/2024–25

ಕರ್ನಾಟಕ ಸರ್ಕಾರ

ಸಹಾಯಕ ನಿರ್ದೇಶಕರ ಕಾರ್ಯಾಲಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಳ್ಳಾರಿ.

ಇಮೇಲ್: adyesbellary@gmail.com

ಸಂ.ಸ.ನಿ.ಬ/ಕ್ರೀಶಾವನಿ/ಆಪೂ/45/2024–25 ದಿನಾಂಕ: 22.10.2024

ಅಲ್ಪಾವದಿ ಟೆಂಡರ್ ಪ್ರಕಟಣೆ–6

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024–25 ನೇ ಸಾಲಿಗೆ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ, ಬಳ್ಳಾರಿ ಕ್ರೀಡಾಶಾಲೆ/ ವಸತಿನಿಲಯದ ಕ್ರೀಡಾಪಟುಗಳಿಗೆ ಆಹಾರ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು 2000 ಅನ್ವಯ ಪ್ರಕಾರ ಅರ್ಹ ಪೂರೈಕೆದಾರರಿಂದ ಇ–ಪ್ರಕ್ಯೂರ್‌ಮೆಂಟ್ (e-Procurement) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **ಇ – ಟೆಂಡರ್ ಘಟನಾವಳಿಗಳು: (7 ನೇ ತರಗತಿ ಯಿಂದ 10 ನೇ ತರಗತಿ ವರೆಗೆ)& (ಪಿಯುಸಿ ಯಿಂದ ಡಿಗ್ರಿ).** 1.ಟೆಂಡರ್ ಪ್ರಕಟಣೆ ದಿನಾಂಕ **ಸಂ.ಸ.ನಿ.ಬ/ಕ್ರೀಶಾವನಿ/ಆಪೂ/45/2024–25 ದಿ 22.10.2024.** 2.ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ **ರೂ. 7556250–00.** 3.ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ **ದಿ 28.10.2024 ರಿಂದ.** 4.ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **08.11.2024 ಸಾಯಂಕಾಲ 5.00 ಗಂಟೆಯವರೆಗೆ.** 5.ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ **11.11.2024 ಬೆಳ್ಳಿಗ್ಗೆ 11.00 ಗಂಟೆಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಳ್ಳಾರಿ.** 6.ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ **13.11.2024 ಬೆಳ್ಳಿಗ್ಗೆ 12.00 ಗಂಟೆಗೆ ಅಥವಾ ಮುಂದಿನ ದಿನಾಂಕವನ್ನು ಸೂಚಿಸಲಾಗುವುದು.** 7.ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. **151000/–.** 8.ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ **ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಳ್ಳಾರಿ.**

ಸಹಿ/– ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/576/ಕೆಎಸ್‌ಎಂಸಿಎ/2024–25

ರಾಯಚೂರಿನ ಮಲ್ಲಮ್ಮ ಸೂಲಗಿತ್ತಿ, ವೀರಪ್ಪ ಮೊಯಿಲಿ, ಶಿಲ್ಪಿ ಅರುಣ್ ಯೋಗಿರಾಜ್ ಆಯ್ಕೆ

69 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಎಂ. ವೀರಪ್ಪ ಮೊಯಿಲಿ, ಜ್ಯೂಡ್ ಫೆಲಿಕ್ಸ್ ಸೆಬಾಸ್ಟಿಯನ್, ಜೆ.ಎಂ. ವೀರಸಂಗಯ್ಯ, ಅರುಣ್ ಯೋಗಿರಾಜ್, ಜನಾರ್ದನ ಎಚ್. (ಜನ್ನಿ), ಬಿ.ಟಿ. ಲಲಿತಾ ನಾಯಕ್, ಪಿಚ್ಚಳ್ಳಿ ಶ್ರೀನಿವಾಸ್

ಬೆಂಗಳೂರು: ಉಚಿತವಾಗಿ ಹತ್ತು ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿರುವ ರಾಯಚೂರಿನ ಮಲ್ಲಮ್ಮ ಸೂಲಗಿತ್ತಿ, ತುಂಗಭದ್ರಾ ಜಲಾಶಯದ, ಇತ್ತೀಚೆಗೆ ಕೊಚ್ಚಿ ಹೋಗಿದ್ದ ಕ್ರಸ್ಟ್ ಗೇಟ್ ಮರಳಿ ಅಳವಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನೀರಾವರಿ ಇಲಾಖೆ ನಿವೃತ್ತ ಅಧಿಕಾರಿ ಕನ್ನಯ್ಯ ನಾಯ್ಡು, ಸಾಹಿತ್ಯ ಕ್ಷೇತ್ರದಿಂದ ಎಂ. ವೀರಪ್ಪ ಮೊಯಿಲಿ, ಬಿ.ಟಿ. ಲಲಿತಾ ನಾಯಕ್, ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಸೇರಿದಂತೆ 69 ಸಾಧಕರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಪ್ರಕಟಿಸಿದೆ.

ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲರಾಮ ಮೂರ್ತಿ ಕೆತ್ತಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್, ಮಾಜಿ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್, ಅಂತರ ರಾಷ್ಟ್ರೀಯ ಹಾಕಿ ಆಟಗಾರ ಜೂಡ್ ಫೆಲಿಕ್ಸ್ ಸೆಬಾಸ್ಟಿಯನ್, ಚಲನಚಿತ್ರ ನಟಿ ಹೇಮಾ ಚೌಧರಿ, ಸಂಕೀರ್ಣ ಕ್ಷೇತ್ರದಲ್ಲಿ ಹುಲಿಕಲ್ ನಟರಾಜ, ವಿಜ್ಞಾನ– ತಂತ್ರಜ್ಞಾನ ಕ್ಷೇತ್ರದಿಂದ ಟಿ.ವಿ ರಾಮಚಂದ್ರ, ಬಯಲಾಟ ಕ್ಷೇತ್ರದಲ್ಲಿ ವಿಜಯನಗರದ 92 ವರ್ಷದ ನಾರಾಯಣಪ್ಪ ಶಿಳ್ಳೇಕ್ಯಾತ, ಜಾನಪದ ಕ್ಷೇತ್ರದಲ್ಲಿ ಅಂಧ ಕಲಾವಿದ, ಬೀದರ್‌ನ ನರಸಿಂಹಲು ಸೇರಿದಂತೆ ಕಲೆ, ಸಾಹಿತ್ಯ, ಸಮಾಜ ಸೇವೆ, ಸಂಗೀತ, ಜಾನಪದ, ಕೃಷಿ, ಪರಿಸರ, ಶಿಕ್ಷಣ, ಕ್ರೀಡೆ, ಮಾಧ್ಯಮ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. 13 ಮಹಿಳೆಯರನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ.

ಅಲ್ಲದೆ, 'ಕರ್ನಾಟಕ ಸಂಭ್ರಮ–50' ಅಭಿಯಾನದ ಸುವರ್ಣ ಮಹೋತ್ಸವದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳ ತಲಾ 50 ಮಹಿಳೆಯರು ಮತ್ತು ಪುರುಷ ಸಾಧಕರಿಗೆ 'ಸುವರ್ಣ ಮಹೋತ್ಸವ' ಪ್ರಶಸ್ತಿ ಘೋಷಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಪ್ರಶಸ್ತಿ ಪುರಸ್ಕೃತರ ಹೆಸರು ಪ್ರಕಟಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ, '69ನೇ ರಾಜ್ಯೋತ್ಸವ ಅಂಗವಾಗಿ 69 ಪ್ರಶಸ್ತಿಗಳಿಗೆ ಸಾಧಕರನ್ನು ಆಯ್ಕೆ ಮಾಡಲಾಗಿದೆ. ₹5 ಲಕ್ಷ ನಗದು, 25 ಗ್ರಾಂ ಚಿನ್ನದ ಪದಕ ಹಾಗೂ ಫಲಕ ಪ್ರದಾನ ಮಾಡಲಾಗುವುದು. 'ಸುವರ್ಣ ಮಹೋತ್ಸವ' ಪ್ರಶಸ್ತಿ ಪುರಸ್ಕೃತರಿಗೆ ಫಲಕದ ಜೊತೆ ₹50 ಸಾವಿರ ನಗದು ನೀಡಲಾಗುವುದು' ಎಂದರು.

'ರಾಜ್ಯೋತ್ಸವ ಪ್ರಶಸ್ತಿಗೆ ಈ ಬಾರಿ 1,575 ಭೌತಿಕ ಅರ್ಜಿಗಳು ಬಂದಿದ್ದವು. ಅಲ್ಲದೆ, ಸೇವಾ ಸಿಂಧು ಪೋರ್ಟಲ್ ಮೂಲಕ 1,309 ಜನರಿಗಾಗಿ 7,438 ನಾಮ ನಿರ್ದೇಶನಗಳು ಸಲ್ಲಿಕೆ ಆಗಿದ್ದವು. ಆಯ್ಕೆ ಸಮಿತಿಯು ಅವುಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ಮತ್ತು ಅರ್ಜಿ ಹಾಕದ ಎಲೆಮರೆಯ ಕಾಯಿಯಂತೆ ಸೇವೆ ಸಲ್ಲಿಸಿರುವ 20ಕ್ಕೂ ಹೆಚ್ಚು ಸಾಧಕರನ್ನೂ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಪ್ರತಿ ಜಿಲ್ಲೆಗೂ ಪ್ರಾತಿನಿಧ್ಯ ನೀಡಲಾಗಿದೆ. ಸಾಮಾಜಿಕ ನ್ಯಾಯವನ್ನೂ ಕಾಪಾಡಿಕೊಳ್ಳಲಾಗಿದೆ' ಎಂದರು.

'ರಾಜ್ಯೋತ್ಸವ ಪ್ರಶಸ್ತಿ ಮತ್ತು ಸುವರ್ಣ ಮಹೋತ್ಸವ ವಿಶೇಷ ಪ್ರಶಸ್ತಿ ಸೇರಿ ಒಟ್ಟು 169 ಪ್ರಶಸ್ತಿಗಳನ್ನು ರಾಜ್ಯೋತ್ಸವ ದಿನವಾದ ನ.1ರಂದು ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಪ್ರದಾನ ಮಾಡಲಾಗುವುದು' ಎಂದೂ ಸಚಿವರು ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು

ಇಮಾಮಸಾಬ ಎಂ. ವಲ್ಲೆಪನವರ (ಧಾರವಾಡ), ಅಶ್ವ ರಾಮಣ್ಣ (ಬಳ್ಳಾರಿ), ಕುಮಾರಯ್ಯ (ಹಾಸನ), ವೀರಭದ್ರಯ್ಯ (ಚಿಕ್ಕಬಳ್ಳಾಪುರ), ನರಸಿಂಹಲು–ಅಂಧ ಕಲಾವಿದ (ಬೀದರ್), ಬಸವರಾಜ ಸಂಗಪ್ಪ ಹಾರಿವಾಳ (ವಿಜಯಪುರ), ಎಸ್.ಜಿ. ಲಕ್ಷ್ಮೀದೇವಮ್ಮ (ಚಿಕ್ಕಮಗಳೂರು), ಪಿಚ್ಚಳ್ಳಿ ಶ್ರೀನಿವಾಸ (ಕೋಲಾರ), ಲೋಕಯ್ಯ ಶೇರ–ಭೂತಾರಾಧನೆ (ದಕ್ಷಿಣಕನ್ನಡ)

ಚಲನಚಿತ್ರ–ಕಿರುತೆರೆ: ಹೇಮಾ ಚೌಧರಿ (ಬೆಂಗಳೂರು ನಗರ), ಎಂ.ಎಸ್. ನರಸಿಂಹಮೂರ್ತಿ (ಬೆಂಗಳೂರು ನಗರ),

ಸಂಗೀತ: ಪಿ. ರಾಜಗೋಪಾಲ (ಮಂಡ್ಯ), ಎ.ಎನ್. ಸದಾಶಿವಪ್ಪ (ರಾಯಚೂರು)

ನೃತ್ಯ: ವಿದುಷಿ ಲಲಿತಾ ರಾವ್ (ಮೈಸೂರು)

ಆಡಳಿತ: ಎಸ್.ವಿ. ರಂಗನಾಥ್, ನಿವೃತ್ತ ಐಎಎಸ್ ಅಧಿಕಾರಿ (ಬೆಂಗಳೂರು ನಗರ)

ವೈದ್ಯಕೀಯ: ಡಾ. ಜಿ.ಬಿ. ಬಿಡಿನಹಾಳ (ಗದಗ), ಡಾ. ಮೈಸೂರು ಸತ್ಯನಾರಾಯಣ (ಮೈಸೂರು), ಡಾ. ಲಕ್ಷ್ಮಣ್ ಹನುಮಪ್ಪ ಬಿದರಿ (ವಿಜಯಪುರ)

ಸಮಾಜಸೇವೆ: ಜೆ.ಎಂ. ವೀರಸಂಗಯ್ಯ (ವಿಜಯನಗರ), ಹೀರಾಚಂದ್ ವಾಗ್ಮಾರೆ (ಬೀದರ್), ಮಲ್ಲಮ್ಮ ಸೂಲಗಿತ್ತಿ (ರಾಯಚೂರು), ದಿಲೀಪ್ ಕುಮಾರ್ (ಚಿತ್ರದುರ್ಗ)

ಸಂಕೀರ್ಣ: ಹುಲಿಕಲ್ ನಟರಾಜ (ತುಮಕೂರು), ಡಾ. ಎಚ್.ಆರ್. ಸ್ವಾಮಿ (ಚಿತ್ರದುರ್ಗ), ಅ.ನ. ಪ್ರಹ್ಲಾದ ರಾವ್ (ಕೋಲಾರ), ಕೆ. ಅಜಿತ್ ಕುಮಾರ್ ರೈ (ಬೆಂಗಳೂರು ನಗರ), ಇರ್ಫಾನ್ ರಜಾಕ್ –ವಾಸ್ತುಶಿಲ್ಪ (ಬೆಂಗಳೂರು ನಗರ), ವಿರೂಪಾಕ್ಷ ರಾಮಚಂದ್ರಪ್ಪ ಹಾವನೂರ (ಹಾವೇರಿ)

ಹೊರದೇಶ–ಹೊರನಾಡು: ಕನ್ನಯ್ಯ ನಾಯ್ಡು, ಡಾ. ತುಂಬೆ ಮೊಹಿಯುದ್ದೀನ್ (ತುಂಬೆ ಗ್ರೂಪ್ಸ್ ಯುಎಇ), ಚಂದ್ರಶೇಖರ ನಾಯಕ್ (ಅಮೆರಿಕ)

ಪರಿಸರ: ಆಲ್ಮಿತ್ರಾ ಪಟೇಲ್ (ಬೆಂಗಳೂರು ನಗರ),

ಕೃಷಿ: ಶಿವನಾಪುರ ರಮೇಶ್ (ಬೆಂಗಳೂರು ಗ್ರಾಮಾಂತರ), ಪುಟ್ಟೀರಮ್ಮ;ಚಾಮರಾಜನಗರ

ಮಾಧ್ಯಮ: ಎನ್.ಎಸ್. ಶಂಕರ್ (ದಾವಣಗೆರೆ), ಸನತ್‌ಕುಮಾರ್ ಬೆಳಗಲಿ (ಬಾಗಲಕೋಟೆ), ಎ.ಜಿ. ಕಾರಟಗಿ (ಅಮರ ಗುಂಡಪ್ಪ ಕಾರಟಗಿ) (ಕೊಪ್ಪಳ), ರಾಮಕೃಷ್ಣ ಬಡಶೇಶಿ (ಕಲಬುರಗಿ)

ವಿಜ್ಞಾನ–ತಂತ್ರಜ್ಞಾನ: ಟಿ.ವಿ. ರಾಮಚಂದ್ರ (ಬೆಂಗಳೂರು ನಗರ), ಸುಬ್ಬಯ್ಯ ಅರುಣನ್ (ಬೆಂಗಳೂರು ನಗರ)

ಸಹಕಾರ: ವಿರೂಪಾಕ್ಷಪ್ಪ ನೇಕಾರ (ಬಳ್ಳಾರಿ)

ಯಕ್ಷಗಾನ: ಕೇಶವ್ ಹೆಗಡೆ (ಉತ್ತರಕನ್ನಡ), ಸೀತಾರಾಮ ತೋಳ್ಪಾಡಿ (ದಕ್ಷಿಣ ಕನ್ನಡ)

ಬಯಲಾಟ: ಸಿದ್ದಪ್ಪ ಕರಿಯಪ್ಪ ಕುರಿ– ಅಂಧ ಕಲಾವಿದ (ಬಾಗಲಕೋಟೆ), ನಾರಾಯಣಪ್ಪ ಶಿಳ್ಳೇಕ್ಯಾತ (ವಿಜಯಪುರ)

ರಂಗಭೂಮಿ: ಸರಸ್ವತಿ ಜುಲೈಕ ಬೇಗಂ (ಯಾದಗಿರಿ), ಓಬಳೇಶ್ ಎಚ್.ಬಿ (ಚಿತ್ರದುರ್ಗ), ಭಾಗ್ಯಶ್ರೀ ರವಿ (ಕೋಲಾರ), ಡಿ.ರಾಮು (ಮೈಸೂರು), ಜನಾರ್ದನ್ ಎಚ್. –ಜನ್ನಿ (ಮೈಸೂರು), ಹನುಮಾನದಾಸ ವ. ಪವಾರ–ಧಗಳ ಚಂದ (ಬಾಗಲಕೋಟೆ)

ಸಾಹಿತ್ಯ: ಬಿ.ಟಿ. ಲಲಿತಾ ನಾಯಕ್ (ಚಿಕ್ಕಮಗಳೂರು), ಅಲ್ಲಮಪ್ರಭು ಬೆಟ್ಟದೂರು (ಕೊಪ್ಪಳ), ಎಂ. ವೀರಪ್ಪ ಮೊಯಿಲಿ (ಉಡುಪಿ), ಹನುಮಂತರಾವ್ ದೊಡ್ಡಮನಿ (ಕಲಬುರಗಿ),ಬಾಳಾಸಾಹೇಬ್ ಲೋಕಾಪುರ (ಬೆಳಗಾವಿ), ಬೈರಮಂಗಲ ರಾಮೇಗೌಡ (ರಾಮನಗರ), ಪ್ರಶಾಂತ್ ಮಾಡ್ತಾ (ದಕ್ಷಿಣಕನ್ನಡ)

ಶಿಕ್ಷಣ: ವಿ. ಕಮಲಮ್ಮ (ಬೆಂಗಳೂರು ನಗರ), ಪ್ರೊ. ರಾಜೇಂದ್ರ ಶೆಟ್ಟಿ (ದಕ್ಷಿಣಕನ್ನಡ), ಪದ್ಮಾಶೇಖರ್ (ಕೊಡಗು)

ಕ್ರೀಡೆ: ಜೂಡ್ ಫೆಲಿಕ್ಸ್ ಸೆಬಾಸ್ಟಿಯನ್(ಹಾಕಿ) (ಬೆಂಗಳೂರು ನಗರ), ಗೌತಮ್ ವರ್ಮ (ರಾಮನಗರ), ಆರ್. ಉಮಾದೇವಿ (ಬಿಲಿಯರ್ಡ್ಸ್) (ಬೆಂಗಳೂರು ನಗರ)

ನ್ಯಾಯಾಂಗ: ಬಾಲನ್ (ಕೋಲಾರ),

ಶಿಲ್ಪಕಲೆ: ಬಸವರಾಜ್ ಬಡಿಗೇರ (ರಥ ಶಿಲ್ಪಿ) (ಬೆಂಗಳೂರು ನಗರ), ಅರುಣ್ ಯೋಗಿರಾಜ್ (ಮೈಸೂರು)

ಚಿತ್ರಕಲೆ: ಪ್ರಭು ಹರಸೂರು (ತುಮಕೂರು)

ಕರಕುಶಲ: ಚಂದ್ರಶೇಖರ ಸಿರಿವಂತೆ (ಹಸೆಚಿತ್ತಾರ) (ಶಿವಮೊಗ್ಗ)

ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕೃತ ಸಾಧಕರು

ಪುರುಷರು

ಜಾನಪದ : ಸಿ.ವಿ.ವೀರಣ್ಣ, ತುಮಕೂರು, ಪ್ರೊ.ಹಿ.ಚಿ.ಬೋರಲಿಂಗಯ್ಯ–ಬೆಂಗಳೂರು ನಗರ, ತಂಬೂರಿ ಉಮಾನಾಯ್ಕ–ದಾವಣಗೆರೆ, ಕೆಂಚಯ್ಯ–ಮೈಸೂರು, ಗೋಂದಳಿ ರಾಮಪ್ಪ–ವಿಜಯನಗರ, ಸುರೇಶ್ ಕಾತರಪ್ಪ ಲಮಾಣಿ–ಗದಗ

ವೈದ್ಯಕೀಯ: ಡಾ. ಚಂದ್ರಪ್ಪ–ಕೊಪ್ಪಳ, ಡಾ. ಅಲೆಕ್ಸ್ ಥಾಮಸ್–ಬೆಂಗಳೂರು ನಗರ, ಡಾ.ಎಚ್.ಎಸ್.ಕೃಷ್ಣಪ್ಪ–ಶಿವಮೊಗ್ಗ, ಡಾ. ಶಿವಲಿಂಗಯ್ಯ–ರಾಮನಗರ, ಡಾ. ಎಸ್.ಎಸ್. ಗುಬ್ಬಿ–ಯಾದಗಿರಿ.

ಮಾಧ್ಯಮ: ವಿಶ್ವನಾಥ ಸುವರ್ಣ–ದಕ್ಷಿಣ ಕನ್ನಡ, ಲಕ್ಷ್ಮಿ ನರಸಪ್ಪ–ತುಮಕೂರು, ರುದ್ರಪ್ಪ ಅಸಂಗಿ–ವಿಜಯಪುರ, ಎಂ.ಸಿದ್ದರಾಜು–ಬೆಂಗಳೂರು, ಮದನಗೌಡ–ಹಾಸನ, ಮಲ್ಲಿಕಾರ್ಜುನ ಹೆಗ್ಗಳಗಿ–ಬಾಗಲಕೋಟೆ, ಮಂಜುನಾಥ ಅದ್ದೆ– ಬೆಂಗಳೂರು ಗ್ರಾಮಾಂತರ

ಪರಿಸರ: ಎಸ್.ಎಂ.ಚಲವಾದಿ– ಬೆಳಗಾವಿ, ಎಚ್.ಆರ್. ಜಯರಾಮ್– ರಾಮನಗರ

ಯಕ್ಷಗಾನ: ಪೇತ್ರಿ ಮಂಜುನಾಥ ಪ್ರಭು, ಉಡುಪಿ

ರಂಗಭೂಮಿ: ಲಕ್ಷ್ಮಯ್ಯ–ಮಂಡ್ಯ, ರಾಜು ಮಳವಳ್ಳಿ–ಮಂಡ್ಯ, ಎಂ.ಪಿ.ರಾಜಣ್ಣ–ಚಾಮರಾಜನಗರ

ಶಿಲ್ಪಕಲೆ: ಟಿ. ಸೋಮೇಶ್– ಚಿತ್ರದುರ್ಗ

ಚಿತ್ರಕಲೆ: ಫಜ್ಲು ರೆಹಮಾನ್ ಖಾನ್–ಮೈಸೂರು, ಶ್ರೀಕಾಂತ ಬಿರಾದಾರ–ಬೀದರ್

ಛಾಯಾಚಿತ್ರ: ಶ್ರೀವತ್ಸ ಶಾಂಡಿಲ್ಯ– ಉತ್ತರ ಕನ್ನಡ,

ಸಂಗೀತ: ಆಮಯ್ಯ ಲಿಂಗಯ್ಯ ಮಠ –ಯಾದಗಿರಿ, ನಿರ್ಮಲಪ್ಪ ಭಜಂತ್ರಿ –ವಿಜಯಪುರ

ಸಂಕೀರ್ಣ: ಆರ್.ಜಿ.ಹಳ್ಳಿ ನಾಗರಾಜ್–ಬೆಂಗಳೂರು, ಆರ್. ವೆಂಕಟರಮಣಪ್ಪ–ಕೋಲಾರ, ಬಾಬು ಕಿಲಾರ್–, ದ್ವಾರಕಾನಾಥ್, ವಿದ್ಯಾವರ್ಧಕ ಸಂಘ ಧಾರವಾಡ

ಸಮಾಜ ಸೇವೆ: ಮಡ್ಡಿಕೆರೆ ಗೋಪಾಲ–ಚಿಕ್ಕಮಗಳೂರು, ದಾಸೋಹ ರತ್ನ ಚಕ್ರವರ್ತಿ ಅನ್ನದಾನೇಶ್ವರ ಅಪ್ಪಾಜಿ, ಬಸವಗೋಪಾಲ ನೀಲಮಾಣಿಕ ಮಠ, ಬಂಡಿಗಣಿಮಠ–ಬಾಗಲಕೋಟೆ, ಎಸ್.ಆರ್. ಜೋಳದ್–ಹಾವೇರಿ

ಸಾಹಿತ್ಯ: ಎಸ್. ನೀಲಕಂಠ ಮ. ಕಾಳಗಿ–ಬಾಗಲಕೋಟೆ, ಸಿದ್ದಪ್ಪ ತಿಮ್ಮಪ್ಪ ಮಾದರ–ಬಾಗಲಕೋಟೆ, ಜಿ.ಶರಣಪ್ಪ–ಚಿತ್ರದುರ್ಗ, ಅಮರೇಶ ನುಗಡೋಣಿ–ರಾಯಚೂರು, ಬಿ.ವಿ. ಶಿರೂರು–ಕೊಪ್ಪಳ

ಶಿಕ್ಷಣ: ಟಿ.ಎಂ. ಚಂದ್ರಶೇಖರಯ್ಯ – ಬಳ್ಳಾರಿ,

ಕ್ರೀಡೆ: ಜಿಮ್ಮಿ ಅಣ್ಣಯ್ಯ–ಕೊಡಗು, ಎಂ.ಗಿರೀಶ್ ಕುಮಾರ್– ಬೆಂಗಳೂರು ನಗರ

ಕೃಷಿ: ನಾರಾಯಣಸ್ವಾಮಿ ಜಿ.ಎನ್–ಚಿಕ್ಕಬಳ್ಳಾಪುರ, ಕೇದಾರಲಿಂಗಯ್ಯ ಹಿರೇಮಠ್– ಕಲಬುರಗಿ

ಕಿರುತೆರೆ: ಸಿಹಿಕಹಿ ಚಂದ್ರು– ಬೆಂಗಳೂರು ನಗರ, ದಯಾಶಂಕರ್ ಅಡಪ – ಹೊರನಾಡು, ಸದಾಶಿವ ಶೆಟ್ಟಿ ಕನ್ಯಾನ– ಹೊರನಾಡು

ಮಹಿಳೆಯರು

ಜಾನಪದ: ಜಯಲಕ್ಷ್ಮಮ್ಮ– ರಾಮನಗರ, ಲಕ್ಷ್ಮಮ್ಮ– ತುಮಕೂರು, ಬುರ್ರಕಥಾ ಅಯ್ಯಮ್ಮ ಎಡವಲ್– ರಾಯಚೂರು, ಲಕ್ಷ್ಮೀಬಾಯಿ ಹರಿಜನ– ಧಾರವಾಡ, ಭಾಗ್ಯಮ್ಮ– ಚಿಕ್ಕಮಗಳೂರು, ಚಂದ್ರಕಲಾ ಹರಕುಡೆ– ಬೀದರ್.

ವೈದ್ಯಕೀಯ: ಡಾ. ಅಕ್ಕಮಹಾದೇವಿ–ಧಾರವಾಡ.

ಮಾಧ್ಯಮ: ಭಾರತಿ ಹೆಗಡೆ– ಉತ್ತರ ಕನ್ನಡ, ಕೆ. ಶಾಂತಕುಮಾರಿ– ವಿಜಯನಗರ.

ರಂಗಭೂಮಿ: ಮಾಲತಿಶ್ರೀ– ಮೈಸೂರು, ಸುನಂದಾ ಎಸ್. ಕಂದಗಲ್ಲ–ಬಾಗಲಕೋಟೆ, ಶಾಂತಬಾಯಿ ಜೋಷಿ–ಧಾರವಾಡ, ಕಲಾವತಿ– ಬೆಂಗಳೂರು, ರಾಧಿಕ ಬೇವಿನಕಟ್ಟೆ– ಹಾವೇರಿ, ಸಾವಿತ್ರಿ ರಿತ್ತಿ– ದಾವಣಗೆರೆ.

ಚಿತ್ರಕಲೆ: ರೇಣುಕಾ ಮಾರ್ಕಂಡೆ–ಧಾರವಾಡ, ಸುರೇಖಾ– ಬೆಂಗಳೂರು, ರುಕ್ಮಿಣಿ ಬಾಯಿ– ಕೊಪ್ಪಳ.

ಸಂಗೀತ: ಲತಾ ಜಹಂಗೀರದಾರ್–ಧಾರವಾಡ.

ಸಮಾಜಸೇವೆ: ದು. ಸರಸ್ವತಿ–ಬೆಂಗಳೂರು ನಗರ, ರುಕ್ಮಿಣಿ ಕೃಷ್ಣಸ್ವಾಮಿ (ಸ್ವಾಸ್ತಿಕ್ ಸೊಸೈಟಿ)– ಬೆಂಗಳೂರು ನಗರ, ಲೂಸಿ ಸಲ್ಡಾನ– ಧಾರವಾಡ, ಚನ್ನಬಸಮ್ಮ ಸೂಲಗಿತ್ತಿ– ಯಾದಗಿರಿ, ರಾವಣಮ್ಮ– ಬೆಂಗಳೂರು ನಗರ, ರೀಟಾ ನರ್ಹೋನಾ– ದಕ್ಷಿಣ ಕನ್ನಡ, ಶಂಕ್ರಮ್ಮ – ರಾಯಚೂರು, ಪ್ರೇಮಲತಾ ಕೃಷ್ಣಸ್ವಾಮಿ–ಚಾಮರಾಜನಗರ, ಎಂ. ಪದ್ಮಾ– ಕೋಲಾರ.

ಸಾಹಿತ್ಯ: ರಾಧಾ ಕುಲಕರ್ಣಿ – ಗದಗ, ಡಾ. ಎನ್. ಗಾಯತ್ರಿ– ಬೆಂಗಳೂರು, ಲಲಿತಾ ಹೊಸಪ್ಯಾಟಿ ಹುನಗುಂದ– ಬಾಗಲಕೋಟೆ, ಸಂಕಮ್ಮ ಸಂಕಣ್ಣನವರ– ಹಾವೇರಿ, ಬಾನು ಮುಷ್ತಾಕ್– ಹಾಸನ.

ಶಿಕ್ಷಣ: ಮುಕ್ತ– ಬೆಂಗಳೂರು ನಗರ, ಭಾಗ್ಯಲಕ್ಷ್ಮಿ– ವಿಜಯನಗರ.

ಕ್ರೀಡೆ: ನಂದಿನಿ ಬಸಪ್ಪ (ಬಾಸ್ಕೆಟ್‌ಬಾಲ್)–ಕೊಡಗು, ಸುಶ್ಮಿತ ಪವಾರ್ ಒ (ಕಬ್ಬಡಿ)–ಬೆಂಗಳೂರು ನಗರ, ನೊಮಿಟೋ ಕಾಮದಾರ್– ಶಿವಮೊಗ್ಗ, ನಂದಿನಿ ಎನ್. ಎಸ್ (ಈಜು)– ಬೆಂಗಳೂರು ನಗರ.

ಕೃಷಿ: ನಾಗಮ್ಮಜ್ಜಿ– ವಿಜಯನಗರ, ಶಾಂಭವಿ– ಚಿತ್ರದುರ್ಗ.

ಬಯಲಾಟ/ ಯಕ್ಷಗಾನ: ಯಮುನಾಬಾಯಿ ಕಲಾಚಂದ್ರ– ಬೆಳಗಾವಿ, ಹುಲೆಗೆಮ್ಮ– ಬಳ್ಳಾರಿ.

ವಿಜ್ಞಾನ– ತಂತ್ರಜ್ಞಾನ: ಡಾ. ರತಿರಾವ್–ಮೈಸೂರು.

ಆಡಳಿತ: ಜೀಜಾ ಹರಿಸಿಂಗ್– ತುಮಕೂರು.

ನೃತ್ಯ: ಮಿನಲ್ ಪ್ರಭು– ಉಡುಪಿ.

ಹೊರನಾಡು: ಎಸ್.ಎ. ಲಲಿತಾ– ದೆಹಲಿ.

ಸಂಕೀರ್ಣ: ಮೀರಾ ಶಿವಲಿಂಗಯ್ಯ– ಮಂಡ್ಯ,

ಶಿಲ್ಪಕಲೆ: ಶಕುಂತಲ ಎಂ. ಬಡಿಗೇರ–ಕಲಬುರಗಿ.

ಸ್ವಾತಂತ್ರ್ಯ ಹೋರಾಟಗಾರರು: ಮಲ್ಲಮ್ಮ ಯಳವಾರ– ವಿಜಯಪುರ.

ದರ್ಶನ್ ಜಾಮೀನಿಗೆ ಹಲವು ಷರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್‌ಗೆ ಹೈಕೋರ್ಟ್, ವೈದ್ಯಕೀಯ ಚಿಕಿತ್ಸೆ ಪಡೆಯಲು ಆರು ವಾರಗಳ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ದರ್ಶನ್ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಯ ಮೇಲಿನ ಆದೇಶವನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಬೆಳಿಗ್ಗೆ ಪ್ರಕಟಿಸಿತು.

'ಒಂದು ವೇಳೆ ದರ್ಶನ್‌ಗೆ ಶಸ್ತ್ರಚಿಕಿತ್ಸೆ ಮಾಡದೇ ಇದ್ದರೆ ಮುಂದೆ ಆಗಬಹುದಾದ ಪರಿಣಾಮಗಳ ಬಗ್ಗೆ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ (ಬಿಎಂಸಿಆರ್‌ಸಿ) ನರರೋಗ ವಿಭಾಗದ ಮುಖ್ಯಸ್ಥರು ತಿಳಿಸಿದ್ದಾರೆ. ಇದರಿಂದ ಮೇಲ್ನೋಟಕ್ಕೆ ಶಸ್ತ್ರಚಿಕಿತ್ಸೆ ಅಗತ್ಯವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಸಂವಿಧಾನದ 21ನೇ ವಿಧಿಯಡಿ ಜೀವಿಸುವ ಹಕ್ಕಿನಲ್ಲಿ ಆರೋಗ್ಯದ ಹಕ್ಕೂ ಸೇರಿದೆ. ಆರೋಗ್ಯದ ಬಗ್ಗೆ ಕಾಳಜಿ ತೋರುವಲ್ಲಿ ವಿಳಂಬ ಸಲ್ಲ. ಇದು ಮುಂದೆ ಗಂಭೀರ ಪರಿಣಾಮಕ್ಕೆ ನಾಂದಿಯಾಗಬಹುದು' ಎಂದು ಹೇಳಿದೆ.

ದರ್ಶನ್ ಪರ ಹಿರಿಯ ವಕೀಲ ಸಿ.ವಿ. ನಾಗೇಶ್ ಹಾಗೂ ಪ್ರಕರಣದಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡಿದ್ದ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು. ದರ್ಶನ್ ಪರ ಹೈಕೋರ್ಟ್ ವಕೀಲ ಎಸ್. ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದರು.

ಷರತ್ತುಗಳು

- ₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ಒದಗಿಸಬೇಕು.
- ಬೆಂಗಳೂರಿನಲ್ಲಿ ತಮ್ಮ ಇಚ್ಛೆಗೆ ಅನುಗುಣವಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು.
- ಜೈಲಿನಿಂದ ಬಿಡುಗಡೆಯಾದ ತಕ್ಷಣ ಆಸ್ಪತ್ರೆಗೆ ದಾಖಲಾಗಿ, ವೈದ್ಯಕೀಯ ತಪಾಸಣೆಗೆ ಒಳಗಾಗಬೇಕು.
- ಯಾವಾಗ ಶಸ್ತ್ರಚಿಕಿತ್ಸೆ, ಎಷ್ಟು ದಿನ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ತದನಂತರ ಚಿಕಿತ್ಸೆ ಏನಾದರೂ ಇರಲಿದೆಯೇ ಎಂಬ ವಿವರಗಳನ್ನು ಬಿಡುಗಡೆಯಾದ ಒಂದು ವಾರದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು.
- ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಬೆದರಿಕೆ ಒಡ್ಡಬಾರದು ಅಥವಾ ಸಾಕ್ಷ್ಯ ತಿರುಚಬಾರದು.
- ಚಿಕಿತ್ಸೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಮತ್ತು ಆ ಚಿಕಿತ್ಸೆಯ ಮುನ್ನೋಟವನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು.
- ಮಧ್ಯಂತರ ಜಾಮೀನು ಅವಧಿಯಲ್ಲಿ ಆರೋಗ್ಯದ ಸ್ಥಿತಿ ಸೇರಿದಂತೆ ಇನ್ನಾವುದೇ ವಿಚಾರಕ್ಕೆ ಸಂಬಂಧಿಸಿ ಮುದ್ರಣ, ವಿದ್ಯುನ್ಮಾನ ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ಹೇಳಿಕೆ ನೀಡಬಾರದು.
- ಮಧ್ಯಂತರ ಜಾಮೀನು ಅವಧಿ ಮುಗಿದ ತಕ್ಷಣ ವಿಚಾರಣಾ ನ್ಯಾಯಾಲಯಕ್ಕೆ ಶರಣಾಗಬೇಕು. ಇದು ಹೈಕೋರ್ಟ್‌ನ ಮುಂದಿನ ಆದೇಶಕ್ಕೆ ಒಳಪಟ್ಟಿರುತ್ತದೆ.
- ಪಾಸ್‌ಪೋರ್ಟ್ ಅನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಇದೂ ಈ ನ್ಯಾಯಾಲಯದ ಮುಂದಿನ ಆದೇಶಕ್ಕೆ ಒಳಪಟ್ಟಿರುತ್ತದೆ.
- ಮಧ್ಯಂತರ ಜಾಮೀನು ಅವಧಿಯಲ್ಲಿ ವಿಚಾರಣಾ ನ್ಯಾಯಾಲಯದ ವ್ಯಾಪ್ತಿ ಪ್ರದೇಶದಿಂದ ಹೊರಹೋಗುವಂತಿಲ್ಲ.

'ನವೆಂಬರ್‌ನಲ್ಲೇ ಭುವನೇಶ್ವರಿ ಪ್ರತಿಮೆ ಅನಾವರಣ'

ಪ್ರಜಾವಾಣಿ ವಾರ್ತೆ



ಶಿವರಾಜ ತಂಗಡಗಿ

ಬೆಂಗಳೂರು: 'ವಿಧಾನಸೌಧದ ಆವರಣದಲ್ಲಿ ನ.1ರಂದು ಭುವನೇಶ್ವರಿ ಪ್ರತಿಮೆ ಸ್ಥಾಪಿಸಬೇಕಿತ್ತು. ತಾಂತ್ರಿಕ ಕಾರಣಗಳಿಂದ ಈ ತಿಂಗಳ ಅಂತ್ಯದ ಒಳಗೆ ಪ್ರತಿಮೆ ಅನಾವರಣಗೊಳಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ರಾಜ್ಯೋತ್ಸವ ದಿನದಂದೇ (ನ.1) ಪ್ರತಿಮೆ ಅನಾವರಣಗೊಳಿಸಬೇಕೆಂದು ಮುಖ್ಯಮಂತ್ರಿ ಸೂಚಿಸಿದ್ದರು. ನಾವು ಕೂಡ ಎಲ್ಲ ತಯಾರಿ ಮಾಡಿದ್ದೆವು. ಆದರೆ, ದೆಹಲಿಯಲ್ಲಿ ಪ್ರತಿಮೆ ನಿರ್ಮಾಣ ಆಗುತ್ತಿದ್ದು, ಕೆಲಸ ಇನ್ನೂ ಬಾಕಿ ಇದೆ. ಹಾಗೆಂದು, ನಾವು ಪರಶುರಾಮ ಮೂರ್ತಿಯ ರೀತಿ ಪ್ರತಿಷ್ಠಾಪಿಸುವುದಿಲ್ಲ. ಪೂರ್ಣ ಕೆಲಸ ಮುಗಿದ ನಂತರವೇ ಅನಾವರಣಗೊಳಿಸುತ್ತೇವೆ' ಎಂದರು.

ಯೋಗಿರಾಜ್‌ಗೆ ಅವಕಾಶ: ಈ ಬಾರಿ ಶಿಲ್ಪಕಲೆ ಕ್ಷೇತ್ರದಲ್ಲಿ ಅರುಣ್ ಯೋಗಿರಾಜ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಲಾಗಿದೆ. ಅವರಿಗೆ ಇನ್ನೂ 41 ವರ್ಷ ವಯಸ್ಸು. 60 ವರ್ಷ ದಾಟಿದವರನ್ನು ಮಾತ್ರ ಪ್ರಶಸ್ತಿಗೆ ಪರಿಗಣಿಸಬೇಕೆಂಬ ನಿಯಮವಿದೆ. ಅರುಣ್ ಅವರನ್ನು ಪ್ರಶಸ್ತಿಗೆ ಹೇಗೆ ಪರಿಗಣಿಸಲಾಯಿತು ಎಂಬ ಪ್ರಶ್ನೆಗೆ ಇಲಾಖೆ ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ. 'ಕ್ರೀಡಾ ಕ್ಷೇತ್ರದಲ್ಲಿ ಮಾತ್ರ 60 ವರ್ಷದ ಒಳಗಿನವರಿಗೂ ಪ್ರಶಸ್ತಿ ನೀಡಲು ಅವಕಾಶ ಮಾಡಿಕೊಳ್ಳಲಾಗಿದೆ. ಅದೇ ರೀತಿ ರಾಷ್ಟ್ರೀಯ- ಅಂತರರಾಷ್ಟ್ರೀಯ ಮನ್ನಣೆಗಳಿಸಿದ ಸಾಧಕ ರಿಗೂ ವಯೋಮಿತಿ ಸಡಿಲಿಸಿ ಪ್ರಶಸ್ತಿ ನೀಡಲು ಮಾರ್ಗಸೂಚಿಯಲ್ಲಿ ಅವಕಾಶ ವಿದೆ. ಇದರ ಆಧಾರದಲ್ಲಿ ಅರುಣ್‌ರನ್ನು ಪರಿಗಣಿಸಲಾಗಿದೆ' ಎಂದರು.

'ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇದೆ'



ಕಾಶಿನಾಥಯ್ಯ ಶಿವನಗೌಡರ್

ಹರಿಹರ (ದಾವಣಗೆರೆ): ಈ ದೇಶದ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗುತ್ತದೆ ಎಂಬ ಭರವಸೆ ಇದೆ ಎಂದು ಕೊಲೆಗೀಡಾಗಿರುವ ಚಿತ್ರದುರ್ಗದ ರೇಣುಕಸ್ವಾಮಿ ಅವರ ತಂದೆ ಕಾಶಿನಾಥಯ್ಯ ಶಿವನಗೌಡರ್ ತಿಳಿಸಿದರು.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಪ್ರಮುಖ ಆರೋಪಿ ದರ್ಶನ್‌ಗೆ ಹೈಕೋರ್ಟ್‌ನಲ್ಲಿ ಮಧ್ಯಂತರ ಜಾಮೀನು ಮಂಜೂರಾಗಿರುವ ಕುರಿತು ಅವರು ಈ ರೀತಿ ಪ್ರತಿಕ್ರಿಯೆ ನೀಡಿದರು.

ಆಮೆಗತಿ ಹೈಕೋರ್ಟ್ ಕಲಾಪ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಲ್ಮನವಿ ವಿಚಾರಣೆ, ಪ್ರಕರಣಗಳನ್ನು ನಿಗದಿಗೊಳಿಸುವಲ್ಲಿ ಆಮೆಗತಿ, ಮೆಮೊ ಸ್ವೀಕರಿಸುವಲ್ಲಿ ವಿಳಂಬ, ಕೆಲ ನ್ಯಾಯಪೀಠಗಳು ಸಮಯಪಾಲನೆಯಲ್ಲಿ ತೋರುತ್ತಿರುವ ನಿರ್ಲಕ್ಷ್ಯದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ವಕೀಲರ ಸಂಘ ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರನ್ನು ಆಗ್ರಹಿಸಿದೆ.

ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಖಜಾಂಚಿ ಎಂ.ಟಿ.ಹರೀಶ್ ಅವರ ಸಹಿಯುಳ್ಳ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಅವರಿಗೆ ಸಲ್ಲಿಸಲಾಗಿದೆ.

'ಹೊಸ ರಿಟ್ ಮೇಲ್ಮನವಿಗಳು ಮತ್ತು ಹಸಿರು ನ್ಯಾಯಪೀಠದಲ್ಲಿ ವಿಚಾರಣೆಗೆ ಬರಬೇಕಾದ ಪ್ರಕರಣಗಳ ಆಲಿಕೆ ನಡೆಯುತ್ತಿಲ್ಲ. ಕೆಲವು ಏಕಸದಸ್ಯ ನ್ಯಾಯಪೀಠಗಳು ಮಂದಗತಿಯ ವಿಚಾರಣೆಯಿಂದ ಕಕ್ಷಿದಾರರಿಗೆ ನ್ಯಾಯದಾನ ವಿಳಂಬವಾಗುತ್ತಿದೆ' ಎಂದು ಮನವಿಯಲ್ಲಿ ವಿವರಿಸಲಾಗಿದೆ.

'ಪ್ರಕರಣಗಳನ್ನು ಕೈಗೆತ್ತಿಕೊಳ್ಳುವಂತೆ ಕೋರಿ ಸಲ್ಲಿಸಲಾಗುವ ಜ್ಞಾಪನಾ ಪತ್ರಗಳನ್ನು (ಮೆಮೊ) ಪರಿಗಣಿಸಲಾಗುತ್ತಿಲ್ಲ. ಈ ಸಂಬಂಧ ಕಚೇರಿ ಮತ್ತು ರಿಜಿಸ್ಟ್ರಿ ನಿಷ್ಕ್ರಿಯತೆ ಎದ್ದು ಕಾಣುತ್ತಿದೆ. ಎಷ್ಟೋ ಬಾರಿ 7–8 ಸಲ ಮೆಮೊ ಸಲ್ಲಿಸಿದರೂ ಪ್ರಕರಣಗಳ ಪಟ್ಟಿ ಮಾಡಲಾಗುತ್ತಿಲ್ಲ' ಎಂದು ಆಕ್ಷೇಪಿಸಲಾಗಿದೆ.

'ಕೋರ್ಟ್ ಹಾಲ್ 1 ಸೇರಿ ಕೆಲವು ನ್ಯಾಯಪೀಠಗಳಲ್ಲಿ ದಿನದ ಪಟ್ಟಿಯಲ್ಲಿನ ಪ್ರಕರಣಗಳು ದಿನದ ಕಲಾಪದ ಅಂತ್ಯವಾಗುವ ಹೊತ್ತಾದರೂ ವಿಚಾರಣೆಯೇ ಆರಂಭವಾಗುವುದಿಲ್ಲ. 'ಬೆಳಿಗ್ಗೆ 10.30ಕ್ಕೆ ಕಲಾಪ ಆರಂಭವಾಗಬೇಕು. ಆದರೆ, ಕೆಲ ಪೀಠಗಳು ತಡವಾಗಿ ಆರಂಭವಾಗುತ್ತಿವೆ. ಈ ಬಗ್ಗೆ ಗಮನಹರಿಸಲು ಕೋರಲಾಗಿದೆ.

ಸಲ್ಮಾನ್‌ಗೆ ಕೊಲೆ ಬೆದರಿಕೆ: ಆರೋಪಿ ಬಂಧನ

ಮುಂಬೈ (ಪಿಟಿಐ): ₹2 ಕೋಟಿ ನೀಡದಿದ್ದರೆ ಕೊಲೆ ಮಾಡುವುದಾಗಿ ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಜೀವ ಬೆದರಿಕೆ ಹಾಕಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.


ಬಂಧಿತ ಮುಂಬೈನ ಬಾಂದ್ರಾ ನಿವಾಸಿ ಆಜಂ ಮೊಹಮ್ಮದ್ ಮುಸ್ತಫಾ. 'ಸಲ್ಮಾನ್ ₹2 ಕೋಟಿ ನೀಡಬೇಕು. ಇಲ್ಲದಿದ್ದರೆ ಆತನನ್ನು ಕೊಲೆ ಮಾಡಲಾಗುವುದು' ಎಂದು ಮುಂಬೈನ ಸಂಚಾರ ಪೊಲೀಸರಿಗೆ ಮಂಗಳವಾರ ಬೆದರಿಕೆ ಸಂದೇಶವನ್ನು ಕಳುಹಿಸಲಾಗಿತ್ತು. ಬಳಿಕ ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು.

₹5 ಕೋಟಿ ಹಣ ನೀಡದಿದ್ದರೆ ಸಲ್ಮಾನ್ ಅವರನ್ನು ಕೊಲೆ ಮಾಡಲಾಗುವುದು ಎಂದು ಇತ್ತೀಚೆಗೆ ಮುಂಬೈ ಸಂಚಾರ ಪೊಲೀಸ್ ಸಹಾಯವಾಣಿಗೆ ಸಂದೇಶ ಕಳುಹಿಸಲಾಗಿತ್ತು. ಈ ಪ್ರಕರಣದಲ್ಲಿ ಜಾರ್ಖಂಡ್‌ನ ಒಬ್ಬ ಆರೋಪಿಯನ್ನು ಬಂಧಿಸಲಾಗಿದೆ.

ಸಿಖ್ ಪ್ರತ್ಯೇಕತಾವಾದಿಗಳ ವಿರುದ್ಧ ಸಂಚು: ಹಿಂಸಾಚಾರ, ಗುಪ್ತಚರ ಮಾಹಿತಿ ಸಂಗ್ರಹಕ್ಕೆ ಸೂಚನೆ

ಅಮಿತ್ ಶಾ ಕೈವಾಡ: ಕೆನಡಾ ಆರೋಪ

ಒಟ್ಟಾವಾ (ಎಪಿ, ರಾಯಿಟರ್ಸ್): ಕೆನಡಾ ನೆಲದಲ್ಲಿ ಸಿಖ್ ಪ್ರತ್ಯೇಕತಾವಾದಿಗಳನ್ನು ಹತ್ಯೆಗೈಯುವ ಸಂಚಿನಲ್ಲಿ ಭಾರತದ ಗೃಹ ಸಚಿವ ಅಮಿತ್ ಶಾ ಅವರ ಕೈವಾಡವಿದೆ ಎಂದು ಕೆನಡಾ ಆರೋಪಿಸಿದೆ.


ಅಮಿತ್ ಶಾ

ಕೆನಡಾದಲ್ಲಿರುವ ಸಿಖ್ ಪ್ರತ್ಯೇಕತಾವಾದಿಗಳನ್ನು ಗುರಿಯಾಗಿಸಿಕೊಂಡು ಹಿಂಸಾಚಾರ ಕೈಗೊಳ್ಳಲು, ಬೆದರಿಕೆ ಹಾಕಲು ಮತ್ತು ಗುಪ್ತಚರ ಮಾಹಿತಿ ಸಂಗ್ರಹಿಸುವ ಕಾರ್ಯಕ್ಕೆ ಅಮಿತ್ ಶಾ ಆದೇಶಿಸಿದ್ದರು ಎಂದು ಕೆನಡಾದ ಸಚಿವರೊಬ್ಬರು ಬುಧವಾರ ಆರೋಪಿಸಿದ್ದಾರೆ.

ಕೆನಡಾದ ವಿದೇಶಾಂಗ ವ್ಯವಹಾರಗಳ ಉಪ ಸಚಿವ ಡೇವಿಡ್ ಮಾರಿಸನ್ ಅವರು, ಸಂಸತ್ ಸದಸ್ಯರನ್ನು ಒಳಗೊಂಡ ರಾಷ್ಟ್ರೀಯ ಭದ್ರತಾ ಸಮಿತಿಗೆ ಈ ವಿಷಯ ತಿಳಿಸಿದ್ದಾರೆ.

'ಖಚಿತಪಡಿಸಿದ್ದು ನಾನೇ': ಈ ವಿಷಯದ ಕುರಿತ ಆರೋಪಗಳ ವರದಿಯನ್ನು ಮೊದಲ ಬಾರಿಗೆ ವಾಷಿಂಗ್ಟನ್ ಪೋಸ್ಟ್ ಪ್ರಕಟಿಸಿತ್ತು. 'ಆ ಪತ್ರಿಕೆಯ ವರದಿಗಾರನಿಗೆ ಈ ವಿಷಯವನ್ನು ನಾನೇ ಖಚಿತಪಡಿಸಿದ್ದೆ' ಎಂದು ಮಾರಿಸನ್ ಹೇಳಿದ್ದಾರೆ.

'ಪತ್ರಕರ್ತ ನನಗೆ ಕರೆ ಮಾಡಿ, ಅದು ಆ ವ್ಯಕ್ತಿಯೇ (ಅಮಿತ್ ಶಾ) ಎಂದು ಕೇಳಿದರು. ನಾನು, ಹೌದು ಎಂದು ಖಚಿತಪಡಿಸಿದ್ದೆ' ಎಂದು ಮಾರಿಸನ್ ಸಮಿತಿಗೆ ಮಾಹಿತಿ ನೀಡಿದ್ದಾರೆ. ಆದರೆ, ಅಮಿತ್ ಶಾ ಅವರ ಒಳಗೊಳ್ಳುವಿಕೆ ಕುರಿತು ಕೆನಡಾಗೆ ಹೇಗೆ ತಿಳಿದಿತ್ತು ಎಂಬುದನ್ನು ಅವರು ತಿಳಿಸಿಲ್ಲ.

ಗೃಹ ಸಚಿವರ ವಿರುದ್ಧದ ಆರೋಪಗಳ ಕುರಿತು ಭಾರತ ಸರ್ಕಾರ ಮತ್ತು ಒಟ್ಟಾವಾದಲ್ಲಿನ ಭಾರತೀಯ ರಾಯಭಾರ ಕಚೇರಿ ಸದ್ಯಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಅಮಿತ್ ಶಾ ಪಾತ್ರದ ಕುರಿತು ಕೆನಡಾ 2023ರ ಅಕ್ಟೋಬರ್‌ನಲ್ಲಿ ಭಾರತದೊಂದಿಗೆ ಮಾಹಿತಿ ಹಂಚಿಕೊಂಡಿತ್ತು. ಆದರೆ, ಅದು ದುರ್ಬಲ ಮಾಹಿತಿಯಾಗಿತ್ತು' ಎಂದು ಭಾರತ ಸರ್ಕಾರದ ಮೂಲಗಳು ರಾಯಿಟರ್ಸ್‌ಗೆ ತಿಳಿಸಿವೆ.

2023ರ ಜೂನ್‌ನಲ್ಲಿ ಕೆನಡಾದಲ್ಲಿ ನಡೆದಿರುವ ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತ ಸರ್ಕಾರದ ಏಜೆಂಟರ ಪಾತ್ರದ ಬಗ್ಗೆ ವಿಶ್ವಾಸಾರ್ಹ ಪುರಾವೆಗಳಿವೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ವರ್ಷದ ಹಿಂದೆ ಪ್ರತಿಪಾದಿಸಿದ್ದರು.

ಇದಕ್ಕೆ ಪೂರಕವಾಗಿ ಪುರಾವೆಗಳನ್ನು ಭಾರತೀಯ ಅಧಿಕಾರಿಗಳ ಜತೆ ಹಂಚಿಕೊಂಡಿರುವುದಾಗಿ ಕೆನಡಾ ಅಧಿಕಾರಿಗಳು ಪದೇ ಪದೇ ಹೇಳಿಕೊಂಡು ಬಂದಿದ್ದಾರೆ. ಆದರೆ ಇದನ್ನು ಭಾರತೀಯ ಅಧಿಕಾರಿಗಳು ನಿರಾಕರಿಸುತ್ತಾ ಬಂದಿದ್ದಾರೆ. ಅಲ್ಲದೆ ಈ ಆರೋಪಗಳನ್ನು ಅಸಂಬದ್ಧ ಎಂದೂ ಕರೆದಿದ್ದಾರೆ.

'ಪುರಾವೆಯಿದೆ, ಸಹಕಾರ ಸಿಕ್ಕಿಲ್ಲ'

'ಕೆನಡಾದಲ್ಲಿರುವ ಭಾರತೀಯ ಮೂಲದ ಪ್ರಜೆಗಳ ಬಗ್ಗೆ ಭಾರತ ಸರ್ಕಾರವು ರಾಜತಾಂತ್ರಿಕ ವ್ಯವಸ್ಥೆ ಮತ್ತು ಇತರ ಮೂಲಗಳಿಂದ ಮಾಹಿತಿ ಸಂಗ್ರಹಿಸಿದೆ ಎಂಬುದರ ಪುರಾವೆ ನಮ್ಮ ಬಳಿಯಿದೆ' ಎಂದು ಕೆನಡಾ ಪ್ರಧಾನಿ ಟ್ರೂಡೊ ಅವರ ರಾಷ್ಟ್ರೀಯ ಭದ್ರತಾ ಸಲಹೆಗಾರ ನಥಾಲಿ ಡ್ರೌಯಿನ್ ಮಂಗಳವಾರ ಸಮಿತಿಗೆ ತಿಳಿಸಿದ್ದಾರೆ.

ವ್ಯಾಪಕ ಜಾಲ ಹೊಂದಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ತಂಡವು ಕೆನಡಾದಲ್ಲಿ ಕೊಲೆ, ಕೊಲೆ ಸಂಚು ಸೇರಿದಂತೆ ಹಿಂಸಾತ್ಮಕ ಅಪರಾಧಗಳಲ್ಲಿ ತೊಡಗಿದೆ. ಈ ತಂಡದವರೊಂದಿಗೆ ಭಾರತೀಯ ಅಧಿಕಾರಿಗಳು ಕೆಲಸ ಮಾಡುತ್ತಿರುವ ಕುರಿತ ಮಾಹಿತಿಯನ್ನು ಭಾರತ ಸರ್ಕಾರಕ್ಕೆ ರವಾನಿಸಿರುವುದಾಗಿ ಅವರು ಹೇಳಿದ್ದಾರೆ.

'ನಾವು ಸಾಕಷ್ಟು ಮಾಹಿತಿ ನೀಡಿದೆವು. ಭಾರತ ಸರ್ಕಾರದಿಂದ ಕೆನಡಾಗೆ ಸಹಕಾರ ದೊರೆಯುವುದಿಲ್ಲ ಎಂಬುದು ಸ್ಪಷ್ಟವಾದ ಬಳಿಕ, ಮಾಹಿತಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ನಿರ್ಧರಿಸಲಾಯಿತು' ಎಂದು ಅವರು ಹೇಳಿದ್ದಾರೆ.




ಸುದ್ದಿ 2 ನಿಮಿಷ

ಒಡಿಶಾ: ಗರ್ಭಿಣಿಗೆ ರಜೆ ನೀಡದ ಸಿಡಿಪಿಒ ಅಮಾನತು

ಭುವನೇಶ್ವರ (ಪಿಟಿಐ): ಗರ್ಭಿಣಿ ಉದ್ಯೋಗಿಗೆ ರಜೆ ನಿರಾಕರಿಸಿದ ಪರಿಣಾಮ, 7 ತಿಂಗಳ ಭ್ರೂಣವು ಹೊಟ್ಟೆಯೊಳಗೆ ಮೃತಪಟ್ಟ ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸುವ ಉದ್ದೇಶದಿಂದ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಯನ್ನು (ಸಿಡಿಪಿಒ) ಅಮಾನತು ಮಾಡಿ ಒಡಿಶಾ ಸರ್ಕಾರ ಆದೇಶಿಸಿದೆ.

ಉಪ ಮುಖ್ಯಮಂತ್ರಿ ಪ್ರವತಿ ಪರಿದಾ ಅವರು 'ಎಕ್ಸ್'ನಲ್ಲಿ, 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕಿಯಾದ ವರ್ಷಾ ಪ್ರಿಯದರ್ಶಿನಿ ಅವರ ಆರೋಪಕ್ಕೆ ಸಂಬಂಧಿಸಿದ ನಿಷ್ಪಕ್ಷಪಾತ ತನಿಖೆಗಾಗಿ ಸಿಡಿಪಿಒ ಸ್ನೇಹಲತಾ ಸಾಹೋ ಅವರನ್ನು ಅಮಾನತು ಮಾಡಲಾಗಿದೆ' ಎಂದು ತಿಳಿಸಿದ್ದಾರೆ.



'ತನಿಖಾ ವರದಿ ಸ್ವೀಕರಿಸಿದ ನಂತರ ಅಗತ್ಯ ಕ್ರಮ ಕೈಗೊಳ್ಳುತ್ತೇವೆ' ಎಂದು ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ್ದ ವರ್ಷಾ ಪ್ರಿಯದರ್ಶಿನಿ ಅವರು, 'ಅಕ್ಟೋಬರ್ 25ರಂದು ತೀವ್ರ ಹೊಟ್ಟೆ ನೋವು ಇದ್ದರೂ ರಜೆ ನೀಡದ ಕಾರಣ ಹೊಟ್ಟೆಯೊಳಗೆ ಮಗು ಮೃತಪಟ್ಟಿತು. ಆಸ್ಪತ್ರೆಗೆ ದಾಖಲಿಸುವಂತೆ ಮನವಿ ಮಾಡಿದದರೂ ಸಿಡಿಪಿಒ ಮತ್ತು ಇತರ ಅಧಿಕಾರಿಗಳು ಕಡೆಗಣಿಸಿದರು' ಎಂದು ಹೇಳಿದ್ದಾರೆ.

ಈ ಮಧ್ಯೆ ಸಿಡಿಪಿಒ ಸ್ನೇಹಲತಾ ಅವರು, 'ಪ್ರಿಯದರ್ಶಿನಿ ಅವರು ಹೊಟ್ಟೆ ನೋವಿನಿಂದ ಬಳಲುತ್ತಿದ್ದರು ಎಂಬ ಬಗ್ಗೆ ತಿಳಿದಿರಲಿಲ್ಲ' ಎಂದು ಹೇಳಿದ್ದಾರೆ.

ಛತ್ತೀಸಗಢ: 5 ನಕ್ಸಲರು ಶರಣು

ಬಿಜಾಪುರ (ಛತ್ತೀಸಗಢ) (ಪಿಟಿಐ): ಮಹಿಳೆ ಸೇರಿದಂತೆ ಐವರು ನಕ್ಸಲರು ಬಿಜಾಪುರ ಜಿಲ್ಲೆಯಲ್ಲಿ ಶರಣಾದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

ಈ ಪೈಕಿ ಸುಶೀಲ ಅಲಿಯಾಸ್ ಬುಜ್ಜಿ ಕುರಿತು ಸುಳಿವು ನೀಡಿದವರಿಗೆ ₹5 ಲಕ್ಷ ನಗದು ಬಹುಮಾನ ಘೋಷಿಸಲಾಗಿತ್ತು. 2018ರಿಂದ 2023ರ ಅವಧಿಯಲ್ಲಿ ಪೊಲೀಸ್ ತಂಡದ ಮೇಲೆ ಏಳು ಬಾರಿ ಗುಂಡಿನ ದಾಳಿ ನಡೆಸಿದ ಆರೋಪ ಇವರ ಮೇಲಿದೆ.

'ಹಿರಿಯ ಪೊಲೀಸರು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಅಧಿಕಾರಿಗಳ ಎದುರು ಐವರು ಮಂಗಳವಾರ ಹಾಜರಾಗಿ, ಹಿರಿಯ ನಕ್ಸಲರ ದೌರ್ಜನ್ಯ ಹಾಗೂ ಉಗ್ರವಾದಿಗಳ ಅಮಾನವೀಯ ಸಿದ್ಧಾಂತದಿಂದ ಬೇಸತ್ತು ಶರಣಾಗುತ್ತಿದ್ದೇವೆ ಎಂದಿದ್ದಾರೆ' ಎಂದರು.

ನಕ್ಸಲರ ಬಂಧನ: ಜಿಲ್ಲೆಯ ಮೂರು ಪ್ರತ್ಯೇಕ ಸ್ಥಳಗಳಿಂದ ಪೊಲೀಸರು ಬುಧವಾರ ಒಟ್ಟು ಎಂಟು ನಕ್ಸಲರನ್ನು ಬಂಧಿಸಿದ್ದಾರೆ. ಎಲ್ಲರೂ ಪುರುಷರಾಗಿದ್ದು, 20 ರಿಂದ 55 ವರ್ಷ ವಯಸ್ಸಿನವರು. ಜಿಲ್ಲೆಯಲ್ಲಿ ಅ. 28ರಂದು 19 ನಕ್ಸಲರನ್ನು ಬಂಧಿಸಲಾಗಿತ್ತು.

'ಆಯುಷ್ಮಾನ್ ಭಾರತ' ಮೋದಿ ರಾಜಕೀಯ: ಎಎಪಿ

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿ 'ಆಯುಷ್ಮಾನ್ ಭಾರತ್' ಆರೋಗ್ಯ ವಿಮಾ ಯೋಜನೆಯ ಅನುಷ್ಠಾನ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರು ರಾಜಕಾರಣ ಮಾಡುತ್ತಿದ್ದಾರೆ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ವಾಗ್ದಾಳಿ ನಡೆಸಿದೆ.

ಈ ಯೋಜನೆಯ ಜಾರಿಗೆ ದೆಹಲಿ ಮತ್ತು ಪಶ್ಚಿಮ ಬಂಗಾಳದಲ್ಲಿ 'ರಾಜಕೀಯ ಗೋಡೆ' ಅಡ್ಡಿಯಾಗಿದೆ ಎಂಬ ಪ್ರಧಾನಿ ಅವರ ಹೇಳಿಕೆಗೆ ಪಕ್ಷ ತಿರುಗೇಟು ನೀಡಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ವಕ್ತಾರರಾದ ಪ್ರಿಯಾಂಕಾ ಕಾಕ್ಕರ್, 'ಈ ಯೋಜನೆಯು ಒಂದು ಹಗರಣ ಎಂದು ಸಿಎಜಿ ವರದಿಯಲ್ಲೇ ಹೇಳಲಾಗಿದೆ. ಇದರ ಬದಲಿಗೆ ದೆಹಲಿಯ ಮಾದರಿಯನ್ನು ಪ್ರಧಾನಿ ಅಧ್ಯಯನ ಮಾಡಲಿ' ಎಂದಿದ್ದಾರೆ.

'ಎಎಪಿಗೆ ಆರೋಗ್ಯ ಕ್ಷೇತ್ರ ಪ್ರಮುಖವಾದುದು. ದೆಹಲಿಯಲ್ಲಿ ಪಕ್ಷವು ಜಾರಿಗೆ ತಂದಿರುವ ಆರೋಗ್ಯ ಚಿಕಿತ್ಸೆ ಕುರಿತ ಮಾದರಿಗೆ ವಿಶ್ವ ಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್ ಅವರೂ ಶ್ಲಾಘಿಸಿದ್ದಾರೆ' ಎಂದು ಹೇಳಿದರು.

ಈ ಯೋಜನೆಯು 27,000 ಸಾವಿರ ಆಸ್ಪತ್ರೆಗಳಲ್ಲಿ ಜಾರಿಯಲ್ಲಿದೆ ಎನ್ನಲಾಗಿದೆ. ಈ ಪೈಕಿ 7000 ಆಸ್ಪತ್ರೆಗಳು ಕಾಗದದಲ್ಲಿ ಮಾತ್ರವೇ ಇದೆ. ಇನ್ನೂ 4000 ಆಸ್ಪತ್ರೆಗಳು ಈ ಯೋಜನೆಯಡಿ ಒಬ್ಬ ರೋಗಿಯನ್ನು ದಾಖಲಿಸಿಕೊಂಡಿಲ್ಲ ಎಂದು ಪ್ರಿಯಾಂಕಾ ಹೇಳಿದರು.

'ಪಟಾಕಿ ನಿಷೇಧ; ಧಾರ್ಮಿಕ ಬಣ್ಣ ಬೇಡ'

ದೆಹಲಿಯಲ್ಲಿ ಪಟಾಕಿ ಮೇಲೆ ನಿಷೇಧ ಹೇರಿರುವ ಸರ್ಕಾರದ ಕ್ರಮವನ್ನು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಸಮರ್ಥಿಸಿಕೊಂಡಿದ್ದಾರೆ. 'ಜನರನ್ನು ಮಾಲಿನ್ಯದಿಂದ ರಕ್ಷಿಸಲು ಈ ಕ್ರಮ ಅತ್ಯಗತ್ಯ. ಇದಕ್ಕೆ ಹಿಂದೂ– ಮುಸ್ಲಿಂ ಎಂಬ ಧಾರ್ಮಿಕ ಬಣ್ಣ ಬಳಿಯುವುದು ಸರಿಯಲ್ಲ' ಎಂದು ಅವರು ಪ್ರತಿಪಾದಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಜ್ರಿವಾಲ್, 'ನಾವು ಯಾರನ್ನೋ ಓಲೈಸಲು ಪಟಾಕಿ ನಿಷೇಧಿಸಿಲ್ಲ. ಪಟಾಕಿ ಸಿಡಿಸುವುದರಿಂದ ಉಂಟಾಗುವ ಮಾಲಿನ್ಯದಿಂದ ಮಕ್ಕಳು ಮತ್ತು ಜನರು ಆರೋಗ್ಯ ಸಮಸ್ಯೆಗೆ ತುತ್ತಾಗಬೇಕಾಗುತ್ತದೆ. ಹಾಗಾಗಿ ಜನರ ಒಳಿತಿಗಾಗಿಯೇ ಸರ್ಕಾರವು ಈ ನಿರ್ಧಾರ ತೆಗೆದುಕೊಂಡಿದೆ' ಎಂದು ಹೇಳಿದ್ದಾರೆ.

ಕೇರಳ: ರಾತ್ರೋರಾತ್ರಿ 300 ಜನರ ಸ್ಥಳಾಂತರ



ಕಂಪನ ಸಹಿತ ಸ್ಫೋಟದಂಥ ಶಬ್ದಕ್ಕೆ ಬೆದರಿದ ಗ್ರಾಮಸ್ಥರು

ಮಲಪ್ಪುರಂ (ಪಿಟಿಐ): ಕೇರಳದ ಮಲಪ್ಪುರಂ ಜಿಲ್ಲೆಯ ಆನಕಲ್ ಪ್ರದೇಶದಲ್ಲಿ ಕಂಪನದ ಸಹಿತ ಸ್ಫೋಟದಂತಹ ಶಬ್ದ ಕೇಳಿ ಜನರು ಆತಂಕಗೊಂಡಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಸುಮಾರು 300 ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದರು.

ಮಂಗಳವಾರ ರಾತ್ರಿ 9.15ಕ್ಕೆ ಮೊದಲ ಬಾರಿ ಸದ್ದು ಕೇಳಿಸಿತು. ನಂತರ ರಾತ್ರಿ 10.15 ಹಾಗೂ 10.45ಕ್ಕೆ ಮತ್ತೆರಡು ಸಲ ಲಘು ಕಂಪನದ ಅನುಭವ ಉಂಟಾಯಿತು. ಈ ಶಬ್ದಗಳು ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಉಂಟಾಗಿದೆ. ಮಂಗಳವಾರ ತಡರಾತ್ರಿ 85 ಕುಟುಂಬಗಳ 287 ಜನರನ್ನು ಶಾಲೆಗೆ ಸ್ಥಳಾಂತರಿಸಲಾಗಿದೆ.

'ಗ್ರಾನೈಟ್ ಕ್ವಾರಿಗಳಿಂದ ಕೇಳುವ ಶಬ್ದಕ್ಕೆ ಸಮಾನವಾದ ಶಬ್ದ ಕೇಳಿಸಿತು. ನಿರಂತರವಾಗಿ ಕಂಪನ ಉಂಟಾಯಿತು. ಕೆಲವು ಮನೆಗಳಲ್ಲಿ ಬಿರುಕು ಕಂಡುಬಂದಿದೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

ಭಯಭೀತರಾಗಿ ನಾವು ಮನೆಯಿಂದ ಹೊರಗಡೆ ಓಡಿಹೋದೆವು. ಈಗ ಮತ್ತೆ ಮನೆಗೆ ವಾಪಸ್ ತೆರಳು ಭಯವಾಗುತ್ತಿದೆ ಎಂದು ಮಹಿಳೆಯೊಬ್ಬರು ತಿಳಿಸಿದ್ದಾರೆ. ಹತ್ತು ದಿನಗಳ ಹಿಂದೆಯೂ ಇದೇ ರೀತಿಯ ಶಬ್ದ ಕೇಳಿಸಿತ್ತು ಎಂದು ಹಿರಿಯ ನಾಗರಿಕರೊಬ್ಬರು ತಿಳಿಸಿದ್ದಾರೆ.

ಗ್ರಾಮ, ಕಂದಾಯ ಅಧಿಕಾರಿಗಳು ಹಾಗೂ ಪೊಲೀಸರು ಬಂದು ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಮಧ್ಯಪ್ರದೇಶದಲ್ಲಿ 2 ದಿನದಲ್ಲಿ 7 ಆನೆ ಸಾವು: ತನಿಖೆಗೆ ಆದೇಶ

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಬಾಂಧವಗಢ ಹುಲಿ ಮೀಸಲು ಅರಣ್ಯ ಪ್ರದೇಶದಲ್ಲಿ ಎರಡು ದಿನಗಳಲ್ಲಿ ಒಟ್ಟು ಏಳು ಆನೆಗಳು ಮೃತಪಟ್ಟಿವೆ. ಸಾವಿಗೆ ಕಾರಣ ತಿಳಿದುಬಂದಿಲ್ಲ.

'3 ಆನೆಗಳ ಸ್ಥಿತಿ ಗಂಭೀರವಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆನೆಗಳ ಸಾವಿನ ಪ್ರಕರಣಗಳ ಕುರಿತು ತನಿಖೆಗೆ ಎಸ್‌ಐಟಿ ರಚಿಸಲಾಗಿದೆ ಎಂದು ಮಧ್ಯಪ್ರದೇಶದ ಅರಣ್ಯ ಸಚಿವ ರಾಮನಿವಾಸ್ ರಾವತ್ ಅವರು ತಿಳಿಸಿದ್ದಾರೆ.

ಬಾಂಧವಗಢ ಮೀಸಲು ಅರಣ್ಯ ವಲಯದ ನಿರ್ದೇಶಕ ಪ್ರಕಾಶ್ ಕುಮಾರ್ ವರ್ಮಾ ಅವರು, 'ಮೇಲ್ನೋಟಕ್ಕೆ ಆನೆಗಳು 'ಕೊಡೊ' ಧಾನ್ಯ (ಸಿರಿಧಾನ್ಯ) ತಿಂದು ಸತ್ತಿರುವಂತಿದೆ. ಮರಣೋತ್ತರ ಪರೀಕ್ಷೆ ನಂತರವೇ ಸ್ಪಷ್ಟವಾದ ಕಾರಣ ತಿಳಿಯಲಿದೆ' ಎಂದರು.

'ಈ ಹಿಂಡಿನಲ್ಲಿ ಒಟ್ಟು 13 ಆನೆಗಳಿದ್ದವು' ಎಂದು ಅಧಿಕಾರಿಯು ವಿವರಿಸಿದರು.

> **ಈ ಘಟನೆ ಆತಂಕಕಾರಿ. ಸಮಗ್ರ ತನಿಖೆ ನಡೆಸಬೇಕು. ಇದರೊಂದಿಗೆ ಮೀಸಲು ಅರಣ್ಯದಲ್ಲಿ ಏಕಕಾಲಕ್ಕೆ ಆನೆಗಳ ಸಂತತಿ ಶೇ 10ರಷ್ಟು ಕುಗ್ಗಿದಂತಾಗಿದೆ**
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ವಿಮಾನಗಳಿಗೆ ಬಾಂಬ್ ಬೆದರಿಕೆ: 8 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಆರ್‌ಜಿಐಎ) ಬುಧವಾರ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದೆ.

ಚೆನ್ನೈಗೆ ಹೊರಟಿದ್ದ ಎರಡು ವಿಮಾನಗಳು ಮತ್ತು ಚೆನ್ನೈನಿಂದ ಬಂದ ಮತ್ತೊಂದು ವಿಮಾನವನ್ನು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ತಂಡಗಳು ಪರಿಶೀಲಿಸಿದವು. ಯಾವುದೇ ಸ್ಫೋಟಕಗಳು ಪತ್ತೆಯಾಗಲಿಲ್ಲ. ಈ ಬೆದರಿಕೆ ಸಂದೇಶಗಳು ಹುಸಿ ಎನ್ನುವುದು ದೃಢಪಟ್ಟಿತು.

ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶಗಳನ್ನು ಕಳುಹಿಸುತ್ತಿರುವ ಸಂಬಂಧ ಕಳೆದ ಒಂದು ವಾರದಲ್ಲಿ, ಹೈದರಾಬಾದ್ ಪೊಲೀಸರು ಎಂಟು ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸಂಪೂರ್ಣ ಭದ್ರತಾ ತಪಾಸಣೆಯ ನಂತರವೇ ವಿಮಾನಗಳನ್ನು ಸಂಚಾರಕ್ಕೆ ಮುಕ್ತಗೊಳಿಸಲಾಯಿತು.

ಬಾಂಬ್ ಬೆದರಿಕೆ: ಅಪರಿಚಿತ ವ್ಯಕ್ತಿ ವಿರುದ್ಧ ಪ್ರಕರಣ

ಇಂದೋರ್ (ಪಿಟಿಐ): ದೆಹಲಿಯಿಂದ ಇಂದೋರ್ ಮಾರ್ಗವಾಗಿ ಮುಂಬೈಗೆ ಹೊರಟಿದ್ದ ಏರ್ ಇಂಡಿಯಾ ವಿಮಾನದಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಸಂದೇಶವನ್ನು ಅಪರಿಚಿತ ವ್ಯಕ್ತಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದ. ತನಿಖೆಯ ನಂತರ ಇದೊಂದು ಹುಸಿ ಬೆದರಿಕೆ ಸಂದೇಶ ಎಂಬುದು ದೃಢಪಟ್ಟಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಮಧ್ಯಪ್ರದೇಶದ ಇಂದೋರ್ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಏರ್ ಇಂಡಿಯಾದ ವಿಮಾನ ಎಐ 636ರಲ್ಲಿ ಪೈಪ್ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಸಂದೇಶವನ್ನು ಮಂಗಳವಾರ ಸಂಜೆ 5.08ಕ್ಕೆ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಲಾಗಿದೆ ಎಂದು ಏರ್‌ಲೈನ್‌ನ ಸ್ಥಳೀಯ ಅಧಿಕಾರಿಯ ದೂರನ್ನು ಉಲ್ಲೇಖಿಸಿ ಏರೋಡ್ರೋಮ್ ಪೊಲೀಸ್ ಠಾಣಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೂಲಗಳ ಪ್ರಕಾರ, 100ಕ್ಕೂ ಹೆಚ್ಚು ದೇಶೀಯ ವಿಮಾನಗಳಿಗೆ ಮಂಗಳವಾರ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಕಳೆದ 16 ದಿನಗಳಲ್ಲಿ, 510ಕ್ಕೂ ಹೆಚ್ಚು ದೇಶೀಯ ಮತ್ತು ಅಂತರರಾಷ್ಟ್ರೀಯ ವಿಮಾನಗಳಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಬಾಂಬ್ ಬೆದರಿಕೆಯ ಹುಸಿ ಸಂದೇಶಗಳು ಬಂದಿವೆ.

ಜಮ್ಮುವಿನಲ್ಲಿ ಹತರಾಗಿದ್ದ ಉಗ್ರರು: ಅಧಿಕಾರಿಗಳ ಮಾಹಿತಿ

'ಭಯೋತ್ಪಾದಕರಿಗೆ ಜೈಷ್ ನಂಟು'

ಜಮ್ಮು (ಪಿಟಿಐ): ಜಮ್ಮುವಿನ ಅಖನೂರ್ ವಲಯದಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಹತರಾದ ಮೂವರು ಭಯೋತ್ಪಾದಕರು ನಿಷಧಿತ ಜೈಷ್-ಎ-ಮೊಹಮ್ಮದ್ ಸಂಘಟನೆಗೆ ಸೇರಿದವರು ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಈ ಮೂವರು ಪಾಕ್ ಆಕ್ರಮಿತ ಕಾಶ್ಮೀರದಿಂದ ಜಮ್ಮುವಿಗೆ ಈಚೆಗೆ ನುಸುಳಿದ್ದರು. ನಿಷೇಧಿತ ಲಷ್ಕರ್-ಎ-ತಯ್ಯಬಾ ಸಂಘಟನೆಯ ಭಯೋತ್ಪಾದಕರು ಸಾಮಾನ್ಯವಾಗಿ ಬಳಕೆ ಮಾಡುವ ಅಖನೂರ್ ಮಾರ್ಗವನ್ನು ತಾವೂ ಬಳಸಿಕೊಂಡು ಭಾರಿ ಪ್ರಮಾಣದಲ್ಲಿ ದಾಳಿ ನಡೆಸುವ ಯೋಜನೆಯನ್ನು ಈ ಮೂವರು ಹೊಂದಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಮೂವರು ಬಟ್ಟಲ್ ಪ್ರದೇಶದಿಂದ ಅಖನೂರ್ ಪ್ರದೇಶವನ್ನು ಪ್ರವೇಶಿಸಿದ್ದರು. ಅವರು ಜೈಷ್-ಎ-ಮೊಹಮ್ಮದ್ ಸಂಘಟನೆಯ ಜೊತೆ ನಂಟು ಹೊಂದಿದ್ದರು ಎಂಬುದು ಅವರಿಂದ ವಶಪಡಿಸಿಕೊಳ್ಳಲಾದ ವಯರ್‌ಲೆಸ್ ಉಪಕರಣವು ಖಚಿತಪಡಿಸಿದೆ.

ಈ ಪ್ರದೇಶದಲ್ಲಿ ಬಹುಕಾಲದಿಂದ ನುಸುಳುವಿಕೆ ಕಂಡುಬಂದಿಲ್ಲ ಎಂದು ಸೇನೆಯ ಅಧಿಕಾರಿ, ಮೇಜರ್ ಜನರಲ್ ಸಮೀರ್ ಶ್ರೀವಾಸ್ತವ ಅವರು ಹೇಳಿದ್ದರೂ, ಹಿಂದಿನ ವರ್ಷದ ಏಪ್ರಿಲ್ ಹಾಗೂ ಡಿಸೆಂಬರ್‌ನಲ್ಲಿ ಇಲ್ಲಿ ಭಯೋತ್ಪಾದಕರ ಚಲನವಲನ ಇತ್ತು ಎಂಬುದನ್ನು ಕೆಲವು ಅಧಿಕಾರಿಗಳು ಹೇಳಿದ್ದಾರೆ.


ಹತ್ಯೆಯಾದ ಭಯೋತ್ಪಾದಕರಿಂದ ವಶಪಡಿಸಿಕೊಳ್ಳಲಾದ ಶಸ್ತ್ರಾಸ್ತ್ರಗಳು —ಪಿಟಿಐ ಚಿತ್ರ

ಮಣಿಪುರ: ಸಾವಿರ ಮಂದಿಗೆ ₹5 ಕೋಟಿ ನೆರವು

ಇಂಫಾಲ್ (ಪಿಟಿಐ): ಮಣಿಪುರದ ವಿವಿಧೆಡೆ ಆಂತರಿಕವಾಗಿ ಸ್ಥಳಾಂತರಗೊಂಡ 1000 ಮಂದಿಯ ನೆರವಿಗೆ ರಾಜ್ಯ ಸರ್ಕಾರ ಸುಮಾರು ₹5 ಕೋಟಿ ಬಿಡುಗಡೆ ಮಾಡಿದೆ. ನಿತ್ಯದ ಅಗತ್ಯದ ವಸ್ತುಗಳನ್ನು ಒದಗಿಸುವ ಹಣವೂ ಇದರಲ್ಲಿ ಒಳಗೊಂಡಿದೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರು ಫೇಸ್‌ಬುಕ್‌ನಲ್ಲಿ, 'ಸ್ಥಳಾಂತರಗೊಂಡ 1000 ಜನರಿಗಾಗಿ ಹಣ ಬಿಡುಗಡೆ ಮಾಡಲಾಗಿದೆ' ಎಂದು ಹೇಳಿದ್ದಾರೆ.

ದೀಪಾವಳಿ ಮತ್ತು ನಿಂಗೋಲ್ ಚಕ್ಕೋಬ ಹಬ್ಬದ ಒಳಗಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಎಂದು ಅವರು ಇದಕ್ಕೂ ಮೊದಲು ಹೇಳಿದ್ದರು.

ರಾಮಾಯಣದ ಕತೆಗಳ ವಿವಿಧ ದೃಶ್ಯಗಳ ಸ್ತಬ್ಧಚಿತ್ರಗಳ ಮೆರವಣಿಗೆ

ಅಯೋಧ್ಯೆಯಲ್ಲಿ ದೀಪೋತ್ಸವಕ್ಕೆ ಚಾಲನೆ

ಅಯೋಧ್ಯೆ: ರಾಮಾಯಣದ ಕತೆಗಳ ವಿವಿಧ ದೃಶ್ಯಗಳನ್ನು ಸಾರುವ ಹಲವು ಸ್ತಬ್ಧಚಿತ್ರಗಳ ಮೆರವಣಿಗೆಯೊಂದಿಗೆ ದೀಪೋತ್ಸವಕ್ಕೆ ಇಲ್ಲಿ ಚಾಲನೆ ದೊರೆಯಿತು.

ಸ್ತಬ್ಧಚಿತ್ರಗಳು ರಾಮಪಥದಲ್ಲಿ ಮೆರವಣಿಗೆ ಮೂಲಕ ಸಾಗಿದವು. ಈ ವೇಳೆ ದೇಶದ ವಿವಿಧ ಭಾಗದ ಶಾಸ್ತ್ರೀಯ ನೃತ್ಯ ಕಲಾವಿದರು ನೃತ್ಯ ಪ್ರಕಾರಗಳನ್ನು ಪ್ರಸ್ತುತಪಡಿಸಿದರು. ಸ್ಥಳೀಯರು ಪುಷ್ಪ ಅರ್ಪಿಸಿ ಸ್ವಾಗತಿಸಿದರು.

ಸಾಕೇತ್ ಮಹಾವಿದ್ಯಾಲಯ ನಿರ್ಮಿಸಿದ್ದ 18 ಸ್ತಬ್ಧಚಿತ್ರಗಳು, ಮಾಹಿತಿ ಇಲಾಖೆಯ 11 ಹಾಗೂ ಪ್ರವಾಸೋದ್ಯಮ ಇಲಾಖೆಯ ಏಳು ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಭಾಗಿಯಾಗಿದ್ದವು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಆರತಿಯೊಂದಿಗೆ ದೀಪೋತ್ಸವವನ್ನು ಬರಮಾಡಿಕೊಂಡರು. ಭಗವಾನ್ ರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಾನ್ ಪಾತ್ರಧಾರಿ ಕಲಾವಿದರು ಕುಳಿತಿದ್ದ ರಥವನ್ನು ಅವರು ಎಳೆದರು.

ಸರ್ಕಾರವು ಸರಯೂ ನದಿ ತೀರದಲ್ಲಿ ಈ ವರ್ಷ 28 ಲಕ್ಷ ದೀಪಗಳನ್ನು ಬೆಳಗಿಸುವ ಮೂಲಕ ಹೊಸ ವಿಶ್ವ ದಾಖಲೆ ನಿರ್ಮಿಸುವ ಯೋಜನೆ ಹೊಂದಿದೆ. ಈ ದೀಪಗಳನ್ನು ಸ್ಥಳೀಯ ಕಲಾವಿದರಿಂದ ಖರೀದಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೀಪೋತ್ಸವದಲ್ಲಿ ಮ್ಯಾನ್ಮಾರ್, ನೇಪಾಳ, ಥಾಯ್ಲೆಂಡ್, ಮಲೇಷ್ಯಾ, ಕಾಂಬೋಡಿಯಾ, ಇಂಡೊನೇಷ್ಯಾದ ಕಲಾವಿದರು ನೃತ್ಯ ಪ್ರದರ್ಶಿಸಲಿದ್ದಾರೆ. ಉತ್ತರಾಖಂಡದ ಕಲಾವಿದರು ರಾಮಲೀಲಾ ಪ್ರದರ್ಶಿಸಲಿದ್ದಾರೆ.

ಸನಾತನ ಧರ್ಮ: ಅಡೆತಡೆಗಳ ನಿರ್ಮೂಲನೆಗೆ ಯೋಗಿ ಪಣ

ಲಖನೌ: ದೇಶದಲ್ಲಿ ಜಾತ್ಯತೀತತೆ ಹೆಸರಿನಲ್ಲಿ ಭಯೋತ್ಪಾದನೆ, ನಕ್ಸಲ್‌ವಾದಕ್ಕೆ ಪ್ರೋತ್ಸಾಹ ದೊರೆಯುತ್ತಿದೆ ಎಂದು ಆರೋಪಿಸಿದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಸನಾತನ ಧರ್ಮಕ್ಕೆ ಇರುವ ಎಲ್ಲ ಅಡೆತಡೆಗಳನ್ನು ತೊಡೆದುಹಾಕುವುದಾಗಿ ಪ್ರತಿಜ್ಞೆ ಮಾಡಿದರು.

ಅಯೋಧ್ಯೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸನಾತನ ಧರ್ಮ'ದ ಹಾದಿಗೆ ಅಡೆತಡೆ ತರುವವರಿಗೆ ತಕ್ಕ ಶಾಸ್ತಿ ಆಗಲಿದೆ. ರಾಜ್ಯದಲ್ಲಿ ಮಾಫಿಯಾದವರಿಗೆ ಆಗುತ್ತಿರುವ ಗತಿಯೇ ಅವರಿಗೂ ಆಗಲಿದೆ' ಎಂದು ಎಚ್ಚರಿಸಿದರು.

'ಜಾತ್ಯತೀತತೆ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವವರು ದೇಶದ ಆತ್ಮವನ್ನು ಗಾಸಿಗೊಳಿಸುತ್ತಿದ್ದಾರೆ. ಅವರು ಭಯೋತ್ಪಾದನೆ ಮತ್ತು ನಕ್ಸಲ್‌ವಾದವನ್ನು ಪ್ರೋತ್ಸಾಹಿಸುತ್ತಿದ್ದಾರೆ' ಎಂದು ಯೋಗಿ ಆರೋಪಿಸಿದರು.


ರಾಮಾಯಣದ ಪಾತ್ರಧಾರಿಗಳ ವೇಷ ಧರಿಸಿದ್ದ ಕಲಾವಿದರಿಗೆ ಯೋಗಿ ಆದಿತ್ಯನಾಥ ನಮಸ್ಕರಿಸಿದರು —ಪಿಟಿಐ ಚಿತ್ರ

ಷೇರುಪೇಟೆ ವಹಿವಾಟು

426 ▼ — ಹಿಂದಿನ ಅಂತ್ಯ 80,369; ಇಂದಿನ ಅಂತ್ಯ 79,942

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,466
ಇಂದಿನ ಅಂತ್ಯ	24,340
▼	126
ದಿನದ ಕನಿಷ್ಠ	24,307

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರಿ.ಬಿ)	₹318-520
ದ್ವಿತಳಿ (ಬಿ.ವಿ)	₹235-666

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹168

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹13000-15000
ದಾವಣಗೆರೆ	₹9286-9286
ಕೆ.ಆರ್.ಪೇಟೆ	₹11928-11928
ತಿಪಟೂರು	₹13500-14666

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹18000
ಎಸಿ	₹11390
ಆರ್‌ಪಿ	₹19000
ಆರ್‌ಸಿ	₹10140

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1310 (1300)
ಸೂರ್ಯಕಾಂತಿ (ರಿಫೈನ್ಡ್)	₹1330 (1330)
ಪಾಮೋಲಿನ್	₹1310 (1310)

ಸುಸ್ಥಿರ ಕೃಷಿ ಉತ್ತೇಜನಕ್ಕೆ ಒಪ್ಪಂದ

ಮುಂಬೈ (ಪಿಟಿಐ): ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರ ಕೃಷಿಗೆ ಉತ್ತೇಜನ ನೀಡುವ ಜೊತೆಗೆ ರೈತರ ಸಬಲೀಕರಣಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದ ಜೊತೆಗೆ, 3ಎಫ್ ಆಯಿಲ್ ಪಾಮ್ ಕಂಪನಿಯು ಒಪ್ಪಂದ ಮಾಡಿಕೊಂಡಿದೆ.

ಕಂಪನಿ ಹಾಗೂ ಕರ್ನಾಟಕದ ತೋಟಗಾರಿಕೆ ಇಲಾಖೆಯು ಈ ಕುರಿತು ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿವೆ.

ಈ ಪಾಲುದಾರಿಕೆಯಡಿ ರೈತರಿಗೆ ಸುಧಾರಿತ ಕೃಷಿ ತಂತ್ರಜ್ಞಾನ ಒದಗಿಸಲಾಗುವುದು. ತರಬೇತಿ ಕಾರ್ಯಕ್ರಮ, ಉತ್ಪಾದನೆ ಹೆಚ್ಚಿಸಲು ಅಗತ್ಯ ಸಂಪನ್ಮೂಲಗಳನ್ನು ಒದಗಿಸಲಾಗುವುದು ಎಂದು ಕಂಪನಿಯು ತಿಳಿಸಿದೆ.

ರಾಜ್ಯದಲ್ಲಿ ಅಡುಗೆ ಎಣ್ಣೆ ಉತ್ಪಾದನೆಯ ಹೆಚ್ಚಳಕ್ಕೆ ಒತ್ತು ನೀಡಲಾಗುವುದು. ಕರ್ನಾಟಕದ ಉಡುಪಿ, ದಕ್ಷಿಣ ಕನ್ನಡ ಮತ್ತು ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ತಾಳೆ ಬೆಳೆಗಾರರಿಗೆ ಈ ಕೃಷಿ ಮಾಡಲು ದೀರ್ಘಾವಧಿವರೆಗೆ ನೆರವು ಕಲ್ಪಿಸಲಾಗುವುದು ಎಂದು ತಿಳಿಸಿದೆ.

ಒಂದು ವರ್ಷದಲ್ಲಿ 10 ಗ್ರಾಂಗೆ ₹21 ಸಾವಿರ ಏರಿಕೆ

ಚಿನ್ನದ ದರ ನಾಗಾಲೋಟ

ನವದೆಹಲಿ (ಪಿಟಿಐ): ಅಂತರ ರಾಷ್ಟ್ರೀಯ ಹಾಗೂ ದೇಶೀಯ ಮಾರುಕಟ್ಟೆಯಲ್ಲಿ ಹಳದಿ ಲೋಹದ ಬೆಲೆ ಏರಿಕೆಯಾಗುತ್ತಿದೆ. ಕಳೆದ ಒಂದು ವರ್ಷದಲ್ಲಿ 10 ಗ್ರಾಂ ಶುದ್ಧ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯಲ್ಲಿ ಶೇ 35ರಷ್ಟು ಹೆಚ್ಚಳವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ವರ್ಷದ ಅಕ್ಟೋಬರ್ 29ರಂದು ಶುದ್ಧ ಚಿನ್ನದ ಬೆಲೆಯು 10 ಗ್ರಾಂಗೆ ₹61,200 ಇತ್ತು. ಬುಧವಾರದ ವಹಿವಾಟಿನಲ್ಲಿ ₹82,400ಕ್ಕೆ ಮುಟ್ಟಿದೆ. ಒಟ್ಟಾರೆ ಒಂದು ವರ್ಷದ ಅವಧಿಯಲ್ಲಿ ₹21,200 ಏರಿಕೆಯಾಗಿದೆ.

ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಚಿನ್ನದ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಕಡಿತ ಮಾಡಿತ್ತು. ಇದರಿಂದ ಚಿನ್ನದ ಬೆಲೆಯಲ್ಲಿ ಇಳಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಜಾಗತಿಕ ಬಿಕ್ಕಟ್ಟಿನ ಪರಿಣಾಮ ಧಾರಣೆಯು ಏರಿಕೆಯ ಹಾದಿ ಹಿಡಿದಿದೆ.

ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಇನ್ನೂ ಶಮನಗೊಂಡಿಲ್ಲ. ಇದು ಸರಕು ಸಾಗಣೆ ಮತ್ತು ವಿಮಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿದೆ. ಮತ್ತೊಂದೆಡೆ ಅಮೆರಿಕ ಬಾಂಡ್ ಗಳಿಕೆ ಇಳಿಕೆಯಾಗಿದೆ. ಡಾಲರ್ ಮೌಲ್ಯ ಕಡಿಮೆಯಾಗಿದೆ. ಹಾಗಾಗಿ, ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ದೃಷ್ಟಿ ನೆಟ್ಟಿದ್ದಾರೆ. ಇದರಿಂದ ಬೆಲೆ ಹೆಚ್ಚಳವಾಗುತ್ತಿದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಸ್ಟ್ಯಾಂಡರ್ಡ್ ಚಿನ್ನದ ದರ ಏರಿಕೆ: ಧನ್‌ತೇರಸ್ ಹಾಗೂ ದೀಪಾವಳಿ ಹಬ್ಬದ ಅಂಗವಾಗಿ ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರದಲ್ಲಿ ಏರಿಕೆಯಾಗಿದೆ. ದೆಹಲಿಯ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ 10 ಗ್ರಾಂಗೆ ₹1 ಸಾವಿರ ಏರಿಕೆಯಾಗಿದ್ದು, ₹82,000 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,300 ಏರಿಕೆಯಾಗಿ, ₹1.01 ಲಕ್ಷಕ್ಕೆ ಮುಟ್ಟಿದೆ.

‘ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು, ಅಮೆರಿಕದ ಅಧ್ಯಕ್ಷೀಯ ಚುನಾವಣಾ ಫಲಿತಾಂಶದ ಅನಿಶ್ಚಿತತೆಯು ಹಳದಿ ಲೋಹದ ಬೆಲೆ ಏರಿಕೆ ಮೇಲೆ ಪರಿಣಾಮ ಬೀರಿವೆ. ಹಬ್ಬದ ಋತುವಿನಲ್ಲಿ ಸ್ಥಳೀಯ ಆಭರಣ ತಯಾರಕರು ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಲು ಹೆಚ್ಚು ಚಿನ್ನ ಖರೀದಿಸುತ್ತಿದ್ದಾರೆ. ಇದರಿಂದ ಧಾರಣೆ ಏರಿಕೆಯಾಗಿದೆ’ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ವಿಶ್ಲೇಷಕ ಜತಿನ್ ತ್ರಿವೇದಿ ಹೇಳಿದ್ದಾರೆ.

ಬೇಡಿಕೆ ಶೇ 18ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಕೇಂದ್ರ ಸರ್ಕಾರವು ಚಿನ್ನದ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಕಡಿತಗೊಳಿಸಿದ್ದರಿಂದ ಭಾರತದಲ್ಲಿ ಚಿನ್ನದ ಬೇಡಿಕೆಯು ಹೆಚ್ಚಳವಾಗಿದೆ.

ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಬೇಡಿಕೆಯು 248.3 ಟನ್ ಆಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ತಿಳಿಸಿದೆ.

ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ ಚಿನ್ನದ ಬೇಡಿಕೆಯು 210.2 ಟನ್ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 18ರಷ್ಟು ಹೆಚ್ಚಳವಾಗಿದೆ ಎಂದು ಬುಧವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

ಪ್ರಸಕ್ತ ವರ್ಷದಲ್ಲಿ ದೇಶದ ಚಿನ್ನದ ಬೇಡಿಕೆಯು 700ರಿಂದ 750 ಟನ್ ಆಗುವ ನಿರೀಕ್ಷೆಯಿದೆ. ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಬೇಡಿಕೆ ಪ್ರಮಾಣ ತಗ್ಗಲಿದೆ ಎಂದು ವಿವರಿಸಿದೆ.

2023ರಲ್ಲಿ ಭಾರತದ ಚಿನ್ನದ ಬೇಡಿಕೆಯು 761 ಟನ್ ಆಗಿತ್ತು.

ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಚಿನ್ನದ ಒಟ್ಟು ಬೇಡಿಕೆ ಮೌಲ್ಯವು ₹1.65 ಲಕ್ಷ ಕೋಟಿ ಆಗಿದೆ. ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ ₹1.07 ಲಕ್ಷ ಕೋಟಿ ಆಗಿತ್ತು.

‘ಕೇಂದ್ರ ಸರ್ಕಾರವು ಜುಲೈನಲ್ಲಿ ಚಿನ್ನದ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸಿತು. ಇದೇ ಬೇಡಿಕೆ ಹೆಚ್ಚಳಕ್ಕೆ ಕಾರಣ. 2015ರ ಬಳಿಕ ಈ ತ್ರೈಮಾಸಿಕದಲ್ಲಿ ಚಿನ್ನಾಭರಣ ಬೇಡಿಕೆಯು ಹೆಚ್ಚಳವಾಗಿದೆ’ ಎಂದು ಭಾರತದ ಡಬ್ಲ್ಯುಜಿಸಿ ಪ್ರಾದೇಶಿಕ ಸಿಇಒ ಸಚಿನ್ ಜೈನ್ ತಿಳಿಸಿದ್ದಾರೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಆರ್‌ಬಿಐ 13 ಟನ್ ಚಿನ್ನ ಖರೀದಿಸಿದೆ. ಮೊದಲ ಹಾಗೂ ಎರಡನೇ ತ್ರೈಮಾಸಿಕದಲ್ಲಿ ತಲಾ 18 ಟನ್ ಖರೀದಿಸಿತ್ತು.

360 ಟನ್ ಆಮದು

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು 360.2 ಟನ್ ಚಿನ್ನ ಆಮದು ಮಾಡಿಕೊಳ್ಳಲಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 193 ಟನ್ ಆಮದು ಮಾಡಿಕೊಳ್ಳಲಾಗಿತ್ತು. ಇದಕ್ಕೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಶೇ 87ರಷ್ಟು ಹೆಚ್ಚಳವಾಗಿದೆ ಎಂದು ವರದಿ ತಿಳಿಸಿದೆ.



ಕೆಎಸ್‌ಆರ್‌ಟಿಸಿಯು ಸಾರ್ವಜನಿಕರಿಗೆ ನೂತನವಾಗಿ ಒದಗಿಸಿರುವ ಐರಾವತ ಕ್ಲಬ್‌ಕ್ಲಾಸ್–2.0 ಬಸ್‌ಗಳಿಗೆ ಬುಧವಾರ ಬೆಂಗಳೂರಿನಲ್ಲಿ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ಶಕ್ತಿ’ ಮರುಪರಿಶೀಲನೆ ಶಿವಕುಮಾರ್ ಸುಳಿವು

ಒಂದನೇ ಪುಟದಿಂದ...

ನಿಗಮದ ಬಸ್‌ಗಳಲ್ಲಿ ಸೇವೆ ಸಲ್ಲಿಸುವಾಗ ಅಪಘಾತಕ್ಕೆ ಒಳಗಾಗಿ ಮೃತರಾದ ಸಿಬ್ಬಂದಿಯ ಕುಟುಂಬಗಳಿಗೆ ಸಾರಿಗೆ ಸುರಕ್ಷಾ ಪರಿಹಾರ ವಿಮಾ ಯೋಜನಡಿ ತಲಾ ₹1 ಕೋಟಿ ಪರಿಹಾರದ ಚೆಕ್, ಕಾಯಿಲೆ ಮತ್ತಿತರ ಕಾರಣಗಳಿಂದ ಮೃತರಾದ ಸಿಬ್ಬಂದಿ ಕುಟುಂಬಗಳಿಗೆ ತಲಾ ₹10 ಲಕ್ಷದ ಪರಿಹಾರ ಚೆಕ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ ಉಪಸ್ಥಿತರಿದ್ದರು.

ಪ್ರಸ್ತುತ ತೆರಿಗೆ ಪಾವತಿಸುವ, ಸರ್ಕಾರಿ ಉದ್ಯೋಗದಲ್ಲಿರುವ ಮಹಿಳೆಯರೂ ಸೇರಿದಂತೆ ರಾಜ್ಯದ ಎಲ್ಲ ಮಹಿಳೆಯರಿಗೂ ಸಾರಿಗೆ ನಿಗಮದ ಎಲ್ಲ ಬಸ್‌ಗಳಲ್ಲೂ ಉಚಿತವಾಗಿ ಪ್ರಯಾಣಿಸಲು ಶಕ್ತಿ ಯೋಜನೆ ಅಡಿ ಅವಕಾಶ ಕಲ್ಪಿಸಲಾಗಿದೆ.

ಅಗ್ನಿ ಸುರಕ್ಷತಾ ವ್ಯವಸ್ಥೆ

ಹೊಸ ಐರಾವತ ಕ್ಲಬ್ ಕ್ಲಾಸ್–2.0 ನಲ್ಲಿ ಅಗ್ನಿ ಅವಘಡ ತಡೆ ವ್ಯವಸ್ಥೆ ಅಳವಡಿಸಲಾಗಿದೆ. ಪ್ರಯಾಣಿಕರ ಸಾಮಗ್ರಿಗಳನ್ನು ಇಡುವ ತಳಭಾಗದ ಒಂದು ಭಾಗದಲ್ಲಿ ನೀರಿನ ಟ್ಯಾಂಕ್ ಅಳವಡಿಸಲಾಗಿದೆ. ಈ ಟ್ಯಾಂಕ್‌ನಿಂದ ಪ್ರತಿ ಸೀಟುಗಳ ಬಳಿಗೆ ಸ್ಟೀಲ್‌ಪೈಪ್ ಮೂಲಕ ನೀರು ಸರಬರಾಜಾಗುತ್ತದೆ.

ಅಗ್ನಿ ಅವಘಡ ಸಂಭವಿಸಿದಾಗ ಸ್ವಯಂ ಚಾಲಿತವಾಗಿ ನೀರು ಎಲ್ಲ ಕಡೆ ಚಿಮ್ಮುತ್ತದೆ. ಇದರಿಂದ ಬಸ್ ಸುಟ್ಟು ಕರಕಲಾಗುವುದಿಲ್ಲ. ಪ್ರಯಾಣಿಕರ ಜೀವದ ರಕ್ಷಣೆಯೂ ಆಗುತ್ತದೆ. ಈಗಿರುವ ಐರಾವತ ಕ್ಲಬ್‌ಕ್ಲಾಸ್‌ಗಿಂತ ಉದ್ದವಾಗಿರುವ ಬಸ್‌ನ ಸೀಟುಗಳು ವಿಶಾಲವಾಗಿದ್ದು, ಪ್ರಯಾಣಿಕರು ಆರಾಮದಾಯಕವಾಗಿ ಕುಳಿತುಕೊಳ್ಳಬಹುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಹತ್ತಿ ಖರೀದಿ ಕೇಂದ್ರ ಆರಂಭ

ಹುಬ್ಬಳ್ಳಿ: ಭಾರತೀಯ ಹತ್ತಿ ನಿಗಮದಿಂದ 2024–25ನೇ ಸಾಲಿನಲ್ಲಿ ಹತ್ತಿ ಖರೀದಿ ಆರಂಭಿಸಲಾಗಿದೆ. ನಿಗಮದ ಹುಬ್ಬಳ್ಳಿ ಶಾಖೆ ವ್ಯಾಪ್ತಿಯ ಧಾರವಾಡ, ಬಳ್ಳಾರಿ, ಹಾವೇರಿ, ವಿಜಯಪುರ, ಯಾದಗಿರಿ, ರಾಯಚೂರು ಮತ್ತು ಬೀದರ್ ಸೇರಿ 10 ಜಿಲ್ಲೆಗಳಲ್ಲಿ 26 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ.

ತೇವಾಂಶ ಶೇ 8ಕ್ಕಿಂತ ಕಡಿಮೆ ಇದ್ದರೆ ನಿಗಮದಿಂದ ಸಂಪೂರ್ಣ ಕನಿಷ್ಠ ಬೆಂಬಲ ಬೆಲೆ ನೀಡಿ ಖರೀದಿಸಲಾಗುತ್ತದೆ. ತೇವಾಂಶ ಶೇ 8ರಿಂದ 12ರ ಒಳಗಿದ್ದರೆ ತೇವಾಂಶದ ಪ್ರಮಾಣಕ್ಕೆ ಅನುಗುಣವಾಗಿ ಕನಿಷ್ಠ ಬೆಂಬಲ ಬೆಲೆಯಲ್ಲಿ ಕಡಿತ ಮಾಡಲಾಗುತ್ತದೆ.

‘ರೈತರು ತೇವಾಂಶರಹಿತ ಹತ್ತಿಯನ್ನು ಮಾರಾಟಕ್ಕೆ ತರಬೇಕು. ಹೆಚ್ಚಿನ ಮಾಹಿತಿಗೆ Cott-Ally ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು’ ಎಂದು ನಿಗಮದ ಹುಬ್ಬಳ್ಳಿ ಶಾಖೆಯ ಪ್ರಕಟಣೆ ತಿಳಿಸಿದೆ.

ಓಲಾ ಸೇವಾ ಕೇಂದ್ರ ಹೆಚ್ಚಳ

ಬೆಂಗಳೂರು (ಪಿಟಿಐ): ಇ–ಸ್ಕೂಟರ್ ತಯಾರಿಕಾ ಕಂಪನಿಯಾದ ಓಲಾ ಎಲೆಕ್ಟ್ರಿಕ್, ದೇಶದಾದ್ಯಂತ ಹೊಸದಾಗಿ 50ಕ್ಕೂ ಹೆಚ್ಚು ಸೇವಾ ಕೇಂದ್ರಗಳನ್ನು ತೆರೆದಿದೆ ಎಂದು ಮೂಲಗಳು ತಿಳಿಸಿವೆ.

ಹಾಲಿ ಇರುವ ಮತ್ತು ಹೊಸ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸಲು 500ಕ್ಕೂ ಹೆಚ್ಚು ಟೆಕ್ನಿಷಿಯನ್‌ಗಳನ್ನು ನೇಮಕ ಮಾಡಿಕೊಂಡಿದೆ. ತನ್ನ ಇ–ಸ್ಕೂಟರ್‌ಗಳ ರಿಪೇರಿ ಕಾರ್ಯವನ್ನು ಸುಗಮಗೊಳಿಸಲು ಈ ಕ್ರಮಕೈಗೊಂಡಿದೆ ಎಂದು ಹೇಳಿವೆ.

ಕೆಲವು ಕೇಂದ್ರಗಳಲ್ಲಿ ಗ್ರಾಹಕರಿಗೆ ಸಕಾಲದಲ್ಲಿ ಸೇವೆ ದೊರೆಯುತ್ತಿಲ್ಲ ಎಂಬ ಆರೋಪ ಕೇಳಿಬಂದ ಬೆನ್ನಲ್ಲೇ ಸೇವಾ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಿದೆ ಎಂದು ಹೇಳಲಾಗಿದೆ.

ಮೂಲಸೌಕರ್ಯ ವಲಯದ ಪ್ರಗತಿ ಶೇ 2ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಕಚ್ಚಾ ತೈಲ, ನೈಸರ್ಗಿಕ ಅನಿಲ ಮತ್ತು ವಿದ್ಯುತ್ ವಲಯದ ಉತ್ಪಾದನೆಯಲ್ಲಿನ ಇಳಿಕೆಯಿಂದಾಗಿ ದೇಶದ ಪ್ರಮುಖ 8 ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಸೆಪ್ಟೆಂಬರ್‌ನಲ್ಲಿ ಶೇ 2ರಷ್ಟು ಇಳಿಕೆಯಾಗಿದೆ.

2023ರ ಸೆಪ್ಟೆಂಬರ್‌ನಲ್ಲಿ ಶೇ 9.5ರಷ್ಟು ದಾಖಲಾಗಿತ್ತು ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಆಗಸ್ಟ್‌ನಲ್ಲಿ ಉತ್ಪಾದನಾ ಬೆಳವಣಿಗೆಯು ಶೇ 1.6ರಷ್ಟಾಗಿತ್ತು.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನ, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಈ ಎಂಟು ವಲಯಗಳಾಗಿವೆ.

2024–25ರ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನ, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಬೆಳವಣಿಗೆಯು ಶೇ 4.2ರಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 8.2ರಷ್ಟಾಗಿತ್ತು.

ದೆಹಲಿ ತಲುಪಿದ 840 ಟನ್ ಈರುಳ್ಳಿ

ನವದೆಹಲಿ (ಪಿಟಿಐ): ಚಿಲ್ಲರೆ ಮಾರುಕಟ್ಟೆಯಲ್ಲಿ ಈರುಳ್ಳಿ ದರ ಹೆಚ್ಚಳವಾಗಿದೆ. ಇದನ್ನು ನಿಯಂತ್ರಿಸಲು 840 ಟನ್ ಈರುಳ್ಳಿ ಹೊತ್ತ ಎರಡನೇ ರೈಲು ಬುಧವಾರ ದೆಹಲಿಗೆ ತಲುಪಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಅಕ್ಟೋಬರ್ 20ರಂದು 1,600 ಟನ್ ಈರುಳ್ಳಿ ಹೊತ್ತ ಕಾಂದಾ ಎಕ್ಸ್‌ಪ್ರೆಸ್ ರೈಲು ದೆಹಲಿಗೆ ತಲುಪಿತ್ತು.

ನಾಫೆಡ್ ಮೂಲಕ ದೆಹಲಿಯಲ್ಲಿ ರಿಯಾಯಿತಿ ದರದಡಿ ಈರುಳ್ಳಿಯನ್ನು ಪ್ರತಿ ಕೆ.ಜಿಗೆ ₹35ರಂತೆ ಮಾರಾಟ ಮಾಡಲಾಗುವುದು. ಪ್ರಸ್ತುತ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹60ರಿಂದ ₹80 ದರ ಇದೆ. ಸಮಯ ಮತ್ತು ವೆಚ್ಚದ ಪ್ರಮಾಣ ತಗ್ಗಿಸಲು ರೈಲಿನ ಮೂಲಕ ಈರುಳ್ಳಿ ಸಾಗಣೆಗೆ ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದೆ.

ಅಕ್ಟೋಬರ್ 26ರಂದು 840 ಟನ್ ಈರುಳ್ಳಿಯನ್ನು ರೈಲಿನ ಮೂಲಕ ಚೆನ್ನೈಗೆ ಸಾಗಣೆ ಮಾಡಲಾಗಿದೆ. ಇಷ್ಟೇ ಪ್ರಮಾಣದ ಈರುಳ್ಳಿಯನ್ನು ನಾಸಿಕ್‌ನಿಂದ ಗುವಾಹಟಿಗೆ ರವಾನೆ ಮಾಡಲಾಗಿದೆ. ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳವು (ಎನ್‌ಸಿಸಿಎಫ್) ದೇಶದ 22 ರಾಜ್ಯಗಳ 104 ಸ್ಥಳಗಳಲ್ಲಿ ರಿಯಾಯಿತಿ ದರದಲ್ಲಿ ಈರುಳ್ಳಿ ಮಾರಾಟ ಮಾಡುತ್ತಿದೆ. ನಾಫೆಡ್ 16 ರಾಜ್ಯಗಳ 52 ಸ್ಥಳಗಳಲ್ಲಿ ಮಾರಾಟ ಮಾಡುತ್ತಿದೆ.

ಏರ್ ಇಂಡಿಯಾದ 60 ವಿಮಾನ ಸಂಚಾರ ರದ್ದು

ಮುಂಬೈ (ಪಿಟಿಐ): ಏರ್ ಇಂಡಿಯಾ ವಿಮಾನಯಾನ ಕಂಪನಿಯು ನವೆಂಬರ್ 15ರಿಂದ ಡಿಸೆಂಬರ್ 31ರ ವರೆಗೆ ಭಾರತ ಮತ್ತು ಅಮೆರಿಕದ ನಡುವೆ ಸಂಚರಿಸುವ 60 ವಿಮಾನಗಳ ಸಂಚಾರವನ್ನು ರದ್ದುಪಡಿಸಿದೆ ಎಂದು ಕಂಪನಿಯ ಮೂಲಗಳು ತಿಳಿಸಿವೆ.

ಈ ಅವಧಿಯಲ್ಲಿ ಭಾರತದಿಂದ ಅಮೆರಿಕಕ್ಕೆ ಸಂಚರಿಸುವವರ ಸಂಖ್ಯೆ ಹೆಚ್ಚಿರುತ್ತದೆ. ಸ್ಯಾನ್‌ಫ್ರಾನ್ಸಿಸ್ಕೊ, ಚಿಕಾಗೊ, ವಾಷಿಂಗ್ಟನ್, ನ್ಯೂಯಾರ್ಕ್ ಸೇರಿ ಇತರೆ ನಗರಗಳ ನಡುವೆ ಸಂಚರಿಸುತ್ತಿದ್ದ ವಿಮಾನಗಳ ಸಂಚಾರವನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿವೆ.

‘ಕೆಲವು ವಿಮಾನಗಳ ನಿರ್ವಹಣಾ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಹಾಗಾಗಿ, ಅವು ಸೇವೆಗೆ ಲಭ್ಯವಿಲ್ಲ. ಇದರಿಂದ ಈ ಕ್ರಮ ಕೈಗೊಳ್ಳಲಾಗಿದೆ’ ಎಂದು ಏರ್ ಇಂಡಿಯಾದ ಪ್ರಕಟಣೆ ತಿಳಿಸಿದೆ.

‘ಈ ಬಗ್ಗೆ ಟಿಕೆಟ್ ಬುಕಿಂಗ್ ಮಾಡಿರುವ ಪ್ರಯಾಣಿಕರಿಗೆ ಮಾಹಿತಿ ನೀಡಲಾಗಿದೆ. ಅದೇ ದಿನ ಅಥವಾ ಬದಲಿ ದಿನಗಳಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ’ ಎಂದು ಹೇಳಿದೆ. ಬಹುತೇಕ ಮುಂಬೈ ಮತ್ತು ದೆಹಲಿಯಿಂದ ಕಾರ್ಯಾಚರಣೆ ನಡೆಸುವ ವಿಮಾನಗಳ ಸೇವೆ ರದ್ದಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	41000-49500
ಕುಮಟ	
ಚಿಪ್ಪು	22689-26019
ಕೋಕ	6009-22029
ಫ್ಯಾಕ್ಟರಿ	6019-16469
ಹಳೆಚಾಲಿ	36899-39509
ಹೊಸಚಾಲಿ	30369-34699
ಶಿವಮೊಗ್ಗ	
ಬೆಟ್ಟೆ	46100-56429
ಗೊರಬಲು	16009-32529
ರಾಶಿ	34009-50599
ಸರಕು	57869-87500
ಶಿರಸಿ	
ಬೆಟ್ಟೆ	29399-38659
ಬಿಳಿಗೋಟು	22130-31277
ಚಾಲಿ	32308-35919
ರಾಶಿ	40608-43698

ಸೆನ್ಸೆಕ್ಸ್, ನಿಫ್ಟಿ ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಹಣಕಾಸು ಹಾಗೂ ಬ್ಯಾಂಕಿಂಗ್ ಷೇರುಗಳ ಮಾರಾಟ ಹೆಚ್ಚಳದಿಂದಾಗಿ ಬುಧವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 426 ಅಂಶ ಇಳಿಕೆ ಕಂಡು, 79,942 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 126 ಅಂಶ ಇಳಿಕೆ ಕಂಡು, 24,340 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಇನ್ಫೊಸಿಸ್, ಐಸಿಐಸಿಐ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಸ್‌ಬಿಐ, ಎಚ್‌ಸಿಎಲ್ ಟೆಕ್ನಾಲಜೀಸ್, ಎಕ್ಸಿಸ್ ಬ್ಯಾಂಕ್, ಎನ್‌ಟಿಪಿಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.63ರಷ್ಟು ಏರಿಕೆಯಾಗಿದ್ದು, 71.57 ಡಾಲರ್ ಆಗಿದೆ.

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3000-4500
ಮಧ್ಯಮ	₹2000-3000
ಸಣ್ಣ	₹1000-2000

ಇರಾನ್: ಐಫೋನ್ ಮೇಲಿನ ನಿಷೇಧ ವಾಪಸ್

ಟೆಹರಾನ್ (ಎಪಿ): ಇರಾನ್‌ನಲ್ಲಿ ಆ್ಯಪಲ್ ಕಂಪನಿಯ ಐಫೋನ್ ಸರಣಿಯ ಮೊಬೈಲ್‌ಗಳ ಮಾರಾಟ ಮತ್ತು ಬಳಕೆಗೆ ವಿಧಿಸಿದ್ದ ನಿಷೇಧವನ್ನು ಅಲ್ಲಿನ ಸರ್ಕಾರ ವಾಪಸ್ ಪಡೆದಿದೆ.

ದೂರಸಂಪರ್ಕ ಸಚಿವಾಲಯವು ಈ ಬಗ್ಗೆ ಬುಧವಾರ ಪ್ರಕಟಣೆ ಹೊರಡಿಸಿದ್ದು, ಐಫೋನ್ 14, 15 ಮತ್ತು 16 ಸರಣಿಯ ಮೊಬೈಲ್‌ಗಳನ್ನು ಅಧಿಕೃತವಾಗಿ ಮಾರಾಟ ಮಾಡಲು ಅನುಮತಿ ನೀಡಿರುವುದಾಗಿ ತಿಳಿಸಿದೆ.

‘ಇರಾನ್‌ನ ಮಾರುಕಟ್ಟೆಯಲ್ಲಿ ಐಫೋನ್ ಕಂಪನಿಯ ನೂತನ ಮಾದರಿಯ ಮೊಬೈಲ್‌ಗಳ ಮಾರಾಟಕ್ಕೆ ಅನುಮತಿ ನೀಡಲಾಗಿದೆ. ಈ ನಮ್ಮ ಪ್ರಯತ್ನವನ್ನು ಇರಾನ್‌ನ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಬೆಂಬಲಿಸಿದ್ದಾರೆ’ ಎಂದು ದೂರಸಂಪರ್ಕ ಸಚಿವ ಸತಾರ್ ಹಮೇಶಿ ಅವರು ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಆ್ಯಪಲ್ ಕಂಪನಿಯ ಹೊಸ ಮಾದರಿ ಮೊಬೈಲ್‌ಗಳ ಮಾರಾಟ ಮತ್ತು ಬಳಕೆಗೆ ಇರಾನ್ 2023ರಲ್ಲಿ ನಿಷೇಧ ಹೇರಿತ್ತು.

ವಿತ್ತೀಯ ಕೊರತೆ ಅಂತರ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 29.4ರಷ್ಟು ಆಗಿದೆ.

ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು ಸೆಪ್ಟೆಂಬರ್ ಅಂತ್ಯಕ್ಕೆ ₹4.74 ಲಕ್ಷ ಕೋಟಿಯಷ್ಟಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಬುಧವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

2023–24ನೇ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟಿತ್ತು. 2024–25ನೇ ಆರ್ಥಿಕ ವರ್ಷದಲ್ಲಿ ಇದನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.9ಕ್ಕೆ ತಗ್ಗಿಸಲು ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಿದೆ. ಮೌಲ್ಯದ ಲೆಕ್ಕದಲ್ಲಿ ಇದು ₹16.13 ಲಕ್ಷ ಕೋಟಿ ಆಗಿದೆ.

ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಒಟ್ಟು ₹12.65 ಲಕ್ಷ ಕೋಟಿ ನಿವ್ವಳ ತೆರಿಗೆ ವರಮಾನ ಸಂಗ್ರಹವಾಗಿದೆ. ಇದೇ ಅವಧಿಯಲ್ಲಿ ಸರ್ಕಾರದ ವೆಚ್ಚವು ₹21.11 ಲಕ್ಷ ಕೋಟಿ ಆಗಿದೆ. ಇದು ಬಜೆಟ್ ಅಂದಾಜಿನ ಶೇ 43.8ರಷ್ಟು ಆಗಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ಭಾರತ ತಂಡದ ಆಟಗಾರರು; ಸಹಾಯಕ ಕೋಚ್ ನಾಯರ್ ಹೇಳಿಕೆ

ಲಯಕ್ಕೆ ಮರಳುವರು ವಿರಾಟ್, ರೋಹಿತ್

ಮುಂಬೈ (ಪಿಟಿಐ): ವೈಫಲ್ಯದಿಂದ ಹೊರಬರಲು ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ಸಮಯ ಮತ್ತು ಅವಕಾಶ ನೀಡಬೇಕು ಎಂದು ಭಾರತ ಕ್ರಿಕೆಟ್ ತಂಡದ ಸಹಾಯಕ ಕೋಚ್ ಅಭಿಷೇಕ್ ನಾಯರ್ ಅಭಿಪ್ರಾಯಪಟ್ಟಿದ್ದಾರೆ.

ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಮೊದಲೆರಡು ಪಂದ್ಯಗಳನ್ನು ಸೋತಿರುವ ತಂಡವು ನವೆಂಬರ್ 1ರಿಂದ ಆರಂಭವಾಗಲಿರುವ ಮೂರನೇ ಪಂದ್ಯಕ್ಕೆ ಸಜ್ಜಾಗುತ್ತಿದೆ. 12 ವರ್ಷಗಳ ನಂತರ ತವರು ನೆಲದಲ್ಲಿ ಟೆಸ್ಟ್ ಸರಣಿ ಸೋತಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ತಾರಾ ವರ್ಚಸ್ಸಿನ ಬ್ಯಾಟರ್ ವಿರಾಟ್ ಕೊಹ್ಲಿ ಅವರ ವೈಫಲ್ಯದ ವಿರುದ್ಧ ಟೀಕೆಗಳು ಕೇಳಿಬಂದಿದ್ದವು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ನಾಯರ್, 'ಇಬ್ಬರೂ ಆಟಗಾರರ ಬಗ್ಗೆ ಎಲ್ಲ ಕಡೆಯೂ ಪ್ರೀತಿಯ ಅಭಿವ್ಯಕ್ತಿಯನ್ನು ನಾನು ನೋಡಿದ್ದೇನೆ. ಈ ದೀರ್ಘ ಪಯಣದಲ್ಲಿ ನೆಚ್ಚಿನ ಆಟಗಾರರು ವೈಫಲ್ಯ ಅನುಭವಿಸಿದಾಗ ಅಭಿಮಾನಿಗಳಿಗೆ ನಿರಾಶೆ ಆಗುತ್ತದೆ. ಆದರೆ ರೋಹಿತ್ ಮತ್ತು ಕೊಹ್ಲಿ ಮರಳಿ ತಮ್ಮ ಸಾಮರ್ಥ್ಯ ಮೆರೆಯುವುದು ಖಚಿತ. ಅವರ ಮೇಲೆ ವಿಶ್ವಾಸವಿಟ್ಟು ಬೆಂಬಲಿಸಬೇಕು' ಎಂದರು.

'ಎಲ್ಲರೂ ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿದ್ದಾರೆ. ಸಾಮರ್ಥ್ಯ ಪಣಕ್ಕೊಡ್ಡಲು ಇಷ್ಟಪಡುತ್ತಾರೆ. ಆದ್ದರಿಂದ ತಾಳ್ಮೆಯಿಂದ ಇರಬೇಕು' ಎಂದರು.

ಪಿಚ್ ಕುರಿತು ಪ್ರತಿಕ್ರಿಯಿಸಿದ ನಾಯರ್, 'ಪಿಚ್‌ಗಳನ್ನು ಕ್ಯುರೇಟರ್‌ಗಳಷ್ಟೇ ಸಿದ್ಧಪಡಿಸುತ್ತಾರೆ. ನಾವು ಯಾವತ್ತೂ ಇಂತಹದೇ ಪಿಚ್ ಬೇಕೆಂದು ಕೇಳಿಲ್ಲ. ಯಾವುದೇ ರೀತಿಯ ಪಿಚ್ ಇರಲಿ. ವಾತಾವರಣ ಇರಲಿ. ಆಡುವುದಷ್ಟೇ ನಮ್ಮ ಕೆಲಸ. ನಾವು ಇರುವ ಪರಿಸ್ಥಿತಿಗೆ ಹೊಂದಿಕೊಂಡು ಆಡಲು ಎಲ್ಲ ರೀತಿಯಿಂದಲೂ ಪ್ರಯತ್ನಿಸುತ್ತೇವೆ' ಎಂದರು.


ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ, ಆರ್. ಅಶ್ವಿನ್ ಮತ್ತು ವಿರಾಟ್ ಕೊಹ್ಲಿ ಅವರು ತಾಲೀಮು ನಡೆಸಿದರು ಎಎಫ್‌ಪಿ ಚಿತ್ರ

35 ಬೌಲರ್‌ಗಳು... ಒಬ್ಬ ಸಿಲ್ಲಿ ಪಾಯಿಂಟ್...

ಮುಂಬೈ: ನ್ಯೂಜಿಲೆಂಡ್ ಎದುರಿನ ಮೂರನೇ ಟೆಸ್ಟ್ ಪಂದ್ಯಕ್ಕೆ ಭಾರತ ತಂಡವು ಬುಧವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಸಿದ ತಾಲೀಮಿನಲ್ಲಿ ಒಂದಿಷ್ಟು ಸ್ವಾರಸ್ಯಕರ ಸಂಗತಿಗಳು ಕಂಡವು.

ಮೊದಲನೇಯದಾಗಿ; ಮುಂಬೈ ಕ್ರಿಕೆಟ್ ಸಂಸ್ಥೆಯು (ಎಂಸಿಎ) ನೆಟ್‌ನಲ್ಲಿ ಬೌಲಿಂಗ್ ಮಾಡಲು ಸ್ಥಳೀಯ 35 ಬೌಲರ್‌ಗಳನ್ನು ಕರೆಸಿತ್ತು. ಭಾರತ ತಂಡವು ಅಭ್ಯಾಸ ಆರಂಭಿಸುವ ಮುನ್ನ ನ್ಯೂಜಿಲೆಂಡ್ ಪಡೆಯು ಕೇವಲ ಅರ್ಧಗಂಟೆ ಮಾತ್ರ ಅಭ್ಯಾಸ ಮಾಡಿತು. ಆದರೆ ಅವರಿಗೆ ಬೆರಳಣಿಕೆಯಷ್ಟು ಸಂಖ್ಯೆಯ ನೆಟ್ ಬೌಲರ್‌ಗಳು ಇದ್ದರು.

ಭಾರತ ತಂಡವನ್ನು ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. ಆಟಗಾರರು, ಕೋಚ್‌ಗಳು ಪರಸ್ಪರ ದೀರ್ಘ ಸಂವಾದಗಳಲ್ಲಿ ತೊಡಗಿದ್ದರು. ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್ ಮತ್ತು ರೋಹಿತ್ ಶರ್ಮಾ ಅವರು ಮೊದಲಿಗೆ ಥ್ರೋಡೌನ್ ಪರಿಣತರ ಎಸೆತಗಳನ್ನು ಎದುರಿಸಿದರು. ನಂತರ ವೇಗದ ಬೌಲರ್‌ಗಳ ಎದುರು ಬ್ಯಾಟಿಂಗ್ ಮಾಡಿದರು.

ನೆಟ್ಸ್‌ನಲ್ಲಿ ಬ್ಯಾಟರ್‌ಗಳಿಗೆ ಸ್ಪಿನ್ನರ್‌ಗಳು ಬೌಲಿಂಗ್ ಮಾಡಲು ಆರಂಭಿಸಿದಾಗ ವಿಕೆಟ್‌ಕೀಪರ್ ಇದ್ದರು. ಒಂದು ಹಂತದಲ್ಲಿ ಸಿಲ್ಲಿ ಪಾಯಿಂಟ್ ಫೀಲ್ಡರ್ ಅನ್ನು ಕೂಡ ನಿಯೋಜಿಸಲಾಯಿತು.

ತಂಡದ ಬೌಲರ್‌ಗಳು ಸರದಿಯಲ್ಲಿ ತಮ್ಮ ಅಭ್ಯಾಸ ನಡೆಸಿದರು. ಆದರೆ ಬೂಮ್ರಾ ಬೌಲಿಂಗ್ ಅಭ್ಯಾಸ ಮಾಡಲಿಲ್ಲ. ಬದಲಿಗೆ ದೀರ್ಘ ಸಮಯದವರೆಗೆ ಬ್ಯಾಟಿಂಗ್ ಮಾಡಿದರು. ಈ ಹಂತದಲ್ಲಿ ಅವರು ನಾಯಕ ರೋಹಿತ್ ಅವರೊಂದಿಗೆ ಮಾತುಕತೆ ನಡೆಸುತ್ತಿದ್ದರು. ಬೌಲರ್‌ಗಳಾದ ಆಕಾಶ್ ದೀಪ್ ಮತ್ತು ಮೊಹಮ್ಮದ್ ಸಿರಾಜ್ ಅವರು ಪೂರ್ಣಪ್ರಮಾಣದಲ್ಲಿ ಬೌಲಿಂಗ್ ಅಭ್ಯಾಸ ಮಾಡಿದರು.

ಇದರಿಂದಾಗಿ ಈ ಪಂದ್ಯದಲ್ಲಿ ಬೂಮ್ರಾಗೆ ವಿಶ್ರಾಂತಿ ಕೊಡುವ ಸಾಧ್ಯತೆ ದಟ್ಟವಾಗಿದೆ. ಮುಂಬರುವ ಆಸ್ಟ್ರೇಲಿಯಾ ಪ್ರವಾಸದ ದೃಷ್ಟಿಯಿಂದ ಬಿಡುವು ನೀಡಬಹುದು. ಅವರ ಬದಲಿಗೆ ಆಕಾಶ್ ಅಥವಾ ಸಿರಾಜ್ ಕಣಕ್ಕಿಳಿಯಬಹುದು. ಇಲ್ಲಿಯ ಪಿಚ್‌ನಲ್ಲಿ ಇಬ್ಬರು ಮಧ್ಯಮವೇಗಿಗಳಿಗೆ ಅವಕಾಶ ಕೊಡುವ ನಿರೀಕ್ಷೆ ಇದೆ.

ಸಂಕಷ್ಟದಲ್ಲಿ ಬಾಂಗ್ಲಾ

ಚಟ್ಟೊಗ್ರಾಮ್ (ಬಾಂಗ್ಲಾದೇಶ), (ಎಪಿ): ದಕ್ಷಿಣ ಆಫ್ರಿಕಾ ತಂಡ, ಎರಡನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದ ಎರಡನೇ ದಿನವಾದ ಬುಧವಾರ ಬಾಂಗ್ಲಾದೇಶ ವಿರುದ್ಧ ಬಿಗಿ ಹಿಡಿತ ಸಾಧಿಸಿದೆ. 6 ವಿಕೆಟ್‌ಗೆ 575 ರನ್‌ಗಳ ಬೃಹತ್ ಮೊತ್ತಕ್ಕೆ ಡಿಕ್ಲೇರ್ ಮಾಡಿಕೊಂಡ ದಕ್ಷಿಣ ಆಫ್ರಿಕಾ, ನಂತರ ಆತಿಥೇಯರ 4 ವಿಕೆಟ್‌ಗಳನ್ನು 38 ರನ್‌ಗಳಾಗುವಷ್ಟರಲ್ಲಿ ಪಡೆಯಿತು.

ಆರಂಭ ಆಟಗಾರ ಟೋನಿ ಡಿ ಝೋರ್ಜಿ 177 ರನ್ ಹೊಡೆದರೆ, ಆಲ್‌ರೌಂಡರ್ ವಿಯಾನ್ ಮುಲ್ಡರ್ ಅಜೇಯ 105 ರನ್ (150ಎ, 4x8, 6x4) ಗಳಿಸಿದರು. ಮೊದಲ ದಿನ ಟ್ರಿಸ್ಟನ್ ಸ್ಟಬ್ಸ್ 106 ರನ್ ಗಳಿಸಿದ್ದರು. ಎರಡನೇ ದಿನ ಮುಲ್ಡರ್ ಮತ್ತು ಸೆನುರಾನ್ ಮುತ್ತುಸಾಮಿ (ಔಟಾಗದೇ 68, 75ಎ) ಅವರು ಮುರಿಯದ ಏಳನೇ ವಿಕೆಟ್‌ಗೆ 152 ರನ್ ಸೇರಿಸಿದ್ದರು. ಇದು ಮುತ್ತುಸಾಮಿ ಅವರಿಗೆ ಮೊದಲ ಅರ್ಧ ಶತಕ.

ಎಡಗೈ ಸ್ಪಿನ್ನರ್ ತೈಜುಲ್ ಇಸ್ಲಾಂ 198 ರನ್ನಿಗೆ 5 ವಿಕೆಟ್ ಪಡೆದರು. ಇದು ಅವರಿಗೆ ಸತತ ಎರಡನೇ ಐದು ವಿಕೆಟ್ ಗೊಂಚಲು.

ಕಗಿಸೊ ರಬಾಡ ನಂತರ ಬೇಗನೇ ಎರಡು ವಿಕೆಟ್ ಪಡೆದರು. ಡೇನ್ ಪೀಟರ್ಸನ್, ಎಡಗೈ ಸ್ಪಿನ್ನರ್ ಕೇಶವ ಮಹಾರಾಜ್ ಒಂದೊಂದು ವಿಕೆಟ್ ಗಳಿಸಿದರು. ಮೊಮಿನುಲ್ ಹಕ್ (ಔಟಾಗದೆ 6) ಮತ್ತು ನಾಯಕ ನಜ್ಮುಲ್ ಹುಸೇನ್ ಶಾಂತೊ (ಔಟಾಗದೆ 4) ಕ್ರೀಸ್‌ನಲ್ಲಿದ್ದರು.

ಸ್ಕೋರುಗಳು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 144.2 ಓವರುಗಳಲ್ಲಿ 6 ವಿಕೆಟ್‌ಗೆ 575 (ಟೋನಿ ಡಿ ಝೋರ್ಜಿ 177, ಟ್ರಿಸ್ಟನ್ ಸ್ಟಬ್ಸ್ 106, ಡೇವಿಡ್ ಬೆಡಿಂಗ್‌ಹ್ಯಾಮ್ 59, ವಿಯಾನ್ ಮುಲ್ಡರ್ ಔಟಾಗದೇ 105, ಸೆನುರಾನ್ ಮುತ್ತುಸಾಮಿ ಔಟಾಗದೇ 68; ತೈಜುಲ್ ಇಸ್ಲಾಂ 198ಕ್ಕೆ5); ಬಾಂಗ್ಲಾದೇಶ: 9 ಓವರುಗಳಲ್ಲಿ 4 ವಿಕೆಟ್‌ಗೆ 38

ಕ್ರಿಕೆಟ್: ಪ್ರಸಿದ್ಧ, ಈಶ್ವರನ್ ಮೇಲೆ ಕಣ್ಣು

ಮೆಕೆ, ಆಸ್ಟ್ರೇಲಿಯಾ (ಪಿಟಿಐ): ಭಾರತ ಎ ಮತ್ತು ಆಸ್ಟ್ರೇಲಿಯಾ ಎ ತಂಡಗಳ ನಡುವಣ ಗುರುವಾರ ಚತುರ್ದಿನ ಕ್ರಿಕೆಟ್ ಪಂದ್ಯವು ಆರಂಭವಾಗಲಿದೆ.

ಭಾರತ ಎ ತಂಡದಲ್ಲಿರುವ ಬ್ಯಾಟರ್ ಅಭಿಮನ್ಯು ಈಶ್ವರನ್, ನಿತೀಶ್ ಕುಮಾರ್ ರೆಡ್ಡಿ ಹಾಗೂ ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಅವರ ಮೇಲೆ ಎಲ್ಲರ ಚಿತ್ತ ನೆಟ್ಟಿದೆ.

ನ. 22ರಿಂದ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿ ಆರಂಭವಾಗಲಿದೆ. ಅದರಿಂದಾಗಿ ಎ ತಂಡಗಳ ನಡುವಣ ಪಂದ್ಯದಲ್ಲಿ ಮಿಂಚುವ ಆಟಗಾರರಿಗೆ ಭಾರತ ಸೀನಿಯರ್ ತಂಡದಲ್ಲಿ ಆಡುವ ಅವಕಾಶ ಗಿಟ್ಟಿಸುವ ಸಾಧ್ಯತೆ ಇದೆ.

ನಿಕೊಲಸ್ ಪೂರನ್, ಮಯಂಕ್ ಯಾದವ್ ಮುಂದುವರಿಕೆ

ಲಖನೌ ತಂಡದಿಂದ ರಾಹುಲ್‌ಗೆ ಅರ್ಧಚಂದ್ರ?

ನವದೆಹಲಿ (ಪಿಟಿಐ): ಕಡಿಮೆ ಸ್ಟ್ರೈಕ್ ರೇಟ್ ಮತ್ತು ಟಿ20 ಕ್ರಿಕೆಟ್‌ನ ಬದಲಾವಣೆಗಳಿಗೆ ಹೊಂದಿಕೊಳ್ಳದ ಕೆ.ಎಲ್. ರಾಹುಲ್ ಅವರು ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಸ್ಥಾನ ಕಳೆದುಕೊಳ್ಳುವ ಸಾಧ್ಯತೆಯಿದೆ.

ಕಳೆದ ಆಗಸ್ಟ್‌ನಲ್ಲಿಯೇ ಅವರು ನಾಯಕತ್ವ ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ಪಿಟಿಐ ವರದಿ ಮಾಡಿತ್ತು. ಆದರೆ ಈಗ ಅವರನ್ನು ತಂಡವು ಉಳಿಸಿಕೊಳ್ಳಲು ಮನಸ್ಸು ಮಾಡಿಲ್ಲ ಎಂಬುದು ಮೂಲಗಳಿಂದ ತಿಳಿದುಬಂದಿದೆ.

ತಂಡದಲ್ಲಿರುವ ಸ್ಫೋಟಕ ಶೈಲಿಯ ಬ್ಯಾಟರ್ ನಿಕೊಲಸ್ ಪೂರನ್ ಅವರನ್ನು ಉಳಿಸಿಕೊಳ್ಳಲು ಆದ್ಯತೆ ನೀಡಿದೆ. ಅವರೊಂದಿಗೆ ವೇಗಿ ಮಯಂಕ್ ಯಾದವ್, ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಮತ್ತು ಆಯುಷ್ ಬಡೋಣಿ ಅವರನ್ನೂ ಉಳಿಸಿಕೊಳ್ಳಲಿದೆ.

ಐಪಿಎಲ್ ತಂಡಗಳಿಗೆ ತಾವು ಉಳಿಸಿಕೊಳ್ಳಲಿರುವ ಮತ್ತು ಬಿಡ್‌ಗೆ ಬಿಡುಗಡೆ ಮಾಡಲಿರುವ ಆಟಗಾರರ ಅಂತಿಮ ಪಟ್ಟಿಯನ್ನು ನೀಡಲು ಗುರುವಾರ ಕೊನೆಯ ದಿನವಾಗಿದೆ. ಬುಧವಾರ ಲಖನೌ ತಂಡದ ಸಭೆಯಲ್ಲಿ ಮುಖ್ಯ ಕೋಚ್ ಜಸ್ಟಿನ್ ಲ್ಯಾಂಗರ್ ಮತ್ತು ಮೆಂಟರ್ ಜಹೀರ್ ಖಾನ್ ಅವರು ನಿಕೊಲಸ್ ಪೂರನ್ ಅವರನ್ನು ಉಳಿಸಿಕೊಳ್ಳಲು ಮೊದಲ ಆದ್ಯತೆ ನೀಡಿದರೆನ್ನಲಾಗಿದೆ.

'ಕಳೆದ ಮೂರು ವರ್ಷಗಳಲ್ಲಿ ಆಟಗಾರರು ಮಾಡಿದ ಸಾಧನೆಯೊಂದೇ ಮಾನದಂಡವಾಗಿ ಇಟ್ಟುಕೊಳ್ಳಲಾಗಿತ್ತು. ವಿಶೇಷವಾಗಿ ರಾಹುಲ್ ಅವರ ಬ್ಯಾಟಿಂಗ್ ಶೈಲಿ ಮತ್ತು ಸ್ಟ್ರೈಕ್ ರೇಟ್‌ಗಳ ವಿಶ್ಲೇಷಣೆ ನಡೆಯಿತು. ಈ ಎಲ್ಲ ಅಂಕಿ ಸಂಖ್ಯೆಗಳೊಂದಿಗೆ ಸಮಾಲೋಚನೆ ನಡೆಸಿದ ಲ್ಯಾಂಗರ್ ಮತ್ತು ಜಹೀರ್ ನಿರ್ಧಾರಕ್ಕೆ ಬಂದಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ರಾಹುಲ್ ಅವರ ಸ್ಟ್ರೈಕ್ ರೇಟ್‌ಗಳು ಕ್ರಮವಾಗಿ 136.13 (616 ರನ್), 113.23 (274 ರನ್) ಮತ್ತು 135.38 (520 ರನ್) ಇವೆ. ಆದರೆ ಇವತ್ತಿನ ಟಿ20 ಕ್ರಿಕೆಟ್‌ಗೆ ತಕ್ಕ ಸ್ಟ್ರೈಕ್‌ರೇಟ್‌ಗಳು ಇವು ಅಲ್ಲ' ಎಂದು ತಂಡದ ಮೂಲಗಳು ಹೇಳಿವೆ.

ಅದೇ ಪೂರನ್ ಅವರ ಸ್ಟ್ರೈಕ್ ರೇಟ್‌ಗಳು ಮೂರು ವರ್ಷಗಳಲ್ಲಿ ರಾಹುಲ್‌ಗಿಂತ ಹೆಚ್ಚಾಗಿವೆ. 2022ರಲ್ಲಿ 144.34 ರಷ್ಟಿತ್ತು. ನಂತರದ ಎರಡು ಆವೃತ್ತಿಗಳಲ್ಲಿ ಕ್ರಮವಾಗಿ 172.95 ಮತ್ತು 178.21 ಸ್ಟ್ರೈಕ್ ರೇಟ್ ದಾಖಲಿಸಿದ್ದಾರೆ.

'2024ರಲ್ಲಿ ರಾಹುಲ್ ಅವರು 520 ರನ್ ಗಳಿಸಿದರು. ಆದರೆ ತಂಡಕ್ಕೆ ಪ್ಲೇ ಆಫ್ ಅರ್ಹತೆ ಗಿಟ್ಟಿಸಿಕೊಡಲು ಈ ಸಾಧನೆ ಸಾಕಾಗಲಿಲ್ಲ. ಪವರ್‌ಪ್ಲೇ ಅವಧಿಯ ಬ್ಯಾಟಿಂಗ್ ವೈಫಲ್ಯದಿಂದಾಗಿ ನಾವು ಬಹಳಷ್ಟು ಪಂದ್ಯಗಳನ್ನು ಸೋತೆವು. ಗೆದ್ದ ಪಂದ್ಯಗಳೂ ಪವರ್‌ಪ್ಲೇ ಆಟದಿಂದಲ್ಲ' ಎಂದು ಹೇಳಿದರು.

ಪೂರನ್ ಅವರು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಾರೆ. ಕಡಿಮೆ ಓವರ್‌ಗಳು ಇರುವ ಕಠಿಣ ಸಮಯದಲ್ಲಿ ಅವರು ಮಿಂಚಿದ್ದಾರೆ. ವೆಸ್ಟ್ ಇಂಡೀಸ್ ತಂಡದ ನಾಯಕತ್ವ ಕೂಡ ನಿಭಾಯಿಸಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ನಡೆ ನಿಗೂಢ: ಡೆಲ್ಲಿ ಕ್ಯಾಪಿಟಲ್ಸ್ ತಂಡವು ರಿಷಭ್ ಪಂತ್ ಅವರನ್ನು ಉಳಿಸಿಕೊಳ್ಳುವ ಕುರಿತು ರಹಸ್ಯ ಕಾಪಾಡಿಕೊಂಡಿದೆ. ಪಂತ್ ನಾಯಕರಾಗಿದ್ದಾಗ ಕಾರ್ಯನಿರ್ವಹಿಸಿದ್ದ ಮುಖ್ಯ ಕೋಚ್ ರಿಕಿ ಪಾಂಟಿಂಗ್, ನಿರ್ದೇಶಕ ಸೌರವ್ ಗಂಗೂಲಿ ಮತ್ತು ಸಹಾಯಕ ಕೋಚ್ ಪ್ರವೀಣ್ ಆಮ್ರೆ ಈ ವರ್ಷ ಡೆಲ್ಲಿ ತಂಡದಲ್ಲಿಲ್ಲ. ಆದ್ದರಿಂದ ಪಂತ್ ಕೂಡ ಬಿಡುಗಡೆಯಾಗುವ ಮಾತು ಕೇಳಿಬಂದಿದ್ದವು.

'ಒಂದೊಮ್ಮೆ ಪಂತ್ ಬಿಡ್ ಪ್ರಕ್ರಿಯೆಯಲ್ಲಿ ಲಭ್ಯರಾದರೆ, ಫ್ರಾಂಚೈಸಿಗಳು ತುರುಸಿನ ಪೈಪೋಟಿ ನಡೆಸಿ ಖರೀದಿ ಮಾಡುತ್ತವೆ. ₹ 25 ಕೋಟಿ ಮೌಲ್ಯ ದಾಟಿ ಐಪಿಎಲ್ ದಾಖಲೆಯೂ ನಿರ್ಮಾಣವಾಗಬಹುದು' ಎಂದು ಮೂಲಗಳು ಅಭಿಪ್ರಾಯಪಟ್ಟಿವೆ.


ಕೆ.ಎಲ್. ರಾಹುಲ್

ಆರ್‌ಸಿಬಿಗೆ ಡ್ಯಾನಿ ವ್ಯಾಟ್

ಬೆಂಗಳೂರು: ಇಂಗ್ಲೆಂಡ್ ತಂಡದ ಆಟಗಾರ್ತಿ ಡ್ಯಾನಿ ವ್ಯಾಟ್ ಅವರು ಮುಂಬರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಲಿದ್ದಾರೆ.

ವ್ಯಾಟ್ ಅವರನ್ನು ಹೋದ ವರ್ಷ ನಡೆದ ಮೊದಲ ಡಬ್ಲ್ಯುಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಯುಪಿ ವಾರಿಯರ್ಸ್ ತಂಡವು ₹ 30 ಲಕ್ಷ ಮೌಲ್ಯಕ್ಕೆ ಸೇರ್ಪಡೆ ಮಾಡಿಕೊಂಡಿತ್ತು. ಈಗ ಅದೇ ಮೊತ್ತಕ್ಕೆ ಆರ್‌ಸಿಬಿಯು ಟ್ರೇಡ್ ವಿಂಡೋ ಮೂಲಕ ಸೇರಿಸಿಕೊಂಡಿದೆ.

'ಬೀಸು ಹೊಡೆತಗಳ ಬ್ಯಾಟರ್ ಡ್ಯಾನಿ ವ್ಯಾಟ್ ಅವರು ಆರ್‌ಸಿಬಿ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಅವರನ್ನು ಟ್ರೇಡ್ ವಿಂಡೋ ಮೂಲಕ ಸೇರ್ಪಡೆ ಮಾಡಲಾಗಿದೆ. ಯುಪಿ ವಾರಿಯರ್ಸ್‌ನಿಂದ ಪಡೆಯಲಾಗಿದೆ' ಎಂದು ಡಬ್ಲ್ಯುಪಿಎಲ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವ್ಯಾಟ್ ಅವರು 164 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ್ದಾರೆ. ಇಂಗ್ಲೆಂಡ್ ತಂಡದಲ್ಲಿ ಅತಿ ಹೆಚ್ಚು ಟಿ20 ಪಂದ್ಯಗಳನ್ನು ಆಡಿದ ಆಟಗಾರ್ತಿ ಎಂಬ ಹೆಗ್ಗಳಿಕೆ ಅವರದ್ದಾಗಿದೆ.


ಡ್ಯಾನಿ ವ್ಯಾಟ್

ರಾಜ್ಯದ ನೆರವಿಗೆ ಧ್ರುವ್, ಧನುಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧ್ರುವ್ ಪ್ರಭಾಕರ್ (ಅಜೇಯ 33, 114ಎ) ಮತ್ತು ಧನುಷ್ ಗೌಡ (ಅಜೇಯ 30, 54ಎ) ಅವರ ಬೇರೂರಿ ಆಡಿದ ಪರಿಣಾಮ ಕರ್ನಾಟಕ ತಂಡ ಕರ್ನಲ್ ಸಿ.ಕೆ. ನಾಯ್ಡು (23 ವರ್ಷದೊಳಗಿನವರ) ಟ್ರೋಫಿ ಪಂದ್ಯದಲ್ಲಿ ಮಹಾರಾಷ್ಟ್ರ ವಿರುದ್ಧ ಅಪಾಯದಿಂದ ಪಾರಾಯಿತು.

ಆಲೂರಿನ ಕೆಎಸ್‌ಸಿಎ ಮೈದಾನದಲ್ಲಿ ಬುಧವಾರ ಡ್ರಾ ಆದ ಈ ಪಂದ್ಯದಲ್ಲಿ ಕರ್ನಾಟಕ ಮೊದಲ ಇನಿಂಗ್ಸ್ ಮುನ್ನಡೆಗಾಗಿ 3 ಪಾಯಿಂಟ್ ಪಡೆಯಿತು.

ಪ್ರತಿಹೋರಾಟ ತೋರಿದ ಮಹಾರಾಷ್ಟ್ರ ಒಂದು ಪಾಯಿಂಟ್ ಪಡೆಯಿತು. ಮಂಗಳವಾರ ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 187 ರನ್ ಗಳಿಸಿದ್ದ ಮಹಾರಾಷ್ಟ್ರ ಕೊನೆ ದಿನವಾದ ಬುಧವಾರ 17 ಓವರುಗಳ ಆಟದಲ್ಲಿ 231 ರನ್‌ಗಳಿಗೆ ಆಲೌಟ್ ಆಯಿತು. ಗೆಲ್ಲಲು 196 ರನ್‌ಗಳ ಗುರಿ ಎದುರಿಸಿದ್ದ ಆತಿಥೇಯ ತಂಡ ಲೆಗ್ ಸ್ಪಿನ್ನರ್ ಶುಭಂ ಮೇದ್ ಮತ್ತು ಎಡಗೈ ಸ್ಪಿನ್ನರ್ ವಿಕಿ ಓಸ್ವಾಲ್ ದಾಳಿಗೆ ಸಿಲುಕಿ ಒಂದು ಹಂತದಲ್ಲಿ 118 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿತ್ತು. ಆದರೆ ಧ್ರುವ್ ಮತ್ತು ಧನುಷ್ ಮುರಿಯದ ಒಂಬತ್ತನೇ ವಿಕೆಟ್‌ಗೆ 128 ಎಸೆತಗಳಲ್ಲಿ 49 ರನ್ ಸೇರಿಸಿ ಅಪಾಯ ದೂರ ಮಾಡಿದರು.

ಸ್ಕೋರು: ಮೊದಲ ಇನಿಂಗ್ಸ್: ಮಹಾರಾಷ್ಟ್ರ: 263 ಮತ್ತು 91 ಓವರುಗಳಲ್ಲಿ 231 (ಎ.ಎ.ಪವಾರ್ 48, ಎ.ಎಸ್.ನಲವಡೆ 64; ಶಶಿ ಕುಮಾರ್ 64ಕ್ಕೆ4, ಪಾರಸ್ 71ಕ್ಕೆ4); ಕರ್ನಾಟಕ: 299 ಮತ್ತು 71 ಓವರುಗಳಲ್ಲಿ 8ಕ್ಕೆ 167 (ಧ್ರುವ್ ಔಟಾಗದೆ 33, ಧನುಷ್ ಔಟಾಗದೆ 30; ಶುಭಂ 79ಕ್ಕೆ3, ವಿಕಿ ಓಸ್ವಾಲ್ (52ಕ್ಕೆ4).

ಐಸಿಸಿ ಟೆಸ್ಟ್ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೇರಿದ ವೇಗಿ

ಬೂಮ್ರಾ ಹಿಂದಿಕ್ಕಿದ ರಬಾಡ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ವೇಗಿ ಕಗಿಸೊ ರಬಾಡ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಅವರು ಈ ಹಾದಿಯಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ ಅವರನ್ನು ಹಿಂದಿಕ್ಕಿದ್ದಾರೆ.


ಬುಧವಾರ ಪ್ರಕಟವಾದ ರ‍್ಯಾಂಕಿಂಗ್ ಪಟ್ಟಿಯಲ್ಲಿ ರಬಾಡ 860 ರೇಟಿಂಗ್ ಅಂಕ ಗಳಿಸಿ ಮೊದಲ ಸ್ಥಾನಕ್ಕೇರಿದ್ದಾರೆ. ಒಟ್ಟು 3 ಸ್ಥಾನಗಳ ಬಡ್ತಿಯನ್ನು ಅವರು ಗಳಿಸಿದ್ದಾರೆ. ಆಸ್ಟ್ರೇಲಿಯಾದ ಜೋಷ್ ಹ್ಯಾಜಲ್‌ವುಡ್ (847), ಭಾರತದ ಬೂಮ್ರಾ (846) ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿದ್ದಾರೆ. ಜೋಷ್ ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ. ಬೂಮ್ರಾ ಎರಡು ಸ್ಥಾನ ಕೆಳಗಿಳಿದಿದ್ದಾರೆ. ಆರ್. ಅಶ್ವಿನ್ ನಾಲ್ಕನೇ ಸ್ಥಾನಕ್ಕಿಳಿದಿದ್ದಾರೆ. ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ (820) ಐದನೇ ಸ್ಥಾನ ಪಡೆದಿದ್ದಾರೆ.

ರಬಾಡ ಅವರು ಪ್ರಸ್ತುತ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬಲಗೈ ವೇಗಿ ರಬಾಡ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 300 ವಿಕೆಟ್‌ಗಳ ಮೈಲಿಗಲ್ಲು ತಲುಪಿದ್ದರು. ಈಚೆಗೆ ಮೀರಪುರದಲ್ಲಿ ನಡೆದಿದ್ದ ಬಾಂಗ್ಲಾದೇಶ ಎದುರಿನ ಟೆಸ್ಟ್‌ನಲ್ಲಿ ಏಳು ವಿಕೆಟ್ ಗಳಿಸಿದ್ದರು.

ತಂಡ ವಿಭಾಗದಲ್ಲಿ ಭಾರತ ತಂಡವು (3498 ಅಂಕ) ಎರಡನೇ ಸ್ಥಾನ ಪಡೆಯಿತು. ಆಸ್ಟ್ರೇಲಿಯಾ (3715 ಅಂಕ) ಮೊದಲ ಸ್ಥಾನಕ್ಕೇರಿದೆ.

ಟೆಸ್ಟ್ ಕ್ರಿಕೆಟ್ ಬ್ಯಾಟಿಂಗ್ ವಿಭಾಗದಲ್ಲಿ ಭಾರತದ ಯಶಸ್ವಿ ಜೈಸ್ವಾಲ್ ಅವರು 3ನೇ ಸ್ಥಾನಕ್ಕೇರಿದ್ದಾರೆ. ಇಂಗ್ಲೆಂಡ್‌ನ ಜೋ ರೂಟ್ ಮತ್ತು ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಅವರು ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿದ್ದಾರೆ. ವಿರಾಟ್ ಕೊಹ್ಲಿ ಅವರು 6 ಸ್ಥಾನಗಳಷ್ಟು ಕುಸಿದಿದ್ದು 14ರಲ್ಲಿದ್ದಾರೆ. ಶುಭಮನ್ ಗಿಲ್ 20ನೇ ಸ್ಥಾನದಲ್ಲಿದ್ದಾರೆ.

ಆಲ್‌ರೌಂಡರ್ ವಿಭಾಗದಲ್ಲಿ ಭಾರತದ ರವೀಂದ್ರ ಜಡೇಜ ಮತ್ತು ಆರ್. ಅಶ್ವಿನ್ ಅವರು ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನದಲ್ಲಿದ್ದಾರೆ. ಅಕ್ಷರ್ ಪಟೇಲ್ ಏಳನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.


ಕಗಿಸೊ ರಬಾಡ

ಚಳಿಗಾಲದ ರೇಸ್ ನಾಳೆಯಿಂದ

ಬೆಂಗಳೂರು: ಬೆಂಗಳೂರು ಚಳಿಗಾಲದ ರೇಸ್‌ಗಳು ಶುಕ್ರವಾರ (ನವೆಂಬರ್ 1) ಆರಂಭವಾಗಲಿವೆ.

ಈ ಋತುವಿನಲ್ಲಿ 24 ರೇಸ್ ದಿನಗಳನ್ನು ಏರ್ಪಡಿಸಿದ್ದು, ಮುಂದಿನ ವರ್ಷ ಮಾರ್ಚ್ 22ರಂದು ಮುಕ್ತಾಯಗೊಳ್ಳಲಿದೆ ಎಂದು ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸ್ಟೀವರ್ಡ್ ಕೆ.ಎ.ಜಗದೀಶ್ ತಿಳಿಸಿದರು.

'ಈ ಅವಧಿಯ ಒಟ್ಟು ಬಹುಮಾನದ ಮೊತ್ತವು ಸುಮಾರು ರೂ.15.47 ಕೋಟಿ ಇರಲಿದೆ. ಸ್ಥಳೀಯ ಕುದುರೆಗಳಿಗೆ ಅಪೂರ್ವ ಪ್ರದರ್ಶನ ಸಾಮರ್ಥ್ಯದ ಮೇರೆಗೆ ಶೇ.15ರಷ್ಟು ಪ್ರೋತ್ಸಾಹ ಧನ ನೀಡಲಾಗುತ್ತಿದೆ' ಎಂದು ತಿಳಿಸಿದರು.

'ಈ ಚಳಿಗಾಲದಲ್ಲಿ ಪ್ರಮುಖ ರೇಸ್‌ಗಳಾದ ಬೆಂಗಳೂರು 1000 ಗಿನ್ನಿಸ್ (ನ.30), ಬೆಂಗಳೂರು 2000 ಗಿನ್ನಿಸ್ (ನ. 14) ಮತ್ತು ಬೆಂಗಳೂರು ಓಕ್ಸ್ (ನ. 4) ಏರ್ಪಡಿಸಲಾಗಿದೆ. ಪ್ರತಿಷ್ಠಿತವಾದ ಬೆಂಗಳೂರು ಡರ್ಬಿ ರೇಸ್ ಜನವರಿ 26ರಂದು ನಡೆಸಲಾಗುತ್ತದೆ. ಸ್ಪ್ರಿಂಟರ್ ಮತ್ತು ಸ್ಪ್ರಿಂಟರ್ಸ್ ಟ್ರಯಲ್ ಸ್ಟೇಕ್ ರೇಸ್‌ಗಳನ್ನು ಫೆಬ್ರುವರಿ 7ರಂದು ಆಯೋಜಿಸಲಾಗಿದೆ' ಎಂದು ಹೇಳಿದರು.

'ಈ ಅವಧಿಯಲ್ಲಿ ಅಲೀಯನ್ಸ್ ಹಾಗೂ ಎ ಮತ್ತು ಬಿ ವರ್ಗ ಸೇರಿದಂತೆ ಸುಮಾರು 109 ಜಾಕಿಗಳಿಗೆ ಬೆಂಗಳೂರು ರೇಸ್‌ಗಳಲ್ಲಿ ಸವಾರಿ ಮಾಡಲು ಪರವಾನಗಿ ನೀಡಲಾಗಿದೆ. ಇವರೊಂದಿಗೆ ಪರವಾನಗಿ ಪಡೆದಿರುವ ಎ ವರ್ಗದ 24 ಟ್ರೇನರ್‌ಗಳು ಸಹ ಈ ಅವಧಿಯಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಫುಟ್‌ಬಾಲ್: ಕಿಕ್‌ಸ್ಟಾರ್ಟ್‌ಗೆ ಜಯ

ಬೆಂಗಳೂರು: ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಇಲ್ಲಿ ನಡೆಯುತ್ತಿರುವ ಅಬುನ್‌ರೈಸ್ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಕಿಕ್ ಸ್ಟಾರ್ಟ್ ತಂಡವು 3–0ಯಿಂದ ರೆಬೆಲ್ ವಿರುದ್ಧ ಗೆದ್ದಿತು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 6–0ಯಿಂದ ಎಎಸ್‌ಸಿ ಸೆಂಟರ್ ತಂಡವನ್ನು ಸೋಲಿಸಿತು.

ಪ್ರೊ ಕಬಡ್ಡಿ ಲೀಗ್: ಹರಿಯಾಣ ಸ್ಟೀಲರ್ಸ್‌ಗೆ ಮಣಿದ ಯೋಧಾಸ್

ತಲೈವಾಸ್ ಜಯದಲ್ಲಿ ಮಿಂಚಿದ ನರೇಂದರ್

ಹೈದರಾಬಾದ್: ಉತ್ತಮ ಲಯದಲ್ಲಿರುವ ನರೇಂದರ್ ಕಂಡೋಲ ಅವರ ಅಮೋಘ ರೇಡಿಂಗ್ ಪ್ರದರ್ಶನದಿಂದ ಮತ್ತೊಮ್ಮೆ ಮಿಂಚಿದ ತಮಿಳ್ ತಲೈವಾಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 44– 25 ಅಂಕಗಳಿಂದ ಗುಜರಾತ್ ಜೈಂಟ್ಸ್ ತಂಡವನ್ನು ಸುಲಭವಾಗಿ ಮಣಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಈ ಪಂದ್ಯದಲ್ಲಿ ತಲೈವಾಸ್ ತಂಡ ಒಮ್ಮೆಯೂ ಗುಜರಾತ್ ತಂಡಕ್ಕೆ ಮುನ್ನಡೆ ಬಿಟ್ಟುಕೊಡಲಿಲ್ಲ. ಇದು ಹಾಲಿ ಆವೃತ್ತಿಯಲ್ಲಿ ತಲೈವಾಸ್ ತಂಡಕ್ಕೆ ಮೂರನೇ ಜಯ.

ಕಳೆದ ಪಂದ್ಯದಲ್ಲಿ ಜೈಪುರ ಪಿಂಕ್‌ಪ್ಯಾಂಥರ್ಸ್ ವಿರುದ್ಧ ಡ್ರಾ ಸಾಧಿಸಿ ಮೂರು ಅಂಕ ಗಿಟ್ಟಿಸಿದ್ದ ತಲೈವಾಸ್, ಜೈಂಟ್ಸ್ ವಿರುದ್ಧ ಪೂರ್ಣ 6 ಅಂಕ ಕಲೆಹಾಕಿತು. ಇನ್ನೊಂದೆಡೆ ಜೈಂಟ್ಸ್ ಸತತ ಎರಡನೇ ಸೋಲಿಗೆ ಗುರಿಯಾಯಿತು.

ತಲೈವಾಸ್ ಪರ ನರೇಂದರ್ 15 ಅಂಕ ಗಳಿಸಿದರೆ, ಸಚಿನ್ ಮತ್ತು ಸಾಹಿಲ್ ತಲಾ 5 ಅಂಕಗಳ ಕೊಡುಗೆ ನೀಡಿದರು. ಸೋತ ತಂಡದ ಪರ ಗುಮಾನ್ ಗರಿಷ್ಠ 7 ಅಂಕ ಗಳಿಸಿದರು.

ಪಂದ್ಯ ಮುಗಿಯಲು 10 ನಿಮಿಷ ಇರುವಾಗ ಗುಜರಾತ್ ಜೈಂಟ್ಸ್ ಪುಟಿದೇಳುವುದು ಎಂಬ ನಿರೀಕ್ಷೆ ಮೂಡಿಸಿತು. ಜೈಂಟ್ಸ್ ಸತತವಾಗಿ 5 ಅಂಕ ಗಳಿಸಿ ಹಿನ್ನಡೆಯನ್ನು 23-31ಕ್ಕೆ ಇಳಿಸಿ ಪ್ರತಿಹೋರಾಟದ ಸೂಚನೆ ನೀಡಿತು. ಆದರೆ ಸೂಪರ್ ಟ್ಯಾಕಲ್‌ನಲ್ಲಿ ಯಶಸ್ವಿಯಾದ ತಲೈವಾಸ್, ಅಂಗಣದಲ್ಲಿ ನಾಲ್ಕಕ್ಕಿಂತ ಕಡಿಮೆ ಆಟಗಾರರು ಇಲ್ಲದಂತೆ ಎಚ್ಚರವಹಿಸಿತು.

ಮೊದಲಾರ್ಧದಲ್ಲಿ ತಲೈವಾಸ್ 18-14 ಅಂಕಗಳಿಂದ ಮುನ್ನಡೆಯಲ್ಲಿತ್ತು. ಆತ್ಮವಿಶ್ವಾಸದಲ್ಲಿ ಆಟ ಮುಂದುವರಿಸಿದ ತಲೈವಾಸ್ ಆಟಗಾರರು, ಅಂಕ ಪಡೆಯುವ ಮೂಲಕ ಜೈಂಟ್ಸ್ ಮೇಲೆ ಒತ್ತಡ ಹೇರುವಲ್ಲಿ ಯಶಸ್ವಿಯಾದರು. ಈ ಹಂತದಲ್ಲಿ ಸಮಯೋಚಿತವಾಗಿ ಕೊರತೆ ಎದುರಿಸಿದ್ದ ನೀರಜ್ ಕುಮಾರ್ ಬಳಗ 25ನೇ ನಿಮಿಷ ಆಲೌಟ್ ಬಲೆಗೆ ಬಿದ್ದಿತು. ಇದರಿಂದ ಮುನ್ನಡೆಯನ್ನು 27-15ಕ್ಕೆ ಹೆಚ್ಚಿಸಿಕೊಂಡ ತಲೈವಾಸ್ ತಂಡ ಪಂದ್ಯದ ಮೇಲಿನ ಹಿಡಿತವನ್ನು ಬಿಗಿಗೊಳಿಸಿತು.

ಗುಜರಾತ್ ತಂಡದ ಹಿನ್ನಡೆ ತಗ್ಗಿಸಲು ವಾಹಿದ್, ಸೋಂಬೀರ್, ರೋಹಿತ್, ಪ್ರತೀಕ್ ಯತ್ನಿಸಿದರೂ ಎದುರಾಳಿ ತಂಡ 30 ನಿಮಿಷಗಳ ಬಳಿಕ ಮುನ್ನಡೆಯನ್ನು 12 (31-19) ಅಂಕಗಳಿಗೆ ಹೆಚ್ಚಿಸಿಕೊಂಡಿತು. ನರೇಂದರ್ ಅವರಿಗೆ ಸಚಿನ್, ನಿತೇಶ್, ಆಮಿರ್ ಮತ್ತು ಸಾಹಿಲ್ ಬೆಂಬಲ ನೀಡಿದರು.

ಸ್ಟೀಲರ್ಸ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 30–28 (ವಿರಾಮ: 11–9) ಪಾಯಿಂಟ್‌ಗಳಿಂದ ಯುಪಿ ಯೋಧಾಸ್ ತಂಡವನ್ನು ಮಣಿಸಿತು. ವಿಜೇತರ ಪರ ರೇಡರ್ ವಿನಯ್ (8), ಡಿಫೆಂಡರ್ ಸಂಜಯ್ (6) ಮಿಂಚಿದರು. ಯೋಧಾಸ್ ಪರ ಸಬ್‌ಸ್ಟಿಟ್ಯೂಟ್ ಆಟಗಾರ ಗಗನ್ ಗೌಡ (9) ಗಮನಸೆಳೆದರು.

ಗುರುವಾರದ ಪಂದ್ಯಗಳು: ಪಟ್ನಾ ಪೈರೇಟ್ಸ್ -ದಬಾಂಗ್ ಡೆಲ್ಲಿ (8.00); ಯು ಮುಂಬಾ– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 9.00)


ಗುಜರಾತ್ ಜೈಂಟ್ಸ್ ಆಟಗಾರರು, ತಮಿಳು ತಲೈವಾಸ್ ರೇಡರ್‌ನನ್ನು ಹಿಡಿಯಲು ಪ್ರಯತ್ನಿಸಿದ್ದು ಹೀಗೆ...